೨೦

ಪುಸ್ತಕ ಮನೆ

ಓದು, ಬರಹ, ಬಲ್ಲವರ ಪುಸ್ತಿಕೆ

- ರಾಯಚೂರಿನ ನೆಲದಲ್ಲಿ ಹುಡುಕಿದ ಕನ್ನಡತನ
- ನೀರಿನ ಸಂಸ್ಕೃತಿ
- ಹಿಂದುತ್ವ ಮತ್ತು ಸಾಮಾಜಿಕ ಸಾಮರಸ್ಯ
- ಗ್ರಾಮನಾಮ
- ಸಹಕಾರಿ ಸಂಘಗಳ ಹಿಂದುಮುಂದು
- ಶಿಕ್ಷಣದಲ್ಲಿ ಭಾಷೆ ಮತ್ತು ಬುದ್ಧಿವಂತಿಕೆ
- ಭಾಷೆ ಅನ್ನೋತ್ಪಾದಕವಾಗಲಿ
- ರಾಜಕಾರಣ ಮತ್ತು ತಾತ್ವಿಕ ಬದ್ಧತೆ
- ರಾಜಕೀಯ ಮತ್ತು ಮಹಿಳೆ
- ಪಾಕಿಸ್ತಾನದಲ್ಲಿ ನಾನು: ಅಪರೂಪದ ಕೃತಿ

ಸಂಪಾದಕ
ಹರಿಹರಪ್ರಿಯ

ಖಾಸಗಿ ಪ್ರಸಾರಕ್ಕಾಗಿ ಮಾತ್ರ

೨ನೇ ವರುಷದ ೮ನೇ ಪುಸ್ತಿಕೆ

ಏಪ್ರಿಲ್ ೨೦೦೮

ಪುಸ್ತಕಮನೆ

ಓದು, ಬರಹ, ಬಲ್ಲವರ ಪುಸ್ತಿಕೆ

ಬೆಲೆ : ಒಟ್ಟು 24 ಪುಸ್ತಿಕೆಗಳಿಗೆ ರೂ. 500/- (ಅಂಚೆ ವೆಚ್ಚ ಸೇರಿ)
ಬಿಡಿ ಪುಸ್ತಿಕೆಗೆ ರೂ. 20/- (ಅಂಚೆ ವೆಚ್ಚ ಸೇರಿ ರೂ. 25/-)

ಬೆಂಗಳೂರಿನ ಹೊರಗಿನವರು ಹಣವನ್ನು ಎಂ. ಓ./ಡಿ. ಡಿ. ಗಳಲ್ಲಿ ಮಾತ್ರ ಕಳಿಸಿಕೊಡಬೇಕಾಗಿ ವಿನಂತಿ

ಒಳಪುಟಗಳಲ್ಲಿ.....

ಸಂಪಾದಕ
ಪ್ರಕಾಶಕ
ಮುದ್ರಕ : ಪುಸ್ತಕಮನೆ ಹರಿಹರಪ್ರಿಯ
702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು – 560 062
ಮೊಬೈಲ್ : 9845867184 / 9242221506
e-mail : hariharapriya@gmail.com pustakamane@yahoo.com

ಮುದ್ರಣ : ಶ್ರೀರಾಮ ಪ್ರಿಂಟರ್ಸ್
ನಂ. 1, ಎಸ್.ಜಿ.ಎಸ್. ಕಾಂಪ್ಲೆಕ್ಸ್, ಚುಂಚಘಟ್ಟ ಮುಖ್ಯರಸ್ತೆ, ಕೋಣನಕುಂಟೆ, ಶ್ರೀನಿಧಿ ಶ್ರೀನಿವಾಸ
ದೇವಸ್ಥಾನದ ಹತ್ತಿರ, ಬೆಂಗಳೂರು – 560 062
ಮೊಬೈಲ್ : 9845346197

೧

ರಾಯಚೂರಿನ ನೆಲದಲ್ಲಿ ಹುಡುಕಿದ ಕನ್ನಡತನ

ಸಂಪಾದಕ

ಇತ್ತೀಚೆಗೆ ಭಾಷಣ ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತಿಲ್ಲ. ಅಷ್ಟೇ ಅಲ್ಲ, ಯಾವ(ರ) ಸಮಾರಂಭಕ್ಕೂ ಹೋಗುವ ಮನಸ್ಸಾಗುತ್ತಿಲ್ಲ. ಇದಕ್ಕೆ ಬೇರೆ ಯಾರೂ ಕಾರಣರಲ್ಲ. ನಾನೇ. ಒಪ್ಪಿಕೊಳ್ಳುವ ಭಾಷಣ - ಸಮಾರಂಭಕ್ಕೆ ಎಷ್ಟೋ ಕಾಲ ಸಿದ್ಧತೆ ನಡೆಸಿಕೊಂಡು ಹೋದರು, ವಿಷಯದ ಜ್ಞಾನವಿಲ್ಲದವರೇ ವೇದಿಕೆ ಮೇಲೆ ತುಂಬಿ ತುಳುಕಿ, ಯಾವ ಯಾವುದೋ ಕಾರಣಗಳಿಂದ ಪ್ರತಿಷ್ಠಿತರು ಎನ್ನಿಸಿಕೊಂಡು ಅಂದಿನ ಸಭೆಗೆ ಸೂಕ್ತವಲ್ಲದ ವಿಷಯ ಪ್ರಸ್ತಾಪಿಸಿ, ದಿಕ್ಕು ತಪ್ಪಿಸುವುದು. ಎರಡನೆಯದಾಗಿ, ಸುದ್ದಿ ಹಾಗೂ ದೃಶ್ಯ ಮಾಧ್ಯಮದವರು ಕೇವಲ ರಾಜಕಾರಣಿಗಳ, ರಾಜಕೀಯ ಮಾಡುವವರ ಚೇಲಾಗಳಾಗಿ ವೇದಿಕೆಯ ಘನತೆಯನ್ನು ಹಾಳುಗೆಡುವುದು. ಹೀಗಾಗಿ ಹೋದರೂ ಒಂದೆ ಬಿಟ್ಟರೂ ಒಂದೆ ಎನ್ನುವಂತಾಗಿದೆ.

ದಿನಕ್ಕೆ ಎರಡು ಮೂರು ಸಭೆಗಳಲ್ಲಿ ಭಾಗವಹಿಸುತ್ತಿದ್ದ ಕಾಲವಿತ್ತು . ಈಗ ವರ್ಷಕ್ಕೆ ಒಂದು ಒಪ್ಪಿಕೊಳ್ಳುವುದು 'ಸಾಕು ಬೇಕಾಗಿದೆ.'

ಹೀಗಿರುವಾಗ (ಇದ್ದಕ್ಕಿದ್ದಂತೆ ೨೦-೨೫ವರ್ಷಗಳ ನಂತರ) ರಾಯಚೂರಿನ ಸ್ನಾತಕೋತ್ತರ ಕೇಂದ್ರ ಜ್ಞಾನತುಂಗಾದಿಂದ ವಿಶೇಷ ಉಪನ್ಯಾಸಕ್ಕೆ ಆಹ್ವಾನ ಬಂದಿತು. ತಕ್ಷಣ ಒಪ್ಪಿದ್ದಕ್ಕೆ ಒಂದು ಕಾರಣ. 'ಪುಸ್ತಕಮನೆ'ಗೆ ಹೆಚ್ಚು ಜನ ಸದಸ್ಯರು ಅಲ್ಲಿಯವರು. ಇನ್ನೊಂದು ಕಾರಣ, ಕನ್ನಡ ತೆಲುಗು ಸಾಹಿತ್ಯಕ್ಕೆ ಸದ್ಯ ಸಾಂಸ್ಕೃತಿಕ ಸೇತುವೆಯಾದ ಹಾಗೂ ಸಮಕಾಲೀನ ಮಹಿಳೆಯರಲ್ಲಿ ಗಂಭೀರವಾಗಿ ಬರೆಯುತ್ತಿರುವ ಕೆ. ಶಾರದಾ ಅವರ ಒತ್ತಾಯ.

ರಾತ್ರಿ ಇಡೀ ಪ್ರಯಾಣ ಮಾಡುವುದು ಎಂಥವರಿಗೂ ಹಿಂಸೆಯೆ. ಚಿಕ್ಕಂದಿನಿಂದಲೂ ರೈಲು ಪ್ರಯಾಣವೆಂದರೆ ಅಸಹ್ಯ. ಈಗ ಬಸ್ಸು ಅದಕ್ಕಿಂತಲೂ ಘೋರವಾಗಿದೆ. ಮೊಬೈಲ್ ಹಾವಳಿ. ಮಧ್ಯ ರಾತ್ರಿ ದಾಟಿದರೂ , ಕೆಲವರ ಗಂಟಲಿಗೆ, ದರಿದ್ರ ಬುದ್ಧಿಗೆ ಅಡೆತಡೆ ಎಂಬುದೇ ಇಲ್ಲವಾಗಿದೆ. ಆದರೂ ಈ ಭೂಮಿ ಮೇಲೆ ಸಂಸ್ಕೃತಿಗೆ, ಆಧ್ಯಾತ್ಮಿಕ ಸಂಪತ್ತಿಗೆ ವಾರಸುದಾರರು ಈ ಭಾರತೀಯರೆ ಎಂದರೆ ದಯವಿಟ್ಟು ನಗಬೇಡಿ.

ಬೆಳಿಗ್ಗೆ ಬೆಳಿಗ್ಗೆಯೇ ಉಪನ್ಯಾಸ ಎಂದರು. ಹೆಸರಿಗಷ್ಟೇ ಸುವರ್ಣ ಕರ್ನಾಟಕ ವರ್ಷಾಚರಣೆಯ ವಿಶೇಷ ಉಪನ್ಯಾಸ ಬೇರೆ. ಉದ್ಘಾಟನೆಯ ಸಮಾರಂಭದ ನೆಪದಲ್ಲಿ, ಅತಿಥಿಗಿಂತ ಅವರವರದೇ ಭಾಷಣ ಭೋರ್ಗರೆತ. ಅಲ್ಲೇ ಎಂದಲ್ಲ, ಎಲ್ಲೆಲ್ಲೂ ಹೆಸರಗಿಷ್ಟೇ ಸ್ವಾಗತ, ಪ್ರಾಸ್ತಾವಿಕ, ವಂದನಾರ್ಪಣೆ. ನಿಜವಾದ ಭಾಷಣಕಾರರು ಅವರೇ. ಇದರ ಜೊತೆಗೆ ವಿಶ್ವವಿದ್ಯಾನಿಲಯದ ಕೇಂದ್ರ ಬೇರೆ. ಅಧ್ಯಕ್ಷನೂ ಪ್ರಬಂಧ ಮಂಡಿಸುವ ತರಾತುರಿ. ಇವೆಲ್ಲ ತಿದ್ದಲಿಕ್ಕೆ ದಶಕಗಳ ಹಿಂದೆಯೇ ಪ್ರಯತ್ನಪಟ್ಟು ದ.ಕ. ಜನಗಳಿಂದ ಜಗಳಗಂಟ ಎಂಬ ಪ್ರಶಸ್ತಿ , ಬಹಿಷ್ಕಾರಗಳಿಗೆ ಗುರಿಯಾದದ್ದೂ ಉಂಟು ಮಾರಾಯರೆ.

ಈಗ ವಿಷಯ : 'ಕನ್ನಡ, ಕನ್ನಡಿಗ, ಕರ್ನಾಟಕ ಸಮಕಾಲೀನ ಸವಾಲುಗಳು'. ವಿಷಯ ಸವಾಲು ಇರಲಿ, ನನಗೇ ಎದುರಾದ ಸವಾಲುಗಳು ಮೊದಲಿನಿಂದ ಕೊನೆವರೆಗೆ ನೂರು.

ಹುಷಾರ್ ! ಕನ್ನಡದ ನೆಲದಲ್ಲಿ ಬಸವಣ್ಣನ ಬಗ್ಗೆ ಮಾತಾಡಲು ವೀರಶೈವನೇ ಆಗಿರಬೇಕು. ಕುವೆಂಪು ಬಗ್ಗೆ ಮಾತಾಡಲು ಶೂದ್ರನೇ ಆಗಿರಬೇಕು. ಕೊನೆಗೆ ಸಭೆ ಸಮಾರಂಭಗಳಲ್ಲಿ ಮಾತಾಡಲು ಸರ್ಕಾರದ ಯಾವುದಾದರೂ ಅಧಿಕಾರ ಸ್ಥಾನದಲ್ಲಿ ಕೂತಿರಬೇಕು. ವಿಚಾರಗೋಷ್ಠಿಯಂಥ ಚಟುವಟಿಕೆಗಳಲ್ಲಿ ಭಾಗವಹಿಸಲು, ಪ್ರಾಧ್ಯಾಪಕನೊ ಅವರ ಹಿಂ-ಬಾಲಕನೊ ಆಗಿರಲೇಬೇಕು. ಇಲ್ಲದಿದ್ದರೆ - ಎಲ್ಲವೂ ಸಮಸ್ಯೆಯೆ. ಇದು ಕನ್ನಡ, ಕನ್ನಡಿಗ, ಕರ್ನಾಟಕದ ಸಮಸ್ಯೆ, ಸವಾಲು, ಗೊಂದಲ ಅಲ್ಲವೊ ಎಂಬುದನ್ನು ಮೊದಲು ನೀವು ತೀರ್ಮಾನಿಸಿಕೊಳ್ಳಬೇಕಾಗಿದೆ. ಇದನ್ನು ತೀರ್ಮಾನಿಸದ ಜನ, ಯಾವುದನ್ನೂ ಹೊಣೆ ಹೊರದ ಬೇಜವಾಬ್ದಾರಿಯಿಂದ ಬದುಕು ಹೊರೆಯುತ್ತಿದ್ದಾರೆ ಎಂದಷ್ಟೇ. ಹೀಗೆ ಕನ್ನಡಿಗರನ್ನು ಬೇಜವಾಬ್ದಾರಿ ಜನಗಳನ್ನಾಗಿ

ಇಟ್ಟುಕೊಂಡಿರುವುದೇ ಕಳೆದ ೩೦೦ ವರ್ಷಗಳ ಘನಸಾಧನೆ. ಕನ್ನಡಿಗರ ಹಣೇಬರಹ ಇಲ್ಲಿಂದಲೇ ಶುರು ಎಂಬುದನ್ನು ಈಗಲಾದರೂ ತಿಳಿಯಬೇಕಾಗಿದೆ.

ಇದಕ್ಕೆ ತುಂಬಾ ಸಣ್ಣ – ಉಜ್ವಲ ಉದಾಹರಣೆ ಎತ್ತಿಕೊಡುವೆ : ತಮಿಳಿನವರು ಕೇಂದ್ರದವರ ಮೇಲೆ ಸವಾರಿ ಮಾಡಿ ಶಾಸ್ತ್ರೀಯ (ಕ್ಲಾಸಿಕ್) ಭಾಷೆ ಎಂದು ಘೋಷಿಸಿದರು. ಅದೇ ರೀತಿ ಗಾಂಧಿ ಭಕ್ತರು, ಗಾಂಧೀ ನಾಡು ಎನ್ನಿಸಿಕೊಂಡ ಈ ಕನ್ನಡಿಗರು ಆಂಧ್ರ ಪ್ರದೇಶ ರಾಜ್ಯ ನಿರ್ಮಾಣಕ್ಕಾಗಿ ಪೊಟ್ಟಿ ಶ್ರೀರಾಮುಲು ಅವರು ಪ್ರಾಣ ಬಿಟ್ಟಾದ ಮೇಲೆ ಬೊಬ್ಬೆ ಹಾಕಿದ್ದು ಎಂಬುದನ್ನು ನೆನಪುಮಾಡಿಕೊಳ್ಳಬೇಕು. ಈಗಲೂ ಅಂತೆಯೇ ಎಚ್ಚೆತ್ತುಕೊಂಡರು ಎಂಬುದನ್ನು ಮರೆಯಬಾರದು.

ದೇಜಗೌ, ಚಿದಾನಂದಮೂರ್ತಿ, ಶೇಷಗಿರಿರಾವ್ – ವರದಿ, ಹೋರಾಟ, ಉಪವಾಸ ಸತ್ಯಾಗ್ರಹ ಬಿಡುವಾದಾಗ ಕೈಗೆತ್ತಿಕೊಳ್ಳುತ್ತ ಬಂದಿದ್ದಾರೆ. ಅಷ್ಟೇ ಪುರಸತ್ತಿನಿಂದ ಇಂಟರ್‌ನ್ಯಾಷನಲ್ ರೈಟರ್ ಅನಂತಮೂರ್ತಿ ಮತ್ತು ಅವರ ಅಭಿಮಾನಿಬಳಗ, ಶಾಸ್ತ್ರೀಯ ಸ್ಥಾನಮಾನ ಅಂದರೇನು ? ಕೇಳಿಪಡೆಯುವುದೆ ? ಇದೆಲ್ಲ ಶುದ್ಧ ನಾನ್‌ಸೆನ್ಸ್ ಎಂದು ಆಗಾಗ್ಗೆ ಹೇಳಿಕೆ ಬಿಡುಗಡೆ ಮಾಡುತ್ತಿರುತ್ತಾರೆ. ಈ ಎರಡೂ ಸಾಲದು ಎನ್ನುವಂತೆ, ಇದ್ದಕ್ಕಿದ್ದಂತೆ ದಲಿತ ಬಂಧುಗಳು, ಅವರನ್ನು ಮುಂದಿಟ್ಟುಕೊಂಡ ಕೆಲ ನಾಯಕರು, ಮೊದಲು ನಮಗೆ ಸರಿಸಮಾನ ಶಿಕ್ಷಣ ನೀಡಿ. ೨-೩ನೇ ದರ್ಜೆ ಪ್ರಜೆಗಳನ್ನಾಗಿ ಇಟ್ಟುಕೊಳ್ಳಲು ಮೇಲುವರ್ಗದವರು ಈವರೆಗೂ ಹೂಡಿದ ಆಟ ಇದು. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಶಿಕ್ಷಣ ಕೊಡಿ – ಎಂದು ಬೀದಿಗೆ ಇಳಿಯುತ್ತಿದ್ದಾರೆ.

ಹೀಗೆ ಒಂದು ಕಡೆ ಭಾವನಾತ್ಮಕವಾಗಿ, ನಿವೃತ್ತ ವಿದ್ವಾಂಸರು. ಇನ್ನೊಂದು ಕಡೆಗೆ ಬೌದ್ಧಿಕ ಸ್ತರದಲ್ಲಿ ಪ್ರಚಾರಕರು. ಮತ್ತೊಂದು ಕಡೆಗೆ ತಮ್ಮ ಬದುಕಿನ ಪ್ರಶ್ನೆಯಾಗಿ ನವನಾಗರೀಕರು ಹೋರಾಟದಿಂದ ಎಲ್ಲ ಸಾಧ್ಯ ಎಂದು ಹೊರಟಿರುವಾಗ, ಕನ್ನಡ, ಕನ್ನಡಿಗ, ಕರ್ನಾಟಕ – ಯಾರ ಸೊತ್ತು ? ಯಾರಿಂದ ಅಡ್ಡಿ ? ಎನ್ನುವುದನ್ನು ಸ್ವಲ್ಪ ಬಿಡುವು ಮಾಡಿಕೊಂಡು, ತಮ್ಮ ತಮ್ಮ ಪಾಡಿಗೆ ತಾವೇ ಆಲೋಚಿಸಿ ತಾವೇ ಬಾಯಿಬಿಡುವುದು ಒಳಿತು.

ಕನ್ನಡಿಗರಲ್ಲಿ ಈ ಗೊಂದಲಕ್ಕೆ ಪಕ್ಕದ ತಮಿಳರು, ಕೇಂದ್ರ ಸರ್ಕಾರದವರು ಹೇಗೆ ಕಾರಣರು ? ರೈಲ್ವೆ ಮಂತ್ರಿಗಳೇನೋ ಕನ್ನಡಿಗರ ಬಗ್ಗೆ ರೈಲು ಬಿಟ್ಟರು. ಅದಕ್ಕೆ ಕಾರಣ ಕನ್ನಡಿಗನೊಬ್ಬನನ್ನು ಪ್ರಧಾನ ಮಂತ್ರಿ ಮಾಡಿದ್ದೇ ಈ ಭೂಪನಂತೆ. ಅದರ ಸೇಡು ತೀರಿಸಿಕೊಳ್ಳುವಂತೆ ಕಾಣಿಸುತ್ತಿದೆ. ಡರ್ಟಿ ಜನ ಎಂದರೂ, ಡರ್ಟಿ ಇಷ್ಯೂ ಎಂದರೂ, ನಮ್ಮ ಪೂಜಾರರು ದ.ಕ. ಶೈಲಿಯಲ್ಲಿ ಮಂಗಳಾರತಿ ಎತ್ತಿದರು, ನಿಜ. ಆದರೆ ಇನ್‌ಫೋಸಿಸ್ ನಾರಾಯಣಮೂರ್ತಿ, ಸುಧಾಮೂರ್ತಿಗಳು ಕನ್ನಡಿಗರಲ್ಲವೆ ? ತಮ್ಮ ನೆಲದ, ಜಲದ, ಸಂಪತ್ತಿನ ಮಮಕಾರ – ಕರುಳುಬಂಧಿ ಸಂಬಂಧ ಇಲ್ಲವೆ ? ಮಾತೆತ್ತಿದರೆ ಆಂಧ್ರಕ್ಕೆ , ತಮಿಳುನಾಡಿಗೆ, ಮಹಾರಾಷ್ಟ್ರಕ್ಕೆ ಕೊನೆಗೆ ಉತ್ತರ ಭಾರತಕ್ಕೆ ಹೊರಟು ಹೋಗುವ ವರಸೆ ತೆಗೆದೇ ಪದ್ಮವಿಭೂಷಣ, ಇನ್ನೇನು ಭಾರತರತ್ನ ಪಡೆದು ರಾಷ್ಟ್ರಪತಿಯೇ ಆದಾಗ, ಪ್ರಧಾನಿ ಲಾಲೂಪ್ರಸಾದ್‌ಯಾದವ್ ಅವರು ಕನ್ನಡಿಗರು ಡರ್ಟೀ ಜನ ಎನ್ನಲಾದೀತೆ ?

ನಿಜ, ಕೇಂದ್ರದ ಕ್ಯಾಬಿನೆಟ್ ಮಂತ್ರಿಗಳಲ್ಲಿ ಕನ್ನಡಿಗರು ಇಲ್ಲ, ಅಥವ ಕ್ಯಾಬಿನೆಟ್ ಮಂತ್ರಿಗಳಾಗುವ ಕನ್ನಡಿಗರು ಇಲ್ಲ. ಅದೇನು ಡರ್ಟಿ ವಿಷಯ ಅಲ್ಲ ಬಿಡಿ. ರಾಜ್ಯದಲ್ಲಿ ಸರ್ಕಾರವೇ ಇಲ್ಲ, ಇನ್ನೊಂದು; ಕನ್ನಡ, ಕನ್ನಡಿಗ, ಕರ್ನಾಟಕದ ಸರ್ಕಾರ ಬರುತ್ತದೆ ಎಂದು ಕನಸಿನಲ್ಲಿಯೂ ತಿಳಿಯಬೇಡಿ. ಈ ಸಮಸ್ಯೆ ಚುನಾವಣೆಯಲ್ಲಿ ಬಗೆ ಹರಿದೀತು ಎಂದು, ಯಾರ ಪ್ರಣಾಳಿಕೆಯಲ್ಲಾದರೂ ತಾವು ಗಮನಿಸಿದರೆ ದಯವಿಟ್ಟು ತಿಳಿಸಿ. ಹೀಗಿರುವಾಗ ಭಾವನಾತ್ಮಕ ಜೀವಿಗಳು, ಬುದ್ಧಿ ಜೀವಿಗಳು, ನವನಾಗರೀಕರು ತುಂಬಿತುಳುಕುತ್ತಿರುವ ಈ ಕರ್ನಾಟಕದಲ್ಲಿ ಯಾವ ಜವಾಬ್ದಾರಿ ಹೊರಬೇಕಾದವರು ? ಜವಾಬ್ದಾರಿ ಹೊರಬೇಕಾದವರಿಗೆ ಕನ್ನಡ, ಕನ್ನಡಿಗ, ಕರ್ನಾಟಕ ಕಟ್ಟಿಕೊಂಡು ಆಗಬೇಕಾದ್ದು ಏನು ?

ಇನ್ನಾ ಒಂದು ಸಣ್ಣ ಉದಾಹರಣೆ : ನನ್ನ ಮಾತನ್ನ ರಾಜ್ಯ ಆಳುವವರು, ಅವರಿಂದ ಆಳಿಸಿಕೊಳ್ಳುವರು ಪರಿಪಾಲಿಸುತ್ತಾರೆ ಎಂಬ ಭ್ರಮೆಯಿಂದ ಹೇಳುತ್ತಿಲ್ಲ, ಕಿವಿ ನೆಟ್ಟಗಿದ್ದರೆ ತಲೆ ಸರಿಯಿದ್ದರೆ ಕೇಳಿಸಿಕೊಳ್ಳುವ ಕೃಪೆದೋರಬೇಕು, ಅಷ್ಟೆ:

ಉತ್ತರ ಕರ್ನಾಟಕದಿಂದ ಈವರೆಗೆ ಒಬ್ಬನೂ ಮುಖ್ಯಮಂತ್ರಿಯಾಗಲಿಲ್ಲವೆ ? ಆದವರೆಲ್ಲ ದಕ್ಷಿಣ ಕರ್ನಾಟಕದ ಏಳಿಗೆ ಉದ್ಧಾರಕ್ಕೇ ಟೊಂಕ ಕಟ್ಟಿ ಕುರ್ಚಿಯಲ್ಲಿ ಕುಳಿತರೂ ? ನಂಜುಂಡಪ್ಪ ವರದಿ ಬಂದು,

ಸರೋಜಿನಿ ಮಹಿಷಿ ವರದಿಯೂ ಬಂದು, ಕೊನೆಗೆ ಮಹಾಜನ ವರದಿ ಕೂಡ ಬಂದು ಹೋಗಿರುವ ಕನ್ನಡಿಗರ ಹಣೇಬರಹವನ್ನು ಕಾಪಾಡಲು – ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ ಎಂದರೆ, ಗಡಿನಾಡಿನ ಕವಿ ಕಯ್ಯಾರ ಕಿಞ್ಞಣ್ಣರೈಯಂತೆ 'ಬೆಂಕಿಬಿದ್ದಿದೆ' ಎಂದದ್ದು ನಾಡಿಗೊ, ಜನಕ್ಕೊ, ಈ ವಿಷಯಕ್ಕೊ ಎಂಬುದನ್ನು ಬಲ್ಲವರು ಬಾಯಿ ಬಿಡಬೇಕು.

ಆಂಧ್ರದ ಮಂತ್ರಾಲಯದಿಂದ, ತುಂಗಭದ್ರಾ ದಾಟುತಿದ್ದಂತೆಯೇ ಗೊತ್ತಾಯಿತು. ಇದು ಕರ್ನಾಟಕದ ಗಡಿಯಲ್ಲದೆ ಬೇರೆಯಾವ ರಾಜ್ಯವೂ ಆಗಿರಲಿಕ್ಕಿಲ್ಲ ಎಂದು. ಬೆಂಗಳೂರಿನಲ್ಲಿಯೇ ವಾಸವಿದ್ದು, ಹೊಸೂರಿಗೆ ಹೋಗುವ ತಮಿಳು ನಾಡಿನವರ ನೆಲ ಎಷ್ಟು ಅದ್ಭುತವಾಗಿದೆ ಎಂಬುದನ್ನು ಗ್ರಾಮವಾಸ್ತವ್ಯ ಹೂಡುವ ರಾಜಕಾರಣಿಗಳು ಈವರೆಗೂ 'ನೋಡಲೇ ಇಲ್ಲವೆ?' ಭಾವೀ ಪ್ರಧಾನಿಗಳಾದ ರಾಹುಲಗಾಂಧಿ, ಅಧ್ವಾನಿಗಳು ಗಮನಹರಿಸ ಬೇಕೆಂದು ಕನ್ನಡಿಗರು ಒದ್ದಾಡುವುದು ನ್ಯಾಯವೊ ?

ಕ್ರಿಸ್ತಶಕ ೩ ರಿಂದ ಅಲ್ಲ, ನಾಗರೀಕತೆಯ ತೊಟ್ಟಿಲು ಎಂದು ಕರೆವ ಮೊಹೆಂಜೆದಾರೊ ನಗರಕ್ಕೆ, ಇದೇ ರಾಯಚೂರಿನ ಹಟ್ಟಿಯಿಂದ ಚಿನ್ನ ಕಳಿಸಿಕೊಟ್ಟ ಜನ, ಕ್ರಿಸ್ತಪೂರ್ವದ ಚಿನ್ನದ ಜನ ನಾವು. ೧೭ನೇ ಶತಮಾನದ ವಿಜಯನಗರ ಸಾಮ್ರಾಜ್ಯದವರೆಗೆ ಇದೇ ಭಾರತದಲ್ಲಿಯೇ ಅಕ್ಷರಶಃ ಸಮಗ್ರವಾಗಿ, ಸಮೃದ್ಧಿಯಾಗಿ, ಆಳಿದವರೂ ನಾವು. ಮಾನವ ಸಮಾಜ ನಿರ್ಮಾಣಕ್ಕಾಗಿ ಶಿವಶರಣರು, ಹರಿದಾಸರು ಹರಿದಾಡಿದ ನೆಲ ಕೂಡ ಇದೇ. ಪ್ರಗತಿಶೀಲರ ಪಡೆಯನ್ನೇ ಕಟ್ಟಿ ಬೆಳೆಸಿದ ನವಯುಗದ ಬುದ್ಧ ಪಂಡಿತ ತಾರಾನಾಥರ ಕಾರ್ಯಕ್ಷೇತ್ರ ಕೂಡ ಇದೆ.

ಆಗಿರುವುದು ಇಷ್ಟೆ: ನಮ್ಮಪ್ಪ ನಿಮ್ಮಪ್ಪ, ನಮ್ಮವ್ವ ನಿಮ್ಮವ್ವ, ನನ್ನ ಹೆಂಡತಿ, ನಿಮ್ಮ ಹೆಂಡತಿ, ನನ್ನ ಮಕ್ಕಳು, ನಿಮ್ಮ ಮಕ್ಕಳು, ನನ್ನ ಮೊಮ್ಮಗಳು ನಿಮ್ಮ ಮೊಮ್ಮಕ್ಕಳು – ಕನ್ನಡ ಓದಿ, ಕನ್ನಡ ಬರೆಯಿರಿ. ಕನ್ನಡಿಗರಾಗಿ ಎನ್ನಲು ಬೆಂಗಳೂರಿನಿಂದ ದೆಹಲಿವರೆಗೆ ಏನೊ ಏನೊ ಅಡ್ಡಿ ಆತಂಕಗಳು. ಆದರೆ ನನ್ನವರು ಎನ್ನುವವರು ನನ್ನನ್ನು ಇಡಿಯಾಗಿ ಸ್ವೀಕರಿಸ ಬೇಕಾದರೆ ಕನ್ನಡ ಬಿಟ್ಟು ಬೇರೆ ದಾರಿ ಇಲ್ಲ . ಅವರು ಇವರು ಎನ್ನದೆ ನಾನು, ನನ್ನದು ಎಂದಾಗಬೇಕಾದರೆ ಕನ್ನಡವೇ ಗತಿ. ಕನ್ನಡತನ ಒಂದಿದ್ದರೆ ಸಾಕು ಎನ್ನುವ ಕುವೆಂಪು ಅವರ ದಾರ್ಶನಿಕ ಕರೆಯಲ್ಲಿ ಇಂತಹ ಬದುಕಿನ ಎಲ್ಲ ಅರ್ಥಗಳು ಸಂಬಂಧಗಳು ಅಡಗಿವೆ.

ಅಷ್ಟೇಕೆ, ಅಮೆರಿಕಾದಲ್ಲೇ ಇರುವ ಕನ್ನಡ ಕವಿ ಪು.ತಿ.ನ. ಅವರ ಅಳಿಯ, ಎಚ್.ವಿ. ರಂಗಾಚಾರ್ ಅವರು ಇತ್ತೀಚೆಗೆ ಹೊರತಂದ, 'ತರಗೆಲೆಯ ಹಾರಾಟ' ಲಲಿತ ಪ್ರಬಂಧದ 'ನನ್ನ ಮಾತು' ಸ್ವಲ್ಪ ಕೇಳಿಸಿಕೊಳ್ಳಿ : ''ನಾನೊಬ್ಬ ಎನ್ನಾರೈ. ಅಮೆರಿಕಾದ ನಿವಾಸಿ. ಇಲ್ಲಿ ಬಂದು ನೆಲೆಸಿರುವ ಬರೆಯುವ ಭಾರತೀಯರು ಬಹುಪಾಲು ಇಂಗ್ಲಿಷ್‌ನಲ್ಲೆ ಬರೆಯಲು ತೊಡಗಿದ್ದಾರೆ. ಅವರಲ್ಲಿ ಕೆಲವರು ಬಹಳ ಪ್ರಸಿದ್ಧರಾಗಿದ್ದಾರೆ. ಆದರೆ ನೀನಾರೈ ಎಂದು ನನ್ನನ್ನು ನಾನು ಕೇಳಿಕೊಂಡಾಗಲೆಲ್ಲಾ ನಾನು ಕನ್ನಡಿಗ ಎಂದು ನನ್ನಾಂತರ್ಯವು ದೃಢಧ್ವನಿಯಲ್ಲಿ ಉತ್ತರ ಕೊಟ್ಟಿದೆ. ಅದರಿಂದ ನಾನು ಕನ್ನಡದಲ್ಲೇ ಬರೆಯುತ್ತೇನೆ. ನನ್ನ ಭಾವನೆಗಳು ಕನ್ನಡದಲ್ಲಿ ಚನ್ನಾಗಿ ಕೂಡುತ್ತವೆ. ಅವು ಓದಿದವರಿಗೆ ಸರಿಯಾಗಿ ತಲಪುವುವೆಂದು ನನಗೆ ವಿಶ್ವಾಸವಿದೆ. ಕನ್ನಡದಲ್ಲಿ ಬರೆಯುವ, ಮಾತನಾಡುವ ಖುಷಿ ಇಂಗ್ಲಿಷ್‌ನಲ್ಲಿ ಹೇಗೆ ಬಂದೀತು ? ಜುಬ್ಬಾ ಪಂಚೆಗಳ ಆರಾಮ ಸೂಟು ಬೂಟುಗಳ ಬಿಕ್ಕಟ್ಟಿನಲ್ಲೆಲ್ಲಿ ಸಿಕ್ಕೀತು? ಓದುಗರು ಕಮ್ಮಿಯಾದರೇನಂತೆ ? ಅದು ನನ್ನನ್ನು ಅಷ್ಟು ಬಾಧಿಸುವುದಿಲ್ಲ. ಅವರು ಸಾಹಿತ್ಯ ಪ್ರೇಮಿಗಳೇ, ನನ್ನ ಬರೆಹ ಅವರಿಗೆ ಸಂತೋಷ ತಂದಿತೆ ? ಅದು ನನಗೆ ಮುಖ್ಯ''.

ಹಾಸ್ಯದ ಹೆಸರಿನಲ್ಲಿ ಕನ್ನಡವನ್ನು ಹಾಸ್ಯಾಸ್ಪದಗೊಳಿಸುತ್ತಿರುವ ಚಿಲ್ಲರೆ ಸಾಹಿತಿಗಳ ಮುಂದೆಯಾವ ಪ್ರಶಸ್ತಿಗೂ ಮೀರಿದ ಪ್ರಬುದ್ಧ ಕನ್ನಡಿಗ ರಂಗಾಚಾರ್ಯ ಅವರ ಈ ಬರವಣಿಗೆಯ ತುಡಿತ ತನ್ನತನದ ಅರಿವು ಮೂಡಿಸುವುದಾಗಿದೆ. ರಾಜಕೀಯ ಇಚ್ಛಾ ಶಕ್ತಿಯ ಕೊರತೆಯಲ್ಲ ಈ ಕನ್ನಡಿಗರಿಗೆ ಕಾಡುತ್ತಿರುವ ಸಮಸ್ಯೆ, ಸವಾಲು; ಸಾಂಸ್ಕೃತಿಕ ಅಭಿರುಚಿ, ಆಸಕ್ತಿ , ಪ್ರಬುದ್ಧತೆಯ ಘೋರಕಂದರ, ಗೊಂದಲವೇ ಕಾರಣವಾಗಿದೆ. ತಾನು ತನ್ನನ್ನು ತಿಳಿದಾಗ ತನ್ನವರನ್ನು ತಿಳಿಯುವುದು ಯಾವ ಕಷ್ಟವೂ ಇಲ್ಲ . ಬೇರೆಯವರನ್ನೇ ಆದರಿಸಿ, ಆಹ್ವಾನಿಸಿ, ತಲೆಯಮೇಲೆ ಇಟ್ಟುಕೊಳ್ಳುವುದು ಹೋಗಬೇಕು. ಕನ್ನಡಿಗರಿಗೆ ಆ ಕ್ಷಣವೇ ಕನ್ನಡತನದ ಸಾಕ್ಷಾತ್ಕಾರ. ಅಲ್ಲಿಯವರೆಗೂ ಸಮಸ್ಯೆ, ಸವಾಲು, ಗೊಂದಲ ಇರುವುದೇ, ಇದ್ದದ್ದೇ .

□

ನೀರಿನ ಸಂಸ್ಕೃತಿ

ಸುಜಾತ ಅಕ್ಕಿ

'ನೀರು' ಎನ್ನುವುದು ಪರಿಸರದ ಅಂಶ, ಪರಿಸರದ ಅವಿಭಾಜ್ಯವೂ ಹೌದು. ಪರಿಸರದಲ್ಲಿ ಯಾವ ಅಂಶಗಳಿವೆಯೋ ಅದರ ಜೊತೆಗೇನೆ ನೀರಿನ ಸಂಬಂಧವಿದೆ. ನೀರು ನಿಸರ್ಗ ಸಂಪನ್ಮೂಲ. ಆದರೆ ಮಾನವನು ನೀರು ಎನ್ನುವುದನ್ನು ಪರಿಸರದ ಅಂಶ ಅನ್ನುವುದಕ್ಕೆ ಬದಲಾಗಿ ಅದೊಂದು ವಸ್ತು ಎಂದು ತಿಳಿದುಕೊಂಡಿದ್ದಾನೆ. ಇತ್ತೀಚೆಗಂತೂ ತಾನು ಬಳಸುವ ಮತ್ತು ತನಗಾಗಿಯೆ ಇರುವ ವಸ್ತು ಎಂದುಕೊಂಡಿದ್ದಾನೆ. ನೀರು ಮತ್ತು ಇತರ ಪರಿಸರ ಸಂಬಂಧವನ್ನು ನೋಡಿದರೆ, ಮತ್ತು ಅದರ ಅಧ್ಯಯನಕ್ಕೆ ಹೊರಟರೆ, ಇದು ಒಂದು ರೀತಿಯಲ್ಲಿ ಚಕ್ರಾಕಾರದ ಸಂಬಂಧವಿದೆ ಎಂದೆನಿಸುತ್ತದೆ. It is not a Isolated Item. ಇದು ಸ್ವತಂತ್ರವಾಗಿ ನಿರ್ಮಾಣವನ್ನು ಹೊಂದಿಲ್ಲ. ವೈಜ್ಞಾನಿಕವಾಗಿ ಯೋಚಿಸಿದರೆ ಜಲಜನಕ ಮತ್ತು ಆಮ್ಲಜನಕದ ಒಂದು ಸಂಯೋಗ. ಇವು ಪರಿಸರಿಕ ಅಂಶಗಳು. ನಿಸರ್ಗದ ಉತ್ಪತ್ತಿಗಾಗಿ ಬಳಕೆಗೆ ಇರುವಂಥದು. ಪರಿಸರದಲ್ಲಿ ಆಗುವಂಥ ಬದಲಾವಣೆ ಜೊತೆಯಲ್ಲಿಯೇ ನೀರು ಮಳೆಯಾಗಿ ಬದಲಾವಣೆಯಾಗುತ್ತದೆ. ಕಾಡು ಮಳೆಯನ್ನು ಬರಿಸಲು ಇರುವ ಮಧ್ಯವರ್ತಿಯಾಗಿದೆ. ಇದು ಒಂದು ಬಗೆಯಲ್ಲಿ ಭೂಮಿಯ ವಿಕಾಸದ ಜೊತೆಗೆ ಹುಟ್ಟಿಕೊಂಡಿರುವಂಥ ಅಂಶ. ಆದ್ದರಿಂದ "There is no forest no rain". ಜಗತ್ತಿನಲ್ಲಿ ಆಗುವ ರಾಸಾಯನಿಕ ಬದಲಾವಣೆಗಳು, ಕೈಗಾರಿಕೆಗಳಿಂದ ಅನವಶ್ಯಕ ವಸ್ತುಗಳು, ಯುದ್ಧದಿಂದ ಮತ್ತು ಬಾಂಬುಗಳಿಂದ ಬದಲಾವಣೆ ಉಂಟಾಗುತ್ತದೆ. ಇದು ಮಳೆಯ ಮೇಲೂ ಪರಿಣಾಮವನ್ನು ಉಂಟುಮಾಡುತ್ತದೆ. ಆದರೆ ಮನುಷ್ಯ ಅದನ್ನು ತನ್ನ ಬಳಕೆಯ ವಸ್ತುಗಳ ಜೊತೆಗೆ ಗ್ರಹಿಸಿದ್ದಾನೆ. ಇದರಲ್ಲಿ ನೀರು ಕೂಡ ಬಳಕೆಯ ವಸ್ತು ಮತ್ತು ನೀರು ಪವಿತ್ರ ವಸ್ತು. ಈ ಎರಡೂ ಅಂಶಗಳು ಸಮಾಜದಲ್ಲಿ ಕ್ರಿಯಾಶೀಲವಾಗಿವೆ. ಆದಿವಾಸಿ ಸಮಾಜದಿಂದ ಆರಂಭಗೊಂಡು ವ್ಯವಸಾಯದ ಸಮಾಜದವರೆಗೆ ನೀರು ಪವಿತ್ರ ಅಂಶ ಅಂತ ಇದೆ. Water as a Sacreed Item. ಆಲೋಚನಾ ಕ್ರಮದಲ್ಲಿ ನೀರು ಬಳಕೆಗೆ ಬರುವಂಥ ಅಭಿಪ್ರಾಯವೂ ಇದೆ. ಈ ಪವಿತ್ರ ಪರಿಕಲ್ಪನೆಯ ಹಿಂದೆಯೂ ಬಳಕೆಯ ಚಿತ್ರಣವಿದ್ದು ಅದನ್ನು ಒಂದು ವಸ್ತು ಅನ್ನುವ ಅರ್ಥದಲ್ಲಿ ಅಲ್ಲ. ನೀರು ಒಂದು ಜೀವಂತ ಅಂಶವೆಂದು ಗುರುತಿಸಿದ್ದು, ಅದು ಇತರ ಜೀವಿಗಳಿಗೆ ಪೂರಕರೂಪದಲ್ಲಿ ಅನನ್ಯತೆಯನ್ನು ಪಡೆದಿದ್ದು , ಅದಕ್ಕೆ ಒಂದು ಪಾವಿತ್ರ್ಯತೆಯ ಅರ್ಥವಿದೆ. ಇದಕ್ಕೊಂದು ವ್ಯಕ್ತಿತ್ವವನ್ನು ಕೊಡಲಾಗಿದೆ. ಈ ವ್ಯಕ್ತಿತ್ವದ ದೇವತೆಯ ಹಿನ್ನೆಲೆಯಲ್ಲಿ ನಂಬಿಕೆಗಳು ಆಚರಣೆಗಳು ಪುರಾಣಗಳು, ಪ್ರಚಲಿತದಲ್ಲಿವೆ. ಮನುಷ್ಯ ಕಾಡಿಗಿಂತಲೂ ಸ್ವಲ್ಪ ಆಲೋಚನಾ ಲಹರಿಯಲ್ಲಿ ನೀರಿನ ಬಗ್ಗೆ ಬಹಳ ಮುಖ್ಯವಾದ character ಗುಣವನ್ನು ನೀರಿಗೆ ಕೊಡುತ್ತಾ ಬಂದಿದ್ದಾನೆ.

Primitive

Tribal

Agriculture

ಸಮಾಜದಲ್ಲಿ ಒಬ್ಬ, ವ್ಯಕ್ತಿ ಎಂದೂ ಪರಿಗಣಿಸಿದ್ದಾನೆ. ಇದು ಒಂದು ಅರ್ಥದಲ್ಲಿ ನೀರಿನ ಸಮಗ್ರವಾದ ಆಲೋಚನಾ ವಿಧಾನ. ಹದಿನೆಂಟನೆಯ ಶತಮಾನದ ಈಚೆಗೆ ಗಮನಿಸಿದರೆ ನೈಸರ್ಗಿಕ ಸಂಪನ್ಮೂಲಗಳು (Natural Resource) ಹೇಗೋ ಹಾಗೆ ನೀರನ್ನು ಕಚ್ಚಾ ವಸ್ತು (Raw maerial)ಗಳೆಂದು ಮಾಡಿಕೊಂಡರು. ನೀರನ್ನು ಸಿದ್ಧ ವಸ್ತುಗಳಿಗೆ ಬೇಕಾದ ಭಾಗ. ಇಲ್ಲಿ ಸಿದ್ಧವಸ್ತುಗಳ ಹಿಂದೆ ಯಾವುದೇ ಪಾವಿತ್ರತೆಯ ಪರಿಕಲ್ಪನೆ ಇಲ್ಲ. ಹಾಗಾಗಿ ನೀರನ್ನು ಹೀಗೆ ಬಳಸಿರುವುದರಿಂದ ನೀರಿನ ಪಾವಿತ್ರತೆ ಭಾಗ ಹೋಯಿತು. ಆಗ Sacreed and Totality (ಪವಿತ್ರ ಮತ್ತು ಸಮಗ್ರತೆ) ಎಂಬ ನೀರಿನ ಬಗೆಗಿರುವ

ಗೌರವಗಳು ಕಡಿಮೆಯಾದವು. ಭೂಮಿ ಜೊತೆಗೆ ನೀರನ್ನು ಕಚ್ಚಾವಸ್ತು ಎಂದೇ ಪರಿಗಣಿಸಲಾಯಿತು. ಅಂದರೆ ಸಿದ್ಧ ವಸ್ತುವಿಗೆ ಬೇಕಾದಂತ ಕಚ್ಚಾ ವಸ್ತುಗಳನ್ನು ಪಟ್ಟಿ ಮಾಡುವಾಗ ಹೇಗೆ ಬೇರೆ ಬೇರೆ ವಸ್ತುಗಳನ್ನು ಪಟ್ಟಿ ಮಾಡಿದರೋ ಅದೇ ಪಟ್ಟಿಗೆ ನೀರನ್ನು ಸೇರಿಸಿದರು. ಹೀಗೆ ನೀರು ಪರಿಕಲ್ಪನಾತ್ಮಕವಾದ ಪರಿವರ್ತನೆಯಾಗಿ ಹೋಯಿತು.

ಬಳಕೆಯ ವಿಧಾನ

೧. ಇಲ್ಲಿ People are reject of Folklore. ನೀರಿನ ಬಗ್ಗೆ ಇದ್ದ ನಂಬಿಕೆ, ಪದ್ಧತಿ , ಆಚರಣೆ ಜನಪದ ಸಂಸ್ಕೃತಿ. ಈ ಎಲ್ಲಾ ಸಂಸ್ಕೃತಿಯನ್ನು ಕೈಗಾರಿಕಾ ಸಂಸ್ಕೃತಿಯು ನಿರಾಕರಿಸಿತು. ಕೈಗಾರಿಕೀರಣದಲ್ಲಿ ಮೊದಲಿದ್ದ ಪರಿಸರದ ಯಾವುದೇ ವಸ್ತು ಇದ್ದರೂ ಅದು ಒಂದು ಚಲಿಸುವ ವಸ್ತು ಎಂದೇ ಅದೊಂದು ಕ್ರಿಯಾತ್ಮಕವಾಗಿ ಭಾಗವಹಿಸುವ ಒಂದು ವಸ್ತು ಎಂದು ವೈಜ್ಞಾನಿಕ ನೆಲೆಯಲ್ಲಿ ನೋಡಲಾಯಿತು.

೨. ಯಾವುದೇ ಒಂದು ವಸ್ತುವನ್ನು ಅನುಭೋಗಿಯಾಗಿ ಮಾನವ ಬಳಕೆಮಾಡಿಕೊಂಡು ಅದರಿಂದ consumption ಪಡೆದು ತೃಪ್ತಿ ಸಂತೋಷವನ್ನು ಪಡೆಯುತ್ತಾನೆ. ಇದೇ ನೀರಿಗೆ ಬಂದಂಥ ಪರಿಸ್ಥಿತಿ. ಜನಪದ ಸಮಾಜದಲ್ಲಿ ನೀರು, ನೀರು ಮಾತ್ರ ಆಗದೇ ಅದು ಒಂದು ವ್ಯಕ್ತಿತ್ವವಾಗಿತ್ತು. ಸಂಸ್ಕೃತಿ ಒಳಗಡೆ ನೀರು ವ್ಯಕ್ತಿತ್ವವನ್ನು ರೂಪಿಸಿಕೊಂಡಿತ್ತು. ಗಂಗೆ, ಗಂಗಾದೇವಿ, ಜಾಹ್ನವಿ, ಅಂತರಗಂಗೆ, ಸುರಗಂಗೆ, ಪಾತಾಳಗಂಗೆ ಹೀಗೆ ಶೀಲವಿಲ್ಲದ ಗಂಗೆ ಎನ್ನುತ್ತೇವೆ. ಗಂಗೆ ಪವಿತ್ರಳು ಪ್ರತೀ ಜೀವಿಗೆ ಬೇಕಾಗಿರುವ ಉಸಿರಿನೊಂದಿಗಿರುವ ಕರುಳ ಸಂಬಂಧದ ದೇವತೆ ಎಂದು ಒಂದು ವ್ಯಕ್ತಿಯ ಹಾಗೇ ವ್ಯಕ್ತಿತ್ವದ ಹಾಗೆ ನೀರು-ವ್ಯಕ್ತಿ - ವ್ಯಕ್ತಿತ್ವವಾಗಿತ್ತು.

ಆದರೆ ಕೃಷಿ ಸಮಾಜಕ್ಕೆ ಬಂದಾಗ ನೀರು ಒಂದು ಕಚ್ಚಾವಸ್ತುವಾಯಿತು. ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಬಳಸಬಹುದು ಎಂಬ ಅಂಶ ಪ್ರಚಲಿತವಾಯಿತು.

ನೀರಿನ ಸಂಸ್ಕೃತಿ

ನದೀ ಸಂಸ್ಕೃತಿ

ಮಾನವ ಸಂಸ್ಕೃತಿ

ಒಟ್ಟಿಗೆ ಬೆಳೆದಂತಹವು. ಮಾನವನ ನಾಗರೀಕತೆಯ ಆರಂಭವಾಗಿದ್ದೇ ನದಿ ಪಕ್ಕದಲ್ಲಿಯೇ. ಎಲ್ಲಿ ನೀರು ಇರುವುದೋ ಅಲ್ಲೊಂದು ಪ್ರಾಣಿ, ಪಕ್ಷಿ ಸಂಕುಲಗಳು ಜೀವಿಸುತ್ತವೆ. ಆದಿವಾಸಿಗಳು ನದಿ ಮೂಲದಲ್ಲಿಯೇ ಬೀಡುಬಿಟ್ಟಿದ್ದರು. ಸಂಸ್ಕೃತಿ, ನಾಗರೀಕತೆಗಳು ಹುಟ್ಟಿದ್ದು ನೀರಿನ ಜೊತೆಯಲ್ಲಿಯೇ. 'ಎಲ್ಲಿ ನದಿ ಇದೆಯೋ ಅಲ್ಲಿ ವಾಸಸ್ಥಾನ." ಅದೊಂದು ಅವಿಭಾಜ್ಯ ಅಂಗ. ಅದು ನಮ್ಮ ದೈವ ಹಾಗೂ ಸ್ನೇಹಿತವಾಗಿದೆ ಕೂಡ. ಉದಾ :ಕಾವೇರಿ ನದಿಯನ್ನು ಮಳೆಗಾಲದ ಸಂದರ್ಭದಲ್ಲಿ "ಪದಿನೆಂಟು ಪೆರಗುಗಳ ಆಚರಣೆ" ಎಂದು ತಮಿಳು ನಾಡಿನ ತಂಜಾವೂರಿನಲ್ಲಿ ಆಚರಣೆಯನ್ನು ಮಾಡುತ್ತಾರೆ. ನೀರನ್ನು ದೇವತೆಯಂತೆ ಕಂಡಿದ್ದಾರೆ ಹೊರತು, ನೀರನ್ನು ವ್ಯಕ್ತಿಯಾಗಿ ಕಾಣುವುದಿಲ್ಲ . "An act concept to use concept". ಅಭಿನಯ ಮತ್ತು ಕ್ರಿಯಾ ಪರಿಕಲ್ಪನೆಯಿಂದ ಬಳಕೆಯ ಪರಿಕಲ್ಪನೆಗೆ ಬೆಳದು ಬಂದಿದೆ. ಇದು ಒಂದು ರೀತಿಯಲ್ಲಿ ಗುಲಾಮಗಿರಿಯ ಬಳಕೆಯಂತೆ ಬೆಳೆದು ಬಂದಿದೆ.

ಗಂಗಾ ನದಿಯ ಹುಟ್ಟು ಮತ್ತು ಕಾವೇರಿ ಹುಟ್ಟಿನ ಆಚರಣೆ, ನಂಬಿಕೆ, ನಡಾವಳಿಕೆ, ಉತ್ಸವಗಳು ಇಂದಿಗೂ ಪ್ರಚಲಿತದಲ್ಲಿವೆ . ಗಂಗೆಗೆ ಶೀಲವಿಲ್ಲ ಲಿಂಗಕ್ಕೆ ಹೊಲೆಯಿಲ್ಲ , ನೀರಿಗೆ ಕಟ್ಟಿಲ್ಲ ನಾಯಿಗೆ ಹಿಟ್ಟಿಲ್ಲ , ನೀರು ಹೆಚ್ಚಾದಂತೆ ಶೀಲ ಹೆಚ್ಚು , ತುಂಗಾ ಪಾನ ಗಂಗಾ ಸ್ನಾನ ಇಂಥ ಗಾದೆಯನ್ನು ನೋಡುವಾಗ ಹಲವಾರು ವೈವಿಧ್ಯಮಯ ಆಚರಣೆಗಳು ನಡೆಯುತ್ತವೆ.

೧. ನೀರನ್ನು ಯಾರು ಬೇಕಾದರೂ ಮುಟ್ಟಬಹುದು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಹೊಲಗೇರಿ ಶಿವಾಲಯಕ್ಕೆ ನೆಲ ಒಂದೇ ಜಲ ಒಂದೇ.

೨. ನಡವಳಿಕೆಗಳು ಒಂದು ಕಡೆ ರಕ್ಷಣೆ ಇನ್ನೊಂದೆಡೆ ನಡುವಳಿಕೆಯ ನಾಶ.

ಸಮಾಜದಲ್ಲಿ ಸಮೂಹಗಳು ತಮ್ಮ ಅನನ್ಯತೆಯಿಂದ ಅಸ್ತಿತ್ವದ ಕಡೆಗೆ ಹೋಗುತ್ತವೆ. ಆದ್ದರಿಂದಲೇ ಯಾವುದೇ ವಸ್ತುಗಳು ತನ್ನ ಬಳಕೆಗೆ ಎಂದು ಮಾನವನು ತಿಳಿದುಕೊಂಡಿದ್ದಾನೆ. ಇದಕ್ಕೆ ಮಹತ್ವದ ಉದಾಹರಣೆ ಎಂದರೆ

೧. ಗಂಗಾನದಿ

೨. ಮೈಸೂರಿನ ಕುಕ್ಕರಹಳ್ಳಿ ಕೆರೆ.

ಕೃಷಿಕ ಸಮಾಜದಲ್ಲಿ ನೀರನ್ನು ಒಂದು ಪರಿಸರದ ಸಮಗ್ರತೆ ಎಂದು ಗ್ರಹಿಸುವಂಥ ಕಾಲವೊಂದಿತ್ತು.

Water is integrated item one should not take it resource. The concept of resources against Environmental concept. The resource concept of industrial world.

ನೀರು ಕೇವಲ ಒಂದು ಸಂಪನ್ಮೂಲ ಅಲ್ಲ. ಅಂದರೆ ಅದು ಸಂಪತ್ತಿನ ಮೂಲ. ಸಂಪತ್ತಿನಲ್ಲಿ ಸಂಗ್ರಹ ಮಾಡಲಿಕ್ಕೆ ಹೊರಟಿರುವ ಆಲೋಚನೆ. ನೀರು ಒಂದು ಪ್ರತ್ಯೇಕ ಸಂಪತ್ತು ಎಂದು ಗಣಿಸುವುದು, ಸಂಪತ್ತನ್ನಾಗಿ ಬಳಸುವುದು ನಿಸರ್ಗದ ಅಂಶ. ನೀರನ್ನು ಬಳಸಿಕೊಳ್ಳಿ , ಅದನ್ನು ಸರಿಯಾಗಿಯೇ ಬಳಸಿಕೊಳ್ಳಿ. ನಮ್ಮೊಂದಿಗೆ ನೀರು ಇದೆ. ಅದನ್ನು ಸಂಪತ್ತು ಎಂದು ಗಣಿಸಿದಾಗ ಮಾತ್ರ ಅದು ಅಮೂಲ್ಯವಾದ ಸಂಪತ್ತು. ಜೊತೆಗೆ ಕಲ್ಲು, ಮಣ್ಣು, ಪಕ್ಷಿ, ಪ್ರಾಣಿಗಳೆಲ್ಲವೂ ಸಂಪತ್ತೇ . ಆದರೆ ಕೆಲವನ್ನು ವಿಶೇಷವಾಗಿ ಮತ್ತು ಹೆಚ್ಚಿನ ಬಳಕೆಗಾಗಿ ಈ ರೀತಿ ಉಪಯೋಗಿಸುವುದನ್ನು ಕಾಣುತ್ತೇವೆ. ನೀರು ನೈಸರ್ಗಿಕ ಅಂಶವಾಗಿ ಎಲ್ಲ ವಸ್ತುಗಳ ರೀತಿಯಲ್ಲಿಯೇ ಅದು ಸಹಭಾಗಿತ್ವವನ್ನು ಒಳಗೊಂಡಿದೆ ಮತ್ತು ಸಹಜವಾಗಿದೆ ಕೂಡ. ಆದರೆ ನಿಸರ್ಗದಿಂದ ಬೇರೆಯಾಗಿ ವಿಭಾಗ ಮಾಡುವುದೇ ವಿವಿಧ ಬಳಕೆಗೆ ಕಾರಣವಾಗಿದೆ.

ಪರಿಸರ ನಾಶಕ್ಕೆ ಭಾಗಿಕವಾದ ವೈಜ್ಞಾನಿಕ ಚಿಂತನೆಯೇ ಕಾರಣ : ಇಳಿಮುಖ ನಾಶಕ್ಕೆ ವೈಜ್ಞಾನಿಕವಾದ ಜೀವಂತ ಚಿಂತನೆಯೇ ಕಾರಣ. ಹದಿನೆಂಟನೆಯ ಶತಮಾನದಲ್ಲಿ ವಿಶ್ವದ ಜೀವನದ ಚಿಂತನೆಯು ವಿಜ್ಞಾನದ ಚಿಂತನೆಯನ್ನೇ ಆಧರಿಸಿದೆ. ಐನ್‌ಸ್ಟೀನ್ ಬಂದ ಮೇಲೆ ಸಮಗ್ರತೆಯ ಚಿಂತನೆಯು ಬಂದಿದೆ. ನೀರನ್ನು ಆ ಹಿನ್ನೆಲೆಯಲ್ಲಿ ಬೇರೆ ಬೇರೆ ನಿಸರ್ಗದ ಅಂಶದಂತೆ ನೋಡಿಕೊಳ್ಳಬೇಕಾಗಿದೆ. ಇದು ಸಾಪೇಕ್ಷ ಸಿದ್ಧಾಂತ.

ಕರ್ನಾಟಕ, ತಮಿಳುನಾಡು, ಆಂಧ್ರ ಈ ದ್ರಾವಿಡ ಭಾಷೆಗಳ - ಸಂಸ್ಕೃತಿಯಲ್ಲಿ ರಾಜಕೀಯ, ವಿಜ್ಞಾನ ಇವೆಲ್ಲವೂ ಆಯಾ ಜೀವಂತ ಜನಪದದ ಆಧಾರದ ಮೇಲೆಯೇ ಬೆಳೆದುಕೊಂಡು ಬಂದಿವೆ. ಆದ್ದರಿಂದ Land-Culture-Language-Politics - These are all pure Flokloristics. ಭೂಮಿ, ಸಂಸ್ಕೃತಿ, ರಾಜಕೀಯ ಇವೆಲ್ಲವೂ ಶುದ್ಧ ಜಾನಪದ ಹಿನ್ನೆಲೆಯಿಂದ ಜೀವಂತಿಕೆ ಪಡೆದಿವೆ. ಹಾಗೆಯೇ ಜನಾಂಗೀಯ ಗುಣವನ್ನು ಹೊಂದಿರುತ್ತದೆ. "Language base ethnic groups" ಭಾಷಾಭಿಮಾನವನ್ನು ಆಧರಿಸಿದ ಒಂದು ಜನಾಂಗ. ಆದ್ದರಿಂದ ತಮಿಳರು ಚಲನಾತ್ಮಕವಾಗಿರುತ್ತಾರೆ. ಜೊತೆಗೆ ಅವರು ಹಕ್ಕನ್ನು ಪ್ರತಿಪಾದಿಸುತ್ತಾರೆ. ಉದಾ: ಕಾವೇರಿ ನೀರಿನ ವಿವಾದ, ತಮಿಳರು ನೀರು ಅಂದರೆ ಅಲ್ಲಿ TMC ನೀರು ಬೇಕು ಅನ್ನುವ ಅರ್ಥದಲ್ಲಿ ಆಲೋಚನೆ ಮಾಡುತ್ತಾರೆ. ಪ್ರತಿಯೊಂದಕ್ಕೂ ಪ್ರತ್ಯೇಕವಾದ ಆಲೋಚನೆ ಮಾಡಬೇಕಾಗುತ್ತದೆ. ಇದೊಂದು ಭಾಗಿಕ ಆಲೋಚನಾ ಕ್ರಮ. ಯಾವುದೇ ಒಂದು ವಸ್ತುವನ್ನು ಭಾಗ ಮಾಡಿ ಅಭ್ಯಾಸ ಮಾಡಬೇಕಾಗುತ್ತದೆ. ಒಂದು ನಿರ್ಜೀವ ವಸ್ತುವಿನ ಘಟಕದ ಬಗ್ಗೆ, ಸಮಗ್ರತೆಯ ಬಗ್ಗೆ ಯಾವಾಗಲೂ ಆಲೋಚನೆಯನ್ನು ಮಾಡುವುದಿಲ್ಲ. ಆದ್ದರಿಂದ ಪರಿಸರದ ನಾಶಕ್ಕೆ ಭಾಗಿಕ ವೈಜ್ಞಾನಿಕ ಚಿಂತನೆಯೇ ಕಾರಣವಾಗಿದೆ.

ನೀರನ್ನು ಕಾರ್ಖಾನೆಗೆ ಬಳಸುತ್ತೇವೆ. ''ನೀರನ್ನು ಬಳಸುವುದೆಂದರೆ ನೀರನ್ನು ಅಶುದ್ಧಗೊಳಿಸುವುದು ಎಂದು ಅರ್ಥ''. ಹಾಗೆಯೇ ವರ್ಜಿಸುವುದು ಎಂದೂ ಆಗಿದೆ. ಇಂದು ಜನಪದಕ್ಕೆ ಬೇಕಾದಂತಹ ಮೂಲಗಳು ಕಡಿಮೆಯಾಗುತ್ತಿವೆ. Survival ಕಷ್ಟವಾಗುತ್ತಿದೆ. ಇದು ಇಂದಿನ ಪರಿಕಲ್ಪನೆಯಾಗಿದ್ದು, ಪರಿಸರದ ವಿರೋಧಿಯಾದ ಆಲೋಚನೆಯಾಗಿದೆ.

ಇಂದಿನ ನೀರಿನ ಬಳಕೆಯ ಕ್ರಮ

Use and Through process.

೧. ಅಶುದ್ಧಗೊಳಿಸುವುದು

೨. ವರ್ಜಿಸುವುದು

೩. ಬಿಸಾಡುವುದು

ಮಾನವನ ಜೀವ ದೇಹದ ಅಂತರಾಳದಲ್ಲಿದ್ದು ಈ ದೇಹವನ್ನು ಸಮಾಜಕ್ಕೆ ಕಾಣಿಕೆ ಕೊಟ್ಟಿರುವುದು. "In Folk society everything an act". ಸತ್ತ ದೇಹವನ್ನು ಪ್ರದರ್ಶನಕ್ಕೆ ಇಡುವುದರ ಉದ್ದೇಶ :

೧. ಸಮಾಜಕ್ಕೆ ಅವರು ಕೊಡುಗೆ ಕೊಟ್ಟಿದ್ದಾರೆ.

೨. ಈ ಸಮಾಜಕ್ಕೆ ಅವರಿಂದ ಮಾರ್ಗದರ್ಶನವಾಗಿದೆ. ದೇಹದ ಕೊಡುಗೆಯನ್ನು ಸಮಾಜಕ್ಕೆ ತಿಳಿಸುವುದಕ್ಕಾಗಿ ಇಟ್ಟಿರುತ್ತಾರೆ . ನಾಯಿ ತಿಂದು ನೀರು ಕುಡಿದರೂ ಚಿಂತೆಯಿಲ್ಲ. ಸಮಾಧಿ ಮಾಡಿ ಸಂಕೇತ ಮಾಡಿ ಇಟ್ಟುಕೊಂಡಿದ್ದಾರೆ . ಈ ಪರಿಕಲ್ಪನೆಯು ದೇಹವನ್ನು ಒಂದು ವಸ್ತುವಾಗಿ ಪರಿಕಲ್ಪಿಸಿರುವುದೇ ಇದಕ್ಕೆ ಕಾರಣವಾಗಿದೆ.

೧. ಮಾನವನ ದೇಹವನ್ನು ಸುಡುವುದು.

೨. ವಸ್ತುವನ್ನು ಬಳಸಿ ಎಸೆಯುವುದು.

೩. ಭೂಮಿಯನ್ನು ಬಳಸಿ ಬಿಡುವುದು.

೪. ಮನುಷ್ಯನನ್ನು ಬಳಸಿ ಎಸೆಯುವುದು.

ಭೌತಿಕ ಸಂಸ್ಕೃತಿಯಲ್ಲಿ ಭೂಮಿಯನ್ನು ಬಳಸಿ ಬಿಡುವುದು. ಭೂಮಿ ಇರುವುದೇ ನಮ್ಮ ಬಳಕೆಗೆ ಎಂಬ ಸಿದ್ಧಾಂತಕ್ಕೆ ಇಂದು ತಲುಪಿದ್ದಾರೆ. ಆದರೆ ಇದು ಸಂಪೂರ್ಣ ಜನ ಸಂಸ್ಕೃತಿಯಾಗಿದೆ. ಮುಂದೊಂದು ದಿನ ಭೂಮಿಯನ್ನು ಬಳಸಿ ಬಿಸಾಡು ತತ್ತ್ವಕ್ಕೆ ಬರುವುದು. ಮೊದಲು ಭೂಮಿಯನ್ನು ಮಲಿನ ಮಾಡಿದರು. ಕಸದ ತೊಟ್ಟಿ ಮಾಡಿದರು. ಭೂಮಿಗೂ ಜೀವವಿದೆ ಎನ್ನುವ ಆಲೋಚನೆಯೇ ಇಲ್ಲಿ ಇಲ್ಲ . ಈ ಕಾರಣದಿಂದ ಭೂಮಿಯಲ್ಲಿ ಇಷ್ಟೊಂದು ಕಸಗಳು ಬಂದಿವೆ. ಭೂಮಿಯನ್ನು ಬಳಸಿ ಎಸೆಯುವುದೇ ಇಲ್ಲಿಯ ತತ್ವವಾಗಿದೆ. ಇಡೀ ನಗರ ಸಂಸ್ಕೃತಿಯು Use and through ಸಂಸ್ಕೃತಿಯಾಗಿದೆ. ಭೌತಿಕ ಆಧಾರಿತ ಭೂಮಿ ನಿರಾಕೃತವಾಗಿದೆ. ಇಲ್ಲಿ Folk ನ್ನು ನಿರಾಕರಣೆ ಮಾಡಿ Urbanisation adopt ಮಾಡಿಕೊಳ್ಳಲಾಗಿದೆ.

''ಬೆಂಗಳೂರಿನ ಶ್ರೀಮಂತಿಕೆ, ಬೆಂಗಳೂರಿನ ಸುತ್ತಮುತ್ತಲಿನ ಹಳ್ಳಿಗಳ ಬಡತನವಾಗಿದೆ''. ಒಳಗಡೆ ಎಷ್ಟೋ ಹಳ್ಳಿಗಳನ್ನು ಬೆಂಗಳೂರು ನುಂಗಿಹಾಕಿದೆ. ಇಲಿ ಮರಿಗಳನ್ನು ನುಂಗಿದ ಹಾಗೆ. ಅದೇ ಸ್ಥಿತಿ ಬೆಂಗಳೂರಿನ ಒಳಗಿದೆ. ಹಳ್ಳಿಗಳು ಕಷ್ಟಪಟ್ಟರೆ ನಗರಗಳು ಶ್ರೀಮಂತಿಕೆಯನ್ನು ಮೆರೆಯುತ್ತವೆ. ಹಾಗೆ ಬೆಂಗಳೂರು ಸುತ್ತಮುತ್ತ ಹಳ್ಳಿಗಳನ್ನು ಆವರಿಸಿಕೊಂಡಿದೆ. ಸಮಗ್ರಜೀವನವು ಒಂದು ಭಾಗಿಕ ಜೀವನ ವಿಧಾನದಿಂದ ನಾಶವಾಗುತ್ತಾ ಇದೆ. ಅಂದರೆ ಇನ್ನೊಂದು ಅರ್ಥದಲ್ಲಿ ಸಮಗ್ರ ಜೀವನವೇ ಕೆಟ್ಟು ಹೋಗುತ್ತಿದೆ. ಜನಪದದ ಸಮಗ್ರ ಜೀವನ ನಗರದ ಭಾಗಿಕ ಜೀವನದಿಂದ ನಾಶ ಹಾಗೂ ಆಕ್ರಮಣವಾಗುತ್ತಿದೆ. ಈ ಜೀವನವನ್ನು ಹಂಚಿಕೊಳ್ಳಲು ಆಗುವುದಿಲ್ಲ.

ಈ ಜೀವನದಿಂದ ಜನರು ದೂರ ಹೋಗುತ್ತಿದ್ದಾರೆ. ಜನಪದ ಸಮಾಜದಲ್ಲಿ ಜನರು ಜೀವನವನ್ನು ಹಂಚಿಕೊಳ್ಳುತ್ತಾರೆ . ಆದರೆ ಅಲ್ಲಿ ಹಂಚಿಕೊಂಡಿದ್ದಾರೆ. ಯಾವ ಜೀವನ ಎಂದರೆ ಬಹುಸಂಖ್ಯಾತರಿಗೆ ೧೦೦% Tolerate ಆಗಿರಬೇಕು. ೬೦% ಜೀವನ ವಿಧಾನ ಸಹ್ಯವಾಗಬೇಕು. ಆ ಜೀವನ ವಿಧಾನ ಯಾವುದಾದರೂ ಸರಿ ಅದನ್ನು ನಾವು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ನಾವು ಬೆಳವಣಿಗೆ ವಿರೋಧಿಯಾಗುತ್ತೇವೆ. ಈ Anti progressive ಆಗ ಕೂಡದು. ಆದರೆ ಮನುಷ್ಯನ ನಾಶದ ಜೊತೆಗೆ ಭೂಮಿನಾಶವನ್ನು ನಾವು Tolerate ಮಾಡಿಕೊಳ್ಳಬಾರದು. ಏಕೆಂದರೆ ಭೂಮಿಯದು ಸುದೀರ್ಘ ಪ್ರಯಾಣ. ಅದು ಅನಂತ ಆದ್ದರಿಂದ ಭೂಮಿ ಕಲುಷಿತವಾಗದೇ ನಿರ್ಮಲವಾಗಿದ್ದರೆ ಅದೆಷ್ಟೋ ಜೀವಸಂಕುಲಗಳ ಸಮಗ್ರ ಸ್ವರ್ಗವಾಗುತ್ತದೆ. ಅಲ್ಲಿ ಪರಿಶುದ್ಧ ಗಾಳಿ, ಪರಿಶುದ್ಧ ನೀರಿನೊಂದಿಗೆ ಒಟ್ಟು ಜೀವಸಂಕುಲಗಳು ಅವಿನಾಭಾವ ಸಂಬಂಧವನ್ನು ಹೊಂದಿ ಮರುಸೃಷ್ಟಿ ಕ್ರಿಯೆಯಲ್ಲಿ ಮತ್ತೆ ಮತ್ತೆ ಕಾಲಚಕ್ರದಲ್ಲಿ ಜೀವಿಗಳ ಮರುಹುಟ್ಟು ಕ್ರಿಯೆಗಳು ನಿರಾತಂಕವಾಗಿ ಸಾಗಲು ಅನುವು ಮಾಡಿಕೊಟ್ಟಂತಾಗುತ್ತದೆ. ಇದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯ. ಮನುಕುಲದ ಉಳಿಯುವಿಕೆಗಾಗಿ ಆ ಕರ್ತವ್ಯವನ್ನು ಮರೆಯದೆ ನಾವೆಲ್ಲಾ ಕ್ರಿಯಾಶೀಲವಾಗಿ ಹೊಸ ಆಲೋಚನೆಯೊಂದಿಗೆ ನಮ್ಮ ಬದುಕನ್ನು ಶುಭಗತೆಯಲ್ಲಿ ಕಟ್ಟೋಣ. ಈ ಮೂಲಕ ನಾವೆಲ್ಲಾ ಮಾನವೀಯತೆಯನ್ನು ಮೆರೆಯೋಣವೇ !

❑

೩

ಹಿಂದುತ್ವ ಮತ್ತು ಸಾಮಾಜಿಕ ಸಾಮರಸ್ಯ

ಜಿ. ಬಿ. ಹರೀಶ್

ಹಿಂದುತ್ವಕ್ಕೂ ಸಾಮಾಜಿಕ ಸಾಮರಸ್ಯಕ್ಕೂ ಇರುವ ಸಂಬಂಧದ ಸ್ವರೂಪದ ಶೋಧವೇ ಈ ಪ್ರಬಂಧದ ಉದ್ದೇಶ. ಹಿಂದೂ / ಭಾರತೀಯ ಸಮಾಜ ಜೀವಂತವಾದ, ಬೆಳವಣಿಗೆ ಇರುವ ಸಮಾಜವಾದ್ದರಿಂದ ಅದರ ಒಪ್ಪಂದದ ಚಲನೆಯನ್ನು ಮಾತ್ರ ನೋಡಬಹುದೆನಿಸುತ್ತದೆ. ಕಳೆದ ಒಂದು ಸಮಾಜದಲ್ಲಿ ಹಿಂದೂ / ಭಾರತೀಯ ಸಮಾಜದಲ್ಲಿ ಆಗಿರುವ ಬೃಹತ್ ಬದಲಾವಣೆಗಳ ಸಮಗ್ರ ಪರಿಚಯ ಸಂಕ್ಷಿಪ್ತವಾಗಿಯಾದರೂ ಕೂಡ ಈ ಪ್ರಬಂಧದ ಮಿತಿಯನ್ನು ಮೀರಿದ್ದು

ಸಮಾಜ ಅಂದ ಮೇಲೆ ದಿನನಿತ್ಯದ ರಳೆ, ಹೊಡೆದಾಟ, ವಿಚಾರ ಸಂಕಿರಣಗಳು, ಹೋರಾಟ, ಮೌನ, ಪತ್ರಿಕೆ-ಮಾಧ್ಯಮದ ಬಳಕೆಯಲ್ಲಿ ಇದ್ದದ್ದೇ . ಕಳೆದ ೩೦ ವರ್ಷಗಳಲ್ಲಿ ಕರ್ನಾಟಕದಲ್ಲಿ ಒಂದು ನೆಲೆಯಲ್ಲಿ ದಲಿತ ಹೋರಾಟವನ್ನು ರೂಪಿಸಿದ ಸಿದ್ದಲಿಂಗಯ್ಯನವರ ಆತ್ಮಕಥೆಯಲ್ಲಿ ಹೋರಾಟಗಾರನೊಬ್ಬನ ಅಂದು – ಇಂದಿನ ಮನಸ್ಥಿತಿ ಚೆನ್ನಾಗಿ ಕಾಣಿಸುತ್ತದೆ . ಕರ್ನಾಟಕದಲ್ಲಿ ಇತ್ತೀಚಿನವರೆಗೂ ನಡೆದ, ನಡೆಯುತ್ತಿರುವ ಸಾಮಾಜಿಕ ಆಗುಹೋಗುಗಳಿಗೆ ಒಂದು ಬೆಳಕಿಂಡಿಯಾಗಿ ನಾನು ಈ ಘಟನೆಯನ್ನು ಉಲ್ಲೇಖಿಸುತ್ತಿದ್ದೇನೆ. "(ಉಡುಪಿಯ ಒಂದು) ವಿಚಾರ ಸಂಕಿರಣದಲ್ಲಿ ನಾವು ವೇದಿಕೆಯಲ್ಲಿ ಮೇಲೆ ಕುಳಿತಿದ್ದೆವು, ಪೇಜಾವರ ಶ್ರೀಗಳು ಆಶೀರ್ವಚನ ಭಾಷಣ ಮಾಡಬೇಕಾಗಿತ್ತು. ಅವರು ಬಂದ ಕೂಡಲೇ ಇಡೀ ಸಭೆ ಎದ್ದು ನಿಂತು ಗೌರವ ಸೂಚಿಸಿತು. ವೇದಿಕೆಯಲ್ಲಿದ್ದವರು ಎದ್ದು ನಿಂತರು, ಕುಳಿತಿದ್ದವನು ನಾನೊಬ್ಬನೇ. ಈಗ ನನಗೆ ಪಶ್ಚಾತ್ತಾಪವಾಗುತ್ತಿದೆ . ಆದರೆ ಆಗ ನಾನು ಮಾಡಿದ್ದು ಸರಿ ಎನ್ನಿಸುತ್ತದೆ. ಆಹಗೆ ಕುಳಿತಿದ್ದರಿಂದ ನಾನು ಸ್ವಾಮಿಗಳ ಮತ್ತು ಸಭಿಕರ ಗಮನ ಸೆಳೆದೆ. ಅತ್ಯಂತ ಚಿಕ್ಕವನಂತೆ ಕಾಣುತ್ತಿದ್ದ ನನ್ನನ್ನು ಯಾರೂ ಲಘುವಾಗಿ ತೆಗೆದುಕೊಳ್ಳದ ಪರಿಸ್ಥಿತಿ ನಿರ್ಮಾಣವಾಯಿತು. ಪೇಜಾವರ ಸ್ವಾಮಿಗಳು ದಲಿತರ ಕೇರಿಗಳಿಗೆ ಭೇಟಿ ಕೊಟ್ಟಿದ್ದರು. ಸುಧಾರಣೆಯ ಮಾತುಗಳನ್ನು ಆಡುತ್ತಿದ್ದರು. ಆ ವ್ಯವಸ್ಥೆಯಲ್ಲಿ ಅವರು ಅಷ್ಟು ಮಾಡಿದ್ದೇ ಹೆಚ್ಚಾಗಿತ್ತು. "

"ಆದರೂ ಆಗ ಉಗ್ರ ಕ್ರಾಂತಿಕಾರಿಯಾದ ನಾನು ಪೇಜಾವರರನ್ನು ಕುರಿತು 'ನಿಮಗೆ ನಿಜವಾಗಿ ದಲಿತರ ಬಗ್ಗೆ ಕಾಳಜಿ ಇದ್ದರೆ ಒಬ್ಬ ಅಸ್ಪೃಶ್ಯನನ್ನು ನಿಮ್ಮ ಮಠಕ್ಕೆ ಮಠಾಧಿಪತಿಯಾಗಿ ಮಾಡಿ' ಎಂದು ಬಹಿರಂಗವಾಗಿ

ಕೇಳಿದೆ. ಸ್ವಾಮಿಗಳು ಇದಕ್ಕೆ ಸ್ಪಷ್ಟವಾಗಿ ಉತ್ತರ ಹೇಳದಿದ್ದರೂ ಸುಧಾರಣೆಯ ಬಗ್ಗೆ ಅವರಿಗಿರುವ ಕಳಕಳಿಯನ್ನು ವಿವರಿಸಿದರು''.

ಸಿದ್ದಲಿಂಗಯ್ಯ, ೧೯೯೭, ಪುಟ. ೧೧೮

ಈ ಸಂದರ್ಭದಲ್ಲಿ ದಲಿತರ ಆತ್ಮವಿಶ್ವಾಸಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ನೋಡಬಹುದು. ಸಾಮಾನ್ಯವಾಗಿ, ವಸಾಹತುಶಾಹಿ ನಂಬಿಕೆಯ ಉತ್ಪನ್ನವಾಗಿ, ದಲಿತರು ಶತಮಾನಗಳಿಂದ ವಿದ್ಯೆಯಿಂದ ವಂಚಿತರು ಎಂಬ ಪ್ರಬಲ ವಾದವೊಂದಿದೆ. ಇತ್ತೀಚೆಗೆ ಧರ್ಮಪಾಲ್, ಡಿ.ಆರ್. ನಾಗರಾಜ್ ಮೊದಲಾದವರು ವಸಾಹತುವಿನ ಉಗಮಕ್ಕೆ ಸ್ವಲ್ಪ ಹಿಂದಿನ, ಅಂದರೆ ಕ್ರಿ.ಶ. ೧೭ - ೧೮ನೇ ಶತಮಾನದ ಭಾರತದ ಶಿಕ್ಷಣ, ಚಿಂತನೆ, ದಲಿತರ ವಿದ್ಯಾಭ್ಯಾಸದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ.

ಈ ಚಿಂತನೆಯ ಮುಖ್ಯ ಅಂಶಗಳನ್ನು ಸ್ವಲ್ಪ ಸಂಗ್ರಹಿಸಬಹುದೆನಿಸುತ್ತದೆ :

(೧) ೧೯೩೧ರ ದುಂಡು ಮೇಜಿನ ಪರಿಷತ್ತಿಗೆ ಹೋದ ಗಾಂಧೀಜಿ - ''ಬ್ರಿಟಿಷರು ಬಂದ ಮೇಲೆ ನನ್ನ ದೇಶ ಹಿಂದಿಗಿಂತ ಹೆಚ್ಚು ಅನಕ್ಷರತೆಯಲ್ಲಿ ಮುಳುಗಿದೆ, ಅಜ್ಞಾನಿಯಾಗಿದೆ'' ಎಂದು ಪ್ರಸ್ತಾಪಿಸಿ ಎಲ್ಲರನ್ನು ಚಕಿತಗೊಳಿಸಿದರು. ಇತ್ತೀಚೆಗೆ ಗಾಂಧೀವಾದಿ ವಿದ್ವಾಂಸ ಧರಮಪಾಲ್ 'ಸುಂದರ ಮರ' (ಬ್ಯೂಟಿಫುಲ್ ಟ್ರೀ) ಪುಸ್ತಕದಲ್ಲಿ ಶ್ರಮವಹಿಸಿ ಸಂಶೋಧಿಸಿ ಗಾಂಧಿಯವರ ಒಳನೋಟಕ್ಕೆ ಪುರಾವೆ ಒದಗಿಸಿದ್ದಾರೆ.

(೨) ದೇಸಿ ಶಿಕ್ಷಣ ವ್ಯವಸ್ಥೆಯಲ್ಲಿ ಶೂದ್ರರಿಗೆ ವಿದ್ಯೆ ಕಲಿಯಲು ಅವಕಾಶವಿತ್ತು ಎಂಬುದನ್ನು ಅಕ್ಷರಶಃ ನೂರಾರು ದಾಖಲೆಗಳು (ಬ್ರಿಟಿಷ್ ಕಾಲದ) ತೋರಿಸಿರುವ ಪುಸ್ತಕ - ಬಳ್ಳಾರಿ ಪ್ರಾಂತದಲ್ಲಿ ''ಸುಮಾರು ೬೦೦೦ ವಿದ್ಯಾರ್ಥಿಗಳ ಪೈಕಿ ಬ್ರಾಹ್ಮಣರ ಸಂಖ್ಯೆ ಸಾವಿರ, ಇನ್ನುಳಿದವರೆಲ್ಲರು ಬ್ರಾಹ್ಮಣೇತರರು.'' (ನಾಗರಾಜ್ ಡಿ.ಆರ್. ೨೦೦೨, ಪುಟ ೮೦)

(೩) ಆದರೆ ಡಿ.ಆರ್. ದಟ್ಟ ಜಾತಿ ವ್ಯವಸ್ಥೆ ನಡುವೆ ಬೆಳೆದ ದೇಸೀ ಶಿಕ್ಷಣವನ್ನು ಮೆಚ್ಚುತ್ತಲೇ ಒಂದು ಆಲೋಚನೆ ಟಿಪ್ಪಣಿ ಮಾಡಿದ್ದಾರೆ. 'ಹದಿನೆಂಟನೆಯ, ಹತ್ತೊಂಬತ್ತನೆಯ ಶತಮಾನದಲ್ಲಿ ಅಸ್ಪೃಶ್ಯರು ಒಂದು ತೀರಾ ಸಣ್ಣಭಾಗ ದೇಸಿ ಶಾಲೆಗಳಿಗೆ ಹೋಗತ್ತಿದ್ದಾರಾದರೂ, ಒಟ್ಟಾರೆಯಾಗಿ ಅವರಿಗಿದ್ದ ಸ್ಥಾನ ಗೌಣವೇ.'' (ಅದೇ ಪು. ೮೦)

ದೇಸೀ ಶಿಕ್ಷಣ ಶೂದ್ರರ ತನಕ ಬಂದಿತ್ತು ಎಂಬುದು ನಿಜಕ್ಕೂ ಸಂತೋಷದ ವಿಷಯವಾದರೆ, ಅದು ಇಡೀ ಸಮಾಜಕ್ಕೆ ಯಾಕೆ ತಲುಪಲಿಲ್ಲ ಎಂದು ದುಃಖವಾಗುತ್ತದೆ. ಇದು ಸಂತೋಷ - ದುಃಖಗಳು ಬೆರೆತ ವಿಚಿತ್ರ ಪರಿಸ್ಥಿತಿಯಾಗಿದ್ದು ಸಾಮರಸ್ಯವಿರಲಿ ಯಾವುದೇ ಸಾಮಾಜಿಕ ವಿಷಯವಿರಲಿ ನಿಜಕ್ಕೂ ಒಳಹೊಕ್ಕು ನೋಡುವುದು ಎಷ್ಟು ಕಷ್ಟ ಎಂಬುದನ್ನು ತೋರಿಸುತ್ತದೆ.

ಶಂಕರ ಮೊಕಾಶಿ ಪುಣೇಕರರು ಆಗಮ ಸಾಹಿತ್ಯ ರಚನೆಗೆ ದಲಿತರೇ ಕರ್ತೃಗಳು ಎಂಬುದನ್ನು ಐತಿಹಾಸಿಕ ಪುರಾವೆಗಳ ಮೂಲಕ ತೋರಿಸಿಕೊಟ್ಟು ದಶಕಗಳೆರಡಾದರೂ ವಿದ್ವಾಂಸರ ಗಂಭೀರ ಚರ್ಚೆಗೆ ಒಳಪಡದಿರುವುದು ನೋವಿನ ಸಂಗತಿ. ಕಣ್ಣಪ್ಪ, ಕಬೀರ್, ನಾಥ ಪಂಥದವರ ಬಗ್ಗೆ ಹಿಂದಿ ಮತ್ತಿತರ ಭಾಷೆಗಳಲ್ಲಿ ಆಗಿರುವಷ್ಟು ಗಂಭೀರ ಅಧ್ಯಯನ ನಮ್ಮ ನೆಲದಲ್ಲಿ ಇನ್ನೂ ಆಗಬೇಕಾಗಿದೆ. ಅಂಬೇಡ್ಕರ್, ಹಜಾರಿ ಪ್ರಸಾದ್ ದ್ವಿವೇದಿ, ಮೊಕಾಶಿ, ಪರಂಪರೆಯ ಆಳವಾದ ಸಾಮಾಜಿಕ ಮೊನಚು ಕಳೆದುಕೊಳ್ಳುವ ತಲಸ್ಪರ್ಶಿ ಅಧ್ಯಯನ ಪರಂಪರೆ ಕನ್ನಡದ ನೆಲದಲ್ಲಿ ಎಂದಿಗೆ ಬೇರೂರೀತು ? ಸಾಮರಸ್ಯವೆಂದರೆ ಕೂಡಲೆ ವಿವಿಧ ಗ್ರಂಥಗಳಿಂದ ಅನುಕೂಲಕರ ಭಾಗಗಳನ್ನು ಮಾತ್ರ ಎತ್ತಿ ತೋರಿಸುವ ಕ್ರಮ ಎಷ್ಟು ಉಚಿತ ? ಹಿಂದೂ ಸಮಾಜದ ಏಕತೆಗೆ ಅದರ ವಿವಿಧತೆಯನ್ನು ಆಳವಾಗಿ ನೋಡುವ ಹೊಸ ದೃಷ್ಟಿಕೋನವೊಂದು ರೂಪುಗೊಳ್ಳುವ ಅಗತ್ಯವಿದೆ. ಭಾರತದ ಏಕತೆಗೆ ಭಂಗಬಾರದಂತೆ ಈ ಮಣ್ಣಿನಲ್ಲಿ ಅರಳಿದ ಅನೇಕ ವೈಚಾರಿಕತೆಗಳ ಮರುನೋಟ - ಹರಕು ಮುರುಕು ಸಾಮರಸ್ಯಕ್ಕೆ ಮನಸೋಲದ ಹೃದಯ ಮತ್ತು ಬುದ್ಧಿಯ ಮೂಲದ ಹುಡುಕಾಟ - ಇನ್ನೂ ಬೌದ್ಧಿಕ ನೆಲೆಗಟ್ಟಿನಲ್ಲಿ ಅರಳಬೇಕಿದೆ.

ಭಾರತೀಯ ತತ್ವಶಾಸ್ತ್ರದ ಇತಿಹಾಸ ರಚನೆ ನೋಡಿದರೆ ಬಹಳ ನಿರಾಸೆಯಾಗುತ್ತದೆ. ವೇದ-ಉಪನಿಷತ್ ಇತ್ಯಾದಿ ವೈದಿಕ ಚಿಂತನೆ, ಜೈನ, ಬೌದ್ಧ ಮೊದಲಾದ ಅವೈದಿಕ ಚಿಂತನೆಗಳನ್ನು ಬಿಟ್ಟರೆ ಮಧ್ಯಕಾಲದಲ್ಲಿ ಬಂದ ನಾಥ ಪಂಥ, ಸಿದ್ಧರು, ತಾಂತ್ರಿಕರು, ಹಲವು ಶೈವ-ಶಾಸ್ತ್ರಗಳು, ಜಾತಿ ಭೇದವನ್ನು ಕಡೆಗಣಿಸಿದ ಚಿಂತನೆಗಳ ಈ ಮಾದರಿಗಳು ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟಿಷ್ಟು ಮಹತ್ವ ಪಡೆದರೂ ಸಮಾಜಶಾಸ್ತ್ರ ತತ್ವಶಾಸ್ತ್ರ, ಬೌದ್ಧಿಕ ಇತಿಹಾಸ ಕಥನ (intellecteral history narratrion)ಗಳಲ್ಲೇಕೆ ಕಾಣಿಸಿಕೊಂಡಿಲ್ಲ? ಶಂಕರ, ರಾಮಾನುಜ, ಮಧ್ವ, ಬಸವ, ಬುದ್ಧ ಮಹಾವೀರ ... ಹೀಗೆ ಕೆಲವೇ ದಾರ್ಶನಿಕರ ಸುತ್ತ ಏಕೆ ಚರ್ಚೆಗಳು ಸುತ್ತುತ್ತವೆ? ಪ್ರಾಯಶಃ ಸಾಹಿತ್ಯವು ಅಂಬೇಡ್ಕರ್-ಲೋಹಿಯಾ ಗಾಂಧಿ ಚಿಂತನೆಯ ಮೂಲಕ ಸ್ವಂತಿಕೆಯ ಬೇರುಗಳನ್ನು ಹುಡುಕಿದಂತೆ ಉಳಿದ ಜ್ಞಾನಶಾಖೆಗಳಲ್ಲಿ ಅಂಥ ಪ್ರಯತ್ನ ಸಾಧ್ಯವಾಗಿಲ್ಲವೇನೊ? ಜೊತೆಗೆ ಇಂಡಾಲಜಿ ಮತ್ತು ಆಂಥ್ರಪಾಲಜಿ ಎರಡನ್ನು ಸಮರ್ಥವಾಗಿ ಬಳಸಿಕೊಂಡು ಕಟ್ಟಲ್ಪಟ್ಟ ಸಾಮಾಜಿಕ ಸಾಮರಸ್ಯದ ಭದ್ರ ನೆಲೆಗಟ್ಟು ಇನ್ನೂ ಕನ್ನೆನೆಲವಾಗಿದೆ.

ಇನ್ನು, ಸಾಮರಸ್ಯ ಕುರಿತ ಚರ್ಚೆಗೆ ಈ ಅಂಶಗಳು ಮೀಟುಗೋಲಾಗಬಹುದು :

ಪತ್ರಿಕೆಗಳ ವರದಿ :

೧. 'ದಲಿತ ಮಹಿಳೆಯ ಮೇಲೆ ಅತ್ಯಾಚಾರ', 'ಪಾಕಿಸ್ತಾನದಲ್ಲಿ (ಹಿಂದೂ) ದಲಿತರು' ಮೊದಲಾದ ಶೀರ್ಷಿಕೆಗಳು ನಿಜವಾಗಿಯೂ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದರೆ, 'ಮರ ಬಿದ್ದು ದಲಿತನ ಸಾವು', 'ಮರು ಉರುಳಿ ದೇವಾಲಯ ನಾಶ' ಎಂಬವು ಪತ್ರಿಕಾರಂಗದ ನೈಜ ಕರ್ತವ್ಯ ಮರೆಮಾಚುತ್ತವೆ. ಏಕೆಂದರೆ ಮೊದಲನೆಯದರಲ್ಲಿ ನಿಜವಾದ ಸಾಮಾಜಿಕ ನ್ಯಾಯದ ಕಾಳಜಿ ಇದ್ದರೆ, ಎರಡನೆಯದು ಬಾಲಿಶ ಪತ್ರಿಕೋದ್ಯಮಕ್ಕೆ ಸಂಕೇತವಾಗಬಹುದು.

೨. ಮುಕ್ತಿ, ಮೋಕ್ಷ ಕುರಿತು ವಿವಿಧ ಜಾತಿಗಳು ಈಗ ತಳೆದಿರುವ ಹೊಸ / ಬದಲಾದ ನಿಲುವುಗಳ ಅಧ್ಯಯನ, ಹೋರಾಟ, ಸಾಮಾಜಿಕ ಸಂಘಟನೆಯ ನಿರಂತರತೆಯ ನಡುವೆಯ ಆಂತರಿಕ ನೆಮ್ಮದಿಯ ಶಾಶ್ವತತೆಯ ಹುಡುಕಾಟ ಕೂಡ ಎಲ್ಲ ಜನವರ್ಗಗಳಲ್ಲೂ ನಡೆದಿರುತ್ತದೆ.

ಉದಾ : ಹಿಂದೆ ರಾಮಕೃಷ್ಣ ಮಿಷನ್, ಚಿನ್ಮಯಾಮಿಷನ್, ಆರ್ಯ ಸಮಾಜ, ಸೇರುತ್ತಿದ್ದರೆ, ಈಗ ಸಾಯಿಬಾಬಾ, ಓಶೋ, ಗಣಪತಿ ಸಚ್ಚಿದಾನಂದರ ನಂತರ ಜನ ಮಾತಾ ಅಮೃತಾನಂದಮಯಿ, ರವಿಶಂಕರ್ ಮೊದಲಾದವರ ಕಡೆ ಆಕರ್ಷಿತರಾಗುತ್ತಿದ್ದಾರೆ. ಜತೆಗೆ ಭೇದವಿಲ್ಲದೆ, ಹಾಗೆಂದು ಯಾವುದೇ ನಿರ್ದಿಷ್ಟ ಜಾತಿಯ ಲಕ್ಷಣವೆಂದು ಹೇಳಲಾರದಂತೆ - ಶಿರಡಿ ಸಾಯಿಬಾಬಾ, ಶಬರಿಮಲೆ ಅಯ್ಯಪ್ಪ, ಧರ್ಮಸ್ಥಳದ ಮಂಜುನಾಥ, ಮಂತ್ರಾಲಯದ ರಾಘವೇಂದ್ರರ 'ಮಹಿಮೆ' ಕಡಿಮೆಯಂತೂ ಆಗಿಲ್ಲ (ಆಗಬೇಕೆಂಬುದು ಅರ್ಥವಲ್ಲ). ೨೧ನೆಯ ಶತಮಾನದ ಭಾರತೀಯ - ಕನ್ನಡ ಸಮಾಜದ ಹೊಸ ಆಸಕ್ತಿ, ಹಸಿವನ್ನು ಕೇವಲ ಜನ ಓದುವ ಪುಸ್ತಕಗಳಿಂದ, ಕೆಲವು ಬುದ್ಧಿವಂತರ ಮನೆಯಲ್ಲಿನ ಲೈಬ್ರರಿಗಳ ಪುಸ್ತಕದ ಶೀರ್ಷಿಕೆ ಮೂಲಕ ಗುರುತಿಸಿದರೆ ಸಾಲದು (ಇಂಥ ಪ್ರಯತ್ನವೂ ಸ್ವಾಗತಾರ್ಹ, ಶ್ರೀ ನಾಯಕ್ ಎಂಬುವರು ಮುಂಬೈ ವಿವಿಗೆ ವಯಸ್ಕ ಓದುಗರ ಆಸಕ್ತಿ ಕುರಿತು ಮಹಾಪ್ರಬಂಧ ಸಲ್ಲಿಸಿದ್ದು, ಈ ಕುರಿತು ಬೇಂದ್ರೆಯವರನ್ನು ಅಧ್ಯಯನದ ಒಂದು 'ಮಾದರಿ'ಯಾಗಿ ತೆಗೆದುಕೊಂಡಿದ್ದು ನೆನಪಾಗುತ್ತದೆ). ಜೊತೆಗೆ ಬದಲಾಗುತ್ತಿರುವ ಆಧ್ಯಾತ್ಮಿಕ (ಧಾರ್ಮಿಕ ?) ಕೇಂದ್ರಗಳ ಹುಟುಕಾಟದ ನೆಲೆಯಲ್ಲಿಯೂ ನೋಡಬೇಕು.

೩.. ಇಂಗ್ಲಿಷ್ ಮಾತನಾಡುವ ಆದರೆ ಅದು ವ್ಯಾಕರಣ ಬದ್ಧವಲ್ಲವೆಂದು ಸಂಕಟ ಪಡುವ ಜನವರ್ಗ ಇಂದು ಶಿಕ್ಷಣದ ಮುಂದುವರಿಕೆಯಾದ ಉದ್ಯೋಗದ ಸರಪಳಿಯಲ್ಲಿದ್ದು, ಪ್ರಾಯಶಃ ವ್ಯಾಕರಣಬದ್ಧವಲ್ಲದ ಅಥವಾ Global English ಬಳಸದೆ ನಡೆಸುವ ಅಖಿಲ ಭಾರತ, ಅಂತರ - ಕರ್ನಾಟಕ ಅಧ್ಯಯನ ಇಂದಿನ ಸಾಮಾಜಿಕ ಸಂವಹನ ಅರಿಯಲು ತೀರಾ ಅವಶ್ಯಕವಾಗಿದೆ.

೪. ಜಗತ್ತನ್ನು ಇಂದಿನ ಸಾಮಾಜಿಕರು (ಉಪಜಾತಿಗಳು, ನವಜಾತಿಗಳು) ಸತ್ಯ, ಮಿಥ್ಯ, ಅರ್ಧಸತ್ಯ, ವಿಗ್ರಹ ಮೊದಲಾದ ನೋಟಗಳಿಂದ ಗ್ರಹಿಸುತ್ತಿರುವುದರ ಚಿತ್ರಪಟ ಸಿದ್ಧವಾಗಬೇಕಿದೆ.

೫. ಭಾರತೀಯ ಸಂಸ್ಕೃತಿಯನ್ನು 'ಆತ್ಮ ಸಂಸ್ಕೃತಿ' ಎಂದು ಹೊಗಳಿದರೂ, ಅದನ್ನು ಹಿಡಿದಿಡಲು ಶೂದ್ರ ಕಾಳಿದಾಸ ಹೇಳಿದಂತೆ ಶರೀರವಂತೂ ಬೇಕು. ಶರೀರ ಸಂಸ್ಕೃತಿ (ವ್ಯಾಯಾಮ, ಆರೋಗ್ಯ ರಕ್ಷಣೆ, ಪ್ರಾಣಾಯಾಮ, ...) ಇರದೆ ಯಾವ ಸಾಮರಸ್ಯವೂ ಸಾಧ್ಯವಿಲ್ಲ. (ವ್ಯಾಸ, ವಾಲ್ಮೀಕಿ, ಕಾಳಿದಾಸ ಇವರು ಯಾರೂ ಬ್ರಾಹ್ಮಣ - ಕ್ಷತ್ರಿಯ - ವೈಶ್ಯರಲ್ಲ!)

೬. ಇದು ಸಂಸ್ಕೃತದ ಮೂಲಕ ಸಂಭಾಷಣೆ ನಡೆಸಿ, ಜನರನ್ನು ಭಾಷಾ ಅಸ್ಪೃಶ್ಯತೆ (Language / Linguistic untouchability) ಯಿಂದ ಹೊರತರುವ ಪ್ರಯತ್ನ ಸಂಸ್ಕೃತ ಪ್ರತಿಷ್ಠಾನದಿಂದ ನಡೆದರೆ, ಮತ್ತೊಂದು ನೆಲೆಯಲ್ಲಿ ಬ್ರಾಹ್ಮಣ - ಶ್ರಮಣರಲ್ಲದವರು ಸಂಸ್ಕೃತದ ಬೆಳವಣಿಗೆಗೆ ಕೊಟ್ಟ ದೊಡ್ಡ ಕೊಡುಗೆಯನ್ನು ಇದೇ ಗುಂಪು ಕಡೆಗಣಿಸಿದೆ. ವಚನಕಾರರಲ್ಲಿ ಶೂದ್ರ ಉರಿಲಿಂಗ ಪೆದ್ದಿಯ ಭಾಷೆ ಗಮನಿಸಿದರೆ ಅವನು ಸಂಸ್ಕೃತದಲ್ಲಿ ಪಡೆದ ಪ್ರಭುತ್ವ ಆಶ್ಚರ್ಯವೆನಿಸುತ್ತದೆ. ಆದರೆ ಮಧ್ಯ ಯುಗದ 'ಹರಿಜನರು ವೇದಾಂತದ ಬಗ್ಗೆ, ಯೋಗ - ತಂತ್ರಗಳ ಬಗ್ಗೆ ಬರೆದರೇ ಹೊರತು ಪಂಡಿತ ಮಾನ್ಯ ಧರ್ಮಶಾಸ್ತ್ರ, ನ್ಯಾಯಶಾಸ್ತ್ರಗಳನ್ನು ಬರೆಯಲಿಲ್ಲ. ಭಾಸರ್ವಜ್ಞ, ಮಚ್ಛೇಂದ್ರನಾಥ, ಗೋರಖನಾಥ ಇಂಥವರನ್ನು ಬಿಟ್ಟರೆ ಇತರ ಹರಿಜನ ಲೇಖಕರು ಆಡುಮಾತಿನ ಸಂಸ್ಕೃತ ಬಳಸುತ್ತಾರೆ. ಪಾಣಿನಿಯ ನಿಯಮಗಳನ್ನು ಉಲ್ಲಂಘಿಸುತ್ತಾರೆ''.

ಜಾತೀಯತೆಗೆ ಪರಿಹಾರಗಳು ಇದೆಯೇ ?

ಈ ಪ್ರಶ್ನೆಗೆ ಕೈಹಾಕುವ ಮೊದಲು ಈ ಹಿಂದೂ ಭಾರತೀಯ ಸಂಸ್ಕೃತಿ ಪರಿಪೂರ್ಣತೆ ? ಎಂದು ನೋಡಬೇಕು. ಜಗತ್ತಿನ ಎಲ್ಲ ಸಂಸ್ಕೃತಿಗಳಂತೆ ಒಂದಾದ ಹಿಂದೂ ಸಂಸ್ಕೃತಿಯಲ್ಲಿ ಇತಿಮಿತಿಗಳ ನಡುವೆಯೇ ಅಪಾರ ಆತ್ಮವಿಮರ್ಶೆಯೂ ಬಂದಿದ್ದರೆ ಪರಿಣಾಮವಾಗಿ ಯಾವುದೇ ಯುಗದಲ್ಲಿ ಯಾವುದೇ ಒಂದು ತತ್ವ ಪ್ರಧಾನವಾಗೀತೇ ಹೊರತು ಸರ್ವಸಾಮಾನ್ಯವಾಗುವುದಿಲ್ಲ. ಸಾಮಾನ್ಯವಾಗಿ ಸಂಸ್ಕೃತಿ ಶಾಸ್ತ್ರಜ್ಞರು ಪ್ರಧಾನ - ಅಧೀನತೆಯ (Master Author & Sub Author) ನೆಲೆಯಲ್ಲಿ ಭಾರತೀಯ ಸಂಸ್ಕೃತಿಯನ್ನು ನೋಡಿ ಅನ್ಯಾಯ ಮಾಡಿದ್ದಾರೆ. ಕೆಲವೊಮ್ಮೆ ಕೆಲವು ಆಚರಣೆಗಳು ಪರಿಧಿಯಲ್ಲಿದ್ದು ಮತ್ತೆ ಕೆಲವೊಮ್ಮೆ ಅದೇ ಕೇಂದ್ರಕ್ಕೆ ಬಂದಿರಬಹುದು. ಹಿನ್ನೀರು ಮುನ್ನೀರುಗಳು ಮಿಶ್ರಣ ಪದೇಪದೇ ನಡೆಯುತ್ತಲೇ ಇದೆ. ಹಾಗಾಗಿ ಭಾರತೀಯ ಸಂಸ್ಕೃತಿಯು ಏಕಕಾರಿಯಲ್ಲ - ವೈದಿಕ ಮಾತ್ರವೇ ಅಲ್ಲ; ಕಾಳಿ, ದುರ್ಗಿ, ರಾಮ, ಕೃಷ್ಣ, ಶಿವರಂತೆ ಎಲ್ಲಮ್ಮ, ಅಣ್ಣಮ್ಮ, ಉತ್ತನೂರುಮಾರಿ, ಮಂಟೇಸ್ವಾಮಿ, ಜಂಜಪ್ಪ ಎಲ್ಲರೂ ಭಾರತೀಯರ ದೈವಗಳೇ ಆಗಿವೆ. 'ಜಗತ್ತಿನ ಯಾವ ಸಂಸ್ಕೃತಿಯೂ ಪರಿಪೂರ್ಣವಲ್ಲ. ಹಾಗೆ ಹೇಳುವವರು ಅಸಂಸ್ಕೃತರು. ಸಂಸ್ಕೃತಿಯ ಮುಖ್ಯ ಲಕ್ಷಣ ವಿನಯ. ವಿನಯಶೀಲತೆ, ಬಾಗಿ ನಡೆಯುವುದು, ಹೊಸ ಜ್ಞಾನದ ಸಂವೇದನೆಯ ಸ್ವೀಕಾರ' (ಮೊಕಾಶಿ ಪುಣೇಕರ್, ಪುಟ ೩)

ಹಿಂದೂ ಸಂಸ್ಕೃತಿಯು ಎಚ್ಚರದ ಆತ್ಮವಿಶ್ವಾಸದ ಸ್ಥಿತಿಯಿಂದ ನಿದ್ರೆಗೆ ಜಾರಿದಾಗ - ಜಾತಿ ವ್ಯವಸ್ಥೆಯ ಗ್ರಹಿಕೆಯಲ್ಲಿ ಉಂಟಾದ ಪಲ್ಲಟವನ್ನು ಪ್ರಸಿದ್ಧ ಸ್ವಾತಂತ್ರ್ಯೋತ್ತರ ಚಿಂತಕ ರಾಮಸ್ವರೂಪ ಸೆರೆ ಹಿಡಿದಿದ್ದಾರೆ. ಅದನ್ನು ಸ್ವಲ್ಪ ದೀರ್ಘವಾಗಿಯೇ ನೋಡಬಹುದು, ಏಕೆಂದರೆ ಪ್ರಾಯಶಃ ಗಾಂಧೀಜಿ, ಅಂಬೇಡ್ಕರ್, ಅರವಿಂದರ ನಂತರ ಭಾರತ ಕಂಡ ಅಪ್ರತಿಮ, ದರ್ಶನವುಳ್ಳ ಚಿಂತಕರಿವರು.

"For better self-articulation, it (Hindu Society) divided itself in many segments: but in all its diverse expressions, it remained one in spirit. In its caste and community organizations, we see pluralist Hinduism in action .... They had shared duties and shared incarnations and even when they went to

different temples, the Gods on the alter were the same .... They all reverenced and worshipped the mother Earth, the rivers, the sun and the Sky. All this constitutes oneness and unity at a deep, psychic level." ಇಲ್ಲಿಗೆ ಒಂದು ವಿರಾಮಕೊಟ್ಟು , ಮುಂದಿನ ವಾಕ್ಯಗಳನ್ನು ವಾಚಕ ಮಹಾಶಯರು ಹೆಚ್ಚು ಎಚ್ಚರಿಕೆಯಿಂದ ಓದಬೇಕೆಂದು ಕೋರುತ್ತೇನೆ. ಏಕೆಂದರೆ ಹಿಂದೂ ಸಂಸ್ಕೃತಿ - ಸಮಾಜದ ಮೇಲೆ ತೀವ್ರ ತಿರಸ್ಕಾರದಿಂದ ವಾದಿಸುವ ಶಿಕ್ಷಿತರು, ಹಿಂದೂ ಸಂಸ್ಕೃತಿಯ ವಕ್ತಾರರು ಮತ್ತು ಹಿಂದೂ ಶಾಸ್ತ್ರಸಾಹಿತ್ಯ ಪಾರಂಗತರಾಗಿದ್ದು ಸಾಮಾಜಿಕಜೀವನದತ್ತ ಅನಾಸಕ್ತಿ ನಿರಾಕಾರ ಪರಂಜ್ಯೋತಿಗಳೂ ದಯಮಾಡಿ ಇದನ್ನು ಓದಬೇಕು. "But deep things are difficult to see and show and we have learnt to be satisfied with the external. As a result caste has now become Hinduism's badge and flag, its defining mark. It owes to the fact that during its lean years.Hinduism last its right to self-definition. That right passed on to our rulers and they have been defining it for us. There was a time when Hinduism was described in terms of its spiritual wisdom, its yogas, its philosophy and practices of self transcendence and self exceeding, its laws of Karma and dharma, its mighty and manifold creations; but now it is presented as a system of idolatory, polytheism and castes. For example, once Hinduism was known for its Brahma - vada, now its detractors present it as a doctrine of brahmana - vada and we have lapped up such definitions (Ramswarup : 2000, pp. 28-29) ಎಚ್ಚೆತ್ತ ಸಮಾಜ ವ್ಯಾಖ್ಯಾನ ಸ್ವಾಂತಿಕೆಯ ವ್ಯಾಖ್ಯಾನದಲ್ಲಿ ತೊಡಗಿದರೆ, ನಿದ್ರಿಸುವ ಸಮಾಜ ಪರಾನ್ನ, ಪರರ ಬೌದ್ಧಿಕ, ಹಾಸ್ಯದಲ್ಲಿರುತ್ತದೆ. ಸಾಮರಸ್ಯ ಕುರಿತು ಮತ್ತೆ ಮತ್ತೆ ಚಿಂತಿಸುವ, ಕ್ರಿಯಾಶೀಲವಾಗುವ ಹಾಗೂ ಅದಕ್ಕಾಗಿ ಅಪಾರ ನೋವು, ಸಂಕಟ, ಅವಮಾನಕ್ಕೆ ಸಿದ್ಧವಾಗಿರುತ್ತವೆ.

ಈಗ ಆಗಬೇಕಾದ್ದೇನು ?

೧. ಭಾರತೀಯ ಹಿಂದೂ ಸಂಸ್ಕೃತಿ ಒಂದಿದೆ ಎಂಬ ನಂಬಿಕೆ ಮೊದಲು ವಿಚಾರಶೀಲರಲ್ಲಿ ಬರಬೇಕು. ಅದಕ್ಕೆ ಬೇಕಾದ ಓದು ನಂತರ ನಡೆಯುತ್ತದೆ.

೨. 'ದಲಿತರು' ಒಂದು ಶಾಶ್ವತ ವರ್ಗೀಕರಣ, ಹಿಂದೂಗಳ ದೊಡ್ಡ ತಪ್ಪಿನ ಫಲ ಅದು. ಉಳಿದವರಷ್ಟೇ ಬುದ್ಧಿವಂತರಾದ, ಶೀಲ ಸಂಪನ್ನರಾದ ಸಾಮಾಜಿಕ ಘಟಕವನ್ನು ದೂರ ಮಾಡಿ ಸಮಾಜ ಸಾಕಷ್ಟು ದುರ್ಬಲವಾಗಿದೆ, ಅನ್ಯರಿಂದ ಅಪಹಾಸ್ಯಕ್ಕೆ ಈಡಾಗಿದೆ. ಹಾಗಾಗಿ ಇದೊಂದು ಶಾಶ್ವತ ವ್ಯವಸ್ಥೆ - ಜರುಕು ಎಂಬ ಮನೋನೋಟವನ್ನು ಕಿತ್ತುಹಾಕಬೇಕು.

೩.. ಸಾಮಾಜಿಕ ಬಳಕೆಯಲ್ಲಾದರೂ ಸವರ್ಣಹಿಂದು, ಅಸ್ಪೃಶ್ಯ / ದಲಿತ ಪದ ನಿಷೇಧಿಸಬೇಕು. ಇದು ಆತ್ಮಾವಲೋಕನ ಭಾಗವಾದರೆ ಆತ್ಮ ಪರಿಶುದ್ಧಿಗಾಗಿ ಇಡೀ ಸಮಾಜವನ್ನು ಹಿಂದೂ ಎಂದಷ್ಟೇ ಕರೆಯುವ ಪ್ರಾಮಾಣಿಕ ಅಂಶ ಬೆಳೆಯಬೇಕು. ಆದರೆ ಜಾತೀಯತೆ ಮತಬ್ಯಾಂಕಿನ ದಾಳವಾದಂತೆ, 'ಹಿಂದೂ', ಮತಬ್ಯಾಂಕಿನ ಮುಂದೆ ಕುರಿಯಾಗಬಾರದು.

೪. ತನ್ನಷ್ಟಕ್ಕೆ ನೋಡಿದರೆ ರಾಜಕೀಯ ಅಧಿಕಾರ, ಹಣ, ಶ್ರಮಸಂಪತ್ತು, ಬೌದ್ಧಿಕ ಶಕ್ತಿ - ಇವೆಲ್ಲವೂ ಅಪಾಯಕಾರಿ. 'ತನ್ನಂತೆ ಪರರ ಬಗೆದ' ಹೃದಯವಂತಿಕೆ ಬೆರೆತರೆ ಮಾತ್ರ ಈ ನಾಲ್ಕಕ್ಕೆ ನೈತಿಕ / ಆಧ್ಯಾತ್ಮಿಕ ಶಕ್ತಿ ಬರುತ್ತದೆ. ಆಗ ಅವು ಜಾತಿ / ವರ್ಗದ ಕೊಚ್ಚೆಗೆ ಬೀಳದೆ ಸಾಮಾಜಿಕ ಏಳಿಗೆಗೆ ಸಾಧಕವಾಗುತ್ತವೆ.

೫. 'ಜಾತಿ ತಪ್ಪು ಅಂತ ಗೊತ್ತು, ಬಿಡುವುದಕ್ಕೆ ಆಗುವುದಿಲ್ಲ' - ಎಂಬ ದ್ವಂದ್ವ ಎಂದು ಹೋಗುತ್ತದೆ ? ಮದುವೆ ಕುಟುಂಬಗಳು ಮಿಲನ. ಹೊಸ ಮಾನವೀಯ ಸಂಬಂಧ ಬಿಂದು ಎಂಬ ದೃಷ್ಟಿ ಎಂದು

ಮೊಳೆಯುತ್ತದೆ? ದೇವನೂರು ಮಹದೇವರು ಗಾಂಧೀಜಿಯ ಬಗ್ಗೆ ಹೇಳಿದ್ದು ಇಲ್ಲಿ ನೆನಪಾಗುತ್ತದೆ. ಗಾಂಧೀಜಿಯವರು ತಮ್ಮ ಕಡೆಗಾಲದಲ್ಲಿ ಅಂತರ್ಜಾತೀಯ ವಿವಾಹಗಳಿಗೆ ಮಾತ್ರ ಹೋಗುತ್ತಿದ್ದುದು ಕಡಿಮೆ ಅಂಶವೇನಲ್ಲ. ನೆನೆಸಿಕೊಂಡರೆ ಮೈ ರೋಮಾಂಚನಗೊಳ್ಳುತ್ತದೆ.

೬. ಸನ್ಯಾಸಿ / ಮುನಿ / ಸ್ವಾಮಿ ಇವರು ಅನೇಕ ಸೂಫಿಗಳೂ ಸಮಾಜ ನಿರ್ಮಾಣದಲ್ಲಿ ತೊಡಗಿದ್ದವರು. ನಿಯಮಕ್ಕೆ ಬದ್ಧರಾದ ಇವರನ್ನು ಹೊರತು ಪಡಿಸಿ ತುರೀಯಾತೀತ (ಅತ್ಯಾಶ್ರಮಿ ಎಂದೂ ಹೆಸರಿದೆ)ರು, ಅವಧೂತರಿಂದಲೂ ಸಾಮಾಜಿಕ ಸಮರಸತೆಯು ಆಗಿದೆ. ಸಮಾಜ ರಕ್ಷಣೆಗಾಗಿ ಮಧುಸೂದನ ಸರಸ್ವತಿಯೆಂಬ ಅದ್ವೈತ - ಭಕ್ತಿ ಮಾರ್ಗದ ವೇದಾಂತಿ, ಮಧ್ಯಯುಗದಲ್ಲಿ 'ಕ್ಷತ್ರಿಯ, ವೈಶ್ಯ ಶೂದ್ರರಿಗೂ ಸನ್ಯಾಸವನ್ನು ಕೊಟ್ಟು ಶಸ್ತ್ರಧಾರಣೆ ಮಾಡಿಸಿದರು'. (ಶ್ರೀಕಂಠಶಾಸ್ತ್ರಿ : ೧೯೭೫, ಪುಟ . ೨೪೭) ಜಾತಿ, ಅಸ್ಪೃಶ್ಯತೆಯನ್ನು ಕಟುವಾಗಿ ಟೀಕಿಸಿದ, ವಿವೇಕಾನಂದ ಮುಂತಾದ ಸನ್ಯಾಸಿಗಳು ಆದರ್ಶಪ್ರಾಯರೇ ಹೊರತು ಸಾಮಾಜಿಕ ಜವಾಬ್ದಾರಿ ಮರೆತಿರುವ ಧರ್ಮಧ್ವಜರಲ್ಲ. ಹಿಂದೂ ಮಠಗಳಲ್ಲಿ ಇಂದಿಗೂ ಸಾಮಾಜಿಕ ಬಹಿಷ್ಕಾರ ಮುಂದುವರೆದಿರುವುದು ತೀವ್ರವಾಗಿ ವಿರೋಧಿಸಬೇಕಾದ ಅಂಶ. ಮಠಗಳು ಸಾಮಾಜಿಕ - ಧಾರ್ಮಿಕ ಕೇಂದ್ರಗಳೇ ಹೊರತು ಅದು ಸಮಾಜದ ಕೇಂದ್ರವಲ್ಲ. ಪ್ರಜಾಪ್ರಭುತ್ವ-ಸಹೋದರತೆ ಅನುಷ್ಠಾನ ೨೧ನೆಯ ಶತಮಾನದ ಮಠಗಳ ಕೇಂದ್ರ ಕಾಳಜಿ ಆಗದೆ ಹೋದರೆ ಅವು ಕೇವಲ religious hotelಗಳಾಗುತ್ತದೆ.

೭. ವೈಚಾರಿಕತೆಯನ್ನು ವೈಚಾರಿಕತೆಯಿಂದಲೇ ಎದುರುಗೊಳ್ಳುವುದು ಸುಸಂಸ್ಕೃತ ಸಮಾಜದ ಲಕ್ಷಣ. ಇಡೀ ಭಾರತೀಯ ಸಾಹಿತ್ಯರಾಶಿಯೇ ಇದಕ್ಕೆ ಸಾಕ್ಷಿ. ವಾದದಿಂದ ಬೆಳೆಯೋಣ, 'ಖಂಡೇ ಖಂಡೇ ಮತಿರ್ಭಿನ್ನ ತುಂಡೇ ತುಂಡೇ ಸರಸ್ವತಿ' ಇದು ಬೌದ್ಧಿಕತೆಯಿರುವ ಮುಕ್ತ ಸಮಾಜದ ಲಕ್ಷಣ. ಗ್ರಂಥ ದಹನ, ಲೇಖಕನಿಗೆ ಬಹಿಷ್ಕಾರ ಇದು ರೋಗಗ್ರಸ್ಥ ಸಮಾಜದ ಲಕ್ಷಣ. ಉದಾ : ಅರುಣ್ ಶೌರಿಯವರು ಅಂಬೇಡ್ಕರ್ ಕುರಿತು ಅವೈಜ್ಞಾನಿಕವಾಗಿ worshipping false Gods ಬರೆದಾಗ ಇಡೀ ದೇಶದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಯಿತು. ಕೆಲವು ಕಡೆ ಲೇಖನ - ಗ್ರಂಥ ರಚನೆ ನಡೆಯಿತು. ಆದರೆ ಪ್ರತಿ ಗ್ರಂಥ ರಚನೆಯಲ್ಲೂ ಪೂರ್ವಗ್ರಹ, ದ್ವೇಷಕಾರುವಿಕೆ ಮೇಲ್ಗೈಯಾಯಿತು. ಆದರೆ ಮರಾಠಿ ಲೇಖಕ ರಮೇಶ್ ಪತಂಗೆ ಬರೆದ ('ವಿವೇಕ' ಸಾಪ್ತಾಯಿಕ) ಲೇಖನಗಳು - 'ವೈಸ್-ರೀಗಲ್ ಕರೆಸ್ಪಾಂಡೆನ್ಸ್' ಭಾಗವನ್ನು ತೋರಿಸಿ ಅಂಬೇಡ್ಕರರನ್ನು ಹಳಿಯುವ ಪ್ರಯತ್ನ ವ್ಯರ್ಥ ಪ್ರಯಾಸ ಎಂಬುದನ್ನು ದಿಟ್ಟವಾಗಿ ತೋರಿಸಿ ಕೊಟ್ಟಿವೆ. ವಿಜ್ಞಾನ ಮತ್ತು ರಾಷ್ಟ್ರೀಯತೆಯಂತೆ ಭಾಷೆ ಶಕ್ತಿಶಾಲಿಯಾದ, ವಿವೇಚನೆಯಾತ್ಮಕ ಬಳಕೆಯನ್ನು ಬೇಡುವ ಅಸ್ತ್ರ, ಸೌಮ್ಯವಾದ, ಸೂಕ್ಷ್ಮತೆಯಿರುವ ಭಾಷೆಯೇ ಸಾಮಾಜಿಕ ಸಾಮರಸ್ಯದ ನೂರಕ್ಕೆ ಐವತ್ತರಷ್ಟು ಸಮಸ್ಯೆಯನ್ನು ತಗ್ಗಿಸುವ ಶಕ್ತಿ ಪಡೆದಿದೆ.

೮. ಇತಿಹಾಸ ನಿಂತ ನೀರಲ್ಲ. ಕಳೆದ ಶತಮಾನದ ಸ್ವಾತಂತ್ರ್ಯ ಆಂದೋಲನ, ವಿವಿಧ ಚಳುವಳಿಗಳು, ಆರ್ಥಿಕ-ಸಾಮಾಜಿಕ ಬದಲಾವಣೆಗಳ ಹರವು ನೋಡಿದರೆ ಯಾವುದಾದರೂ ಸಮಾಜ ಇದನ್ನು ಎದುರಿಸಬಲ್ಲದೇ, ಎದುರಿಸಿ ಬಾಳಬಹುದೇ ಎಂದು ಅಚ್ಚರಿಯಾಗುತ್ತದೆ. ಆದರೆ ಅಪಾರವಾಗಿ ಕಾಲನೊಡನೆ ತೊಡೆತಟ್ಟಿ ಸ್ಪರ್ಧಿಸುತ್ತಲೇ ಇರುವ ಭಾರತೀಯ ಸಂಸ್ಕೃತಿ ಈಗ ತನ್ನ ಪಾಪಗಳಿಗೆ ಬಳಗೇ ಬೇಯುತ್ತಿದೆ. ನೋವಿನಿಂದ ಪರಿಪಾಕಗೊಂಡ ಮನಸ್ಥಿತಿಯಿಂದ ನಡೆಯುವ ಸಾಮಾಜಿಕ ಕೆಲಸಗಳು ಸಮಾಜಕ್ಕೆ ಒಳನೋಟ, ಶಕ್ತಿ ತರುವುದರೊಂದಿಗೆ, ಅಪಾರ ಆತ್ಮವಿಶ್ವಾಸ ತಂದು ಕೊಡುತ್ತದೆ.

೯. ಸ್ಲಮ್‌ಗಳಲ್ಲಿ ನಡೆಯುವ ರಾತ್ರಿ ಶಾಲೆಗಳು, ಜಾತೀಯತೆಯ ಸೋಂಕಿಲ್ಲದ ಶಿಕ್ಷಕರು, ಹಣ-ಜಾತಿ ಮುಖನೋಡದ ಸಾಧುಗಳು, ಜನಪ್ರಿಯತೆಗೆ ಹಾತೊರೆಯುವ ಚಿಂತಕರು ಈಗಲೂ ಇದ್ದಾರೆ. ಅವರ ಸಾಮಾಜಿಕ ಸೇವೆಯಿಂದ ಸಮಾಜದಲ್ಲಿ ಚೈತನ್ಯಸ್ಪಂದನ ಉಳಿದಿದೆ. ಆದರೆ ಮಾಧ್ಯಮಗಳು ನೈತಿಕ ಸ್ಥೈರ್ಯ, ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದರಿಂದ India (ನಗರ ಕೇಂದ್ರಿತ)

ಮತ್ತು ಭಾರತ (ಹಳ್ಳಿ ಕೇಂದ್ರಿತ) ಗಳಾಚೆಗಿನ ಮತ್ತೊಂದು ನಾಡನೆಲೆ ಚಿಂತಿತವಾಗುತ್ತಿಲ್ಲ. ದಲಿತ ಚಳುವಳಿಗಳು ಮುಟ್ಟದ ದಲಿತರಿರುವಂತೆ ಯಾವ ಸ್ಪರ್ಶಕ್ಕೂ ಸಿಕ್ಕದ ಸಮಾಜದ ಸ್ಪಂದನಕ್ಕೆ ಕಾದಿರುವ ಎಷ್ಟೋ ಜನವರ್ಗಗಳಿಗೆ ಸಾಮರಸ್ಯ ನಿಜಕ್ಕೂ ಬೇಕಿದೆ.

ಮನುಷ್ಯನ ಹೃದಯಕ್ಕೂ ಮಿದುಳಿಗೂ ಕೇಲವ ಒಂದಡಿ ದೂರವಿದೆ. ಹೃದಯಕ್ಕೆ ಸರಿ ಅನ್ನಿಸಿದ್ದು ಮಿದುಳಿಗೆ ತಲುಪಲು ಐವತ್ತು-ಅರವತ್ತು ವರ್ಷಗಳಾಗುತ್ತೆ . ಕೆಲವರಿಗೆ ಅದೂ ಆಗಲ್ಲ ಅಂತ ಯಾವುದೋ ಭಾಷಣದಲ್ಲಿ ಎಲ್.ಎಸ್. ಶೇಷಗಿರಿರಾವ್ ಹೇಳಿದ್ದು ಯಾಕೋ ಈಗಲೂ ಕಿವಿಯಲ್ಲಿ ಕೊರಿತಾ ಇದೆ,

ಆಧಾರ ಸಾಮಗ್ರಿ

೧.	ಸಿದ್ಧಲಿಂಗಯ್ಯ , ೧೯೯೭	ಊರುಕೇರಿ, ಹೆಗ್ಗೋಡು
	ಸಿದ್ದಲಿಂಗಯ್ಯ , ೨೦೦೬	ಆತ್ಮಕಥನ ೨, ಬೆಂಗಳೂರು
೨.	ಠೇಂಗಡಿ ದತ್ತೋಪಂತ, ೨೦೦೫	ಬಾಬಾಸಾಹೇಬ್ ಅಂಬೇಡ್ಕರ್
		ಜಾರ್ ಸಾಮಾಜಿಕ ಕ್ರಾಂತಿ ಯಾತ್ರಾ (ಹಿಂದಿ), ಲಕ್ನೋ
೩..	ಮೊಗಳ್ಳಿ , ಅರವಿಂದ , ೨೦೦೦	ಗೌರ್ಮೆಂಟ್ ಬ್ರಾಹ್ಮಣ, ಮೈಸೂರು
೪.	ನಾಗರಾಜಪ್ಪ ಕೆ.ಜಿ. ೧೯೯೮	ಇಕ್ಕಟ್ಟು ಬಿಕ್ಕಟ್ಟು, ತುಮಕೂರು
೫.	Punckar, Shankar Mokashi, 1991	Harijan Contributio to Medieval Indian Thought, Bangalore
೬.	ನಾಗರಾಜ್ ಡಿ.ಆರ್.	ಸಂಸ್ಕೃತಿ-ಕಥನ, ಹೆಗ್ಗೋಡು
೭.	Ghurge G.S., 2004	Caste and Race in India, Mumbai
೮.	Ram Swarup, 2002	On Hinduism Reviews and Reflections, New Delhi
೯.	ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (ಸಂ:)	ಕನ್ನಡ ಸಾಹಿತ್ಯ – ಪ್ರತಿಭೆಯ ಸ್ವರೂಪ, ಬೆಂಗಳೂರು ವಿವಿ, ಬೆಂಗಳೂರು
೧೦.	ಚಂದ್ರಿಕಾ ಪಿ. (ಸಂ:)	ಯಾರ ಜಪ್ತಿಗೂ ಸಿಗದ ನವಿಲುಗಳು, ಬೆಂಗಳೂರು
೧೧.	ಶ್ರೀಕಂಠಶಾಸ್ತ್ರಿ ಎಸ್. ೧೯೭೫	ಭಾರತೀಯ ಸಂಸ್ಕೃತಿ, ಮೈಸೂರು ವಿವಿ, ಮೈಸೂರು
೧೨.	ಪತಂಗೆ, ರಮೇಶ್ : ೧೯೯೭	"ಬಾಬಾಸಾಹೇಬ್ ಅಂಬೇಡ್ಕರ್" ಶೌರಿ ಆರೋಪ : ಪತಂಗೆ ಉತ್ತರ, ಬೆಂಗಳೂರು

❑

೪

ಗ್ರಾಮನಾಮ

ತಿರುಮಲೆ ಶ್ರೀ ರಂಗಾಚಾರ್ಯ

ಊರು-ಹಳ್ಳಿಗಳ ಹೆಸರನ್ನು ಬದಲಾಯಿಸಿ, ಹೊಸಹೆಸರು ಇಡುವ ಪರಿಪಾಟು ಇತ್ತೀಚೆಗೆ ಹೆಚ್ಚಾಗುತ್ತಿದೆ. ಬಹಳ ಹಿಂದೆ, ಮೈಸೂರು ಸಂಸ್ಥಾನ ಅಸ್ತಿತ್ವದಲ್ಲಿದ್ದಾಗಲೇ ಕ್ಲೋಸ್‌ಪೇಟೆ ರಾಮನಗರವಾಯಿತು. ಕಾನ್‌ಕಾನ್‌ಹಳ್ಳಿ ಕನಕಪುರ, ಬೌರಿಂಗ್‌ಪೇಟೆ ಬಂಗಾರಪೇಟೆ – ಹೀಗೆ ನಾಮಾಂತರವಾದ ಊರುಗಳಲ್ಲಿ ವಡಿಗೇನಹಳ್ಳಿಯೂ ಒಂದು. ಈಗ ಅದು ವಿಜಯಪುರ.

ಬ್ರಿಟಿಷ್ ಸಾರ್ವಭೌಮತ್ವದ ಪ್ರಭಾವ; ಕರ್ನಲ್ ಕ್ಲೋಸ್ ಎಂಬವ ತನ್ನ ಠಾಣ್ಯವನ್ನು ಹೂಡಿದ ಊರು ಕ್ಲೋಸ್‌ಪೇಟೆ ಆಯಿತು, ಕ್ರಮೇಣ ವ್ಯಾಪಾರ – ವ್ಯವಹಾರ ಕೇಂದ್ರವಾಗಿ ಬೆಳೆಯಿತು. ಸ್ವಾತಂತ್ರ್ಯದ ಜಾಗೃತಿ ಜನರಲ್ಲಿ ಮೂಡಿದ ಕಾರಣದಿಂದ ಬ್ರಿಟಿಷ್ ಸೇನಾಧಿಕಾರಿ ಹೆಸರು ನಮ್ಮ ಊರಿಗೇಕೆ ಎಂದು ಆ ಹೆಸರನ್ನು ಬಿಟ್ಟು 'ರಾಮನಗರ' ಎಂದು ನಾಮಕರಣವಾಯಿತು.

ಬೌರಿಂಗ್ ಪೇಟೆಯ ಮಾತೂ ಇದೇ ನೆಲೆಯದೇ. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಬೌರಿಂಗ್ – ಕರ್ಜನರಿಂದ ಎಂಥ ಸ್ಥಿತಿ ಬಂತು ಎಂಬುದು ಕತೆಯಲ್ಲ; ಇತಿಹಾಸ. ಅಂಥ ವ್ಯಕ್ತಿಯ ಹೆಸರು ಊರಿಗೇಕೆ ಎಂದು ಚಿನ್ನದಗಣಿಯ ಹಾದಿಯ ಊರನ್ನ ಬಂಗಾರಪೇಟೆ ಎಂದು ಕರೆದದ್ದಾಯಿತು.

ಇದೆಲ್ಲಕ್ಕೂ ಮುಂಚೆ ಹೆಸರು ಬದಲಾದದ್ದು ಕಾನ್‌ಕಾನ್‌ಹಳ್ಳಿಗೆ. ಇದೇನು ಕಾನ್‌ಕಾನ್ ? ಯಾರ ಹೆಸರು? ಆಂಗ್ಲದ್ದೇ ಇಸ್ಲಾಮಿಯದ್ದೇ ? ಹೇಗೋ ಏನೋ ಅಂತು ಅದು ಕನಕಪುರ ಎಂದಾಯಿತು.

ಇದಲ್ಲಿ ಆದರೂ ತುಮಕೂರು ರಸ್ತೆಯಲ್ಲಿರುವ ಡಾಬ್ಸ್‌ಪೇಟೆ ಸದ್ದಿಲ್ಲದೆ ಹಾಗೇ ಸಾಗಿದೆ. ಹಳೆಯ ಕಾಗದ ಬರಹಗಳನ್ನು ನೋಡುತ್ತಿದ್ದಾಗ ಡಾಬ್ಸ್‌ಪೇಟೆಯಲ್ಲಿ ಸಮಾರಂಭ ಒಂದಕ್ಕೆ ಹೋಗಿದ್ದ ತಿ.ತಾ. ಶರ್ಮರು ಸ್ವಾಮಿ ವಿವೇಕಾನಂದರನ್ನು ಕುರಿತು ಮಾತನಾಡಿ "ನಿಮ್ಮ ಊರಿಗೆ ವಿವೇಕಾನಂದ ನಗರ" ಎಂದೇಕೆ ಹೆಸರಿಡಬಾರದು ? ಕ್ಲೋಸ್‌ಪೇಟೆ, ಬೌರಿಂಗ್‌ಪೇಟೆಗಳೇ ಅಳಿಸಿ ಹೋಗಿರುವಾಗ ಈ ಡಾಬ್ಸ್ ಪೇಟೆ ಏಕೆ" ? ಎಂದು ಗುರುತಿಸಿರುವುದು ಕಣ್ಣಿಗೆ ಬಿತ್ತು.

"ಕಬ್ಬನ್ ಪಾರ್ಕ್" ಚಿರಂಜೀವತ್ವ ಇದ್ದ ಹಾಗೆ ಇದೆ. ನಮ್ಮ ರಾಜಕಾರಣಿಗಳಿಗೆ ನೆಲೆಭದ್ರತೆಯ ಉಸಾಬರಿಯಲ್ಲಿ ಇಂಥ ವಿಚಾರಗಳಿಗೆ ಅವರ ಗಮನ ಹೇಗೆ ಹರಿದಾತು ?

ಕೆಲವು ತಿಂಗಳುಗಳ ಹಿಂದೆ ಕಾರ್ಯಕ್ರಮ ಒಂದಕ್ಕೆ ವಿಜಯಪುರಕ್ಕೆ ಹೋದೆ. ಪ್ರಾಚೀನವಾದ ಊರು. ಹಳೆಯ ಮನೆಗಳಲ್ಲಿರುವ ಬಾಗಿಲುಗಳು, ಒಳಗಿನ ಕಂಬಗಳು ಈ ಮಾತಿಗೆ ಸಾಕ್ಷಿಗಳಾಗಿವೆ. ಕಾರ್ಯಕ್ರಮ ಮುಗಿದಮೇಲೆ ಸ್ನೇಹಿತರೆಲ್ಲ ಕುಳಿತು ಮಾತನಾಡುತ್ತಿದ್ದಾಗ "ನಿಮ್ಮೂರಿನ ಹಳೆಯ ಹೆಸರೇನು ಗೊತ್ತಿದೆಯೇ"? – ನಾನು ಕೇಳಿದೆ. ಎಲ್ಲರೂ ಸುಮ್ಮನಿದ್ದರು. ಸ್ವಲ್ಪ ತಡವಾಗಿ ಒಬ್ಬರು "ವಡಿಗೇನಹಳ್ಳಿ" ಅಂದರು. ಹೌದು "ವಡಿಗೇನಹಳ್ಳಿ" ಏನು ಹಾಗಂದರೆ ? ಯಾರೂ ಉತ್ತರ ಕೊಡಲಿಲ್ಲ. ನನಗೂ ಇದು ಆಲೋಚಿಸಲು ಒಂದು ಕೀಲಕವಾಯಿತು.

ಕೋಲಾರ ಜಿಲ್ಲೆಯ ಪೂರ್ವದ ಗಡಿಯಾಚೆ "ವಾಯಲ್ಪಾಡು" ಎಂಬ ಊರು. ಅಲ್ಲಿ ನಮ್ಮ ಮಾತಾಮಹರ ಮನೆತನದವರು ಇದ್ದರು. ಆ ಊರಿನ ಸನಿಹದಲ್ಲಿ ಇನ್ನೊಂದು ಗ್ರಾಮ, "ಬಡಿಕಾಯಲಪಲ್ಲಿ". ಆ ಊರಿನಲ್ಲಿ ನನ್ನ ಒಬ್ಬ ಸೋದರ ಮಾವನ ಮದುವೆ ಆದದ್ದು ಸುಮಾರು ೭೦ ವರ್ಷಗಳ ಹಿಂದೆ. ನನ್ನ ವಡಿಗೇನಹಳ್ಳಿ ಕುರಿತ ಚಿಂತನೆಯ ಲಹರಿಯಲ್ಲಿ "ಬಡಿಕಾಯಲಪಲ್ಲಿ"ಯ ನೆನಪು ಬಂತು.

ತೆಲುಗಿನಲ್ಲಿ "ಬಡಿ" ಎಂದರೆ ಶಾಲೆ. "ಬಡಿಕಾಯಲು" ಎಂದರೆ ಶಾಲೆಗೆ ಹೋಗುವ ಹುಡುಗರು – 'ಶಾಲಾ ಬಾಲಕರು' ಎಂದು. ಬಡಿಕಾಯಲಪಲ್ಲಿ ಹಾಗಾದರೆ ಶಾಲೆ ಹುಡುಗರ ಹಳ್ಳಿ ಎಂದಾಯಿತು. ಅಂದಮೇಲೆ

ಅಲ್ಲಿ ಒಂದು ಶಾಲೆ ಇತ್ತು . ಪ್ರಾಚೀನ ಗ್ರಾಮಗಳಲ್ಲೂ ಶಾಲೆಗಳಿದ್ದವು. ಓದು-ಬರಹಗಳನ್ನು ಬಾಲಕರಿ ಕಲಿಸಲಾಗುತ್ತಿತ್ತು .

ಕನ್ನಡದ 'ವಡಿ' ತೆಲುಗಿನ 'ಬಡಿ' ಆಗಿದೆ. ತೆಲುಗಿನ ಬಡಿಕಾಯಿ (ಪಿಲಕಾಯಿ – ಹುಡುಗ ಎಂಬಂತೆ ಕನ್ನಡದ ವಡಿಗ್ಯಾನು ಗ್ರಾಮೀಣ ಸಂಭಾಷಣೆಯಲ್ಲಿ ಅನ್ವರ್ಥನಾಮಕ್ಕೆ "ಗ್ಯಾನು" ಸೇರಿಸಿ ಗುರುತಿಸುವುದ ವಾಡಿಕೆ. ಇದು ತೆಲುಗಿನಲ್ಲಿ "ಗ್ಯಾಡು" ಆಗುತ್ತದೆ. ವಡಿಗ್ಯಾನು – ವಡಿಗೇನು ಸುಲಭರೂಪ ತಾಳಿದೆ. ವಡಿಗ್ಯಾ ಹಳ್ಳಿ – ವಡಿಗೇನಹಳ್ಳಿ ಎಂದಾಗಿದೆ. ಇಲ್ಲಿಯೂ ಹಿಂದೆ ಪಾಠಶಾಲೆ ಇತ್ತೆಂಬುದರ ಸೂಚನೆ ಸ್ಪಷ್ಟವಾಗಿದ ಗ್ರಾಮಾಂತರಗಳಲ್ಲೂ ವಿದ್ಯಾಬೋಧೆ ನಡೆಯುತ್ತಿತ್ತೆಂಬುದರ ಸಾಕ್ಷಿಯಾಗಿವೆ. ಇಂತಹ ಗ್ರಾವ ನಾಮಗಳು.ಯಾವುದೋ ಕಾರಣಕ್ಕೆ ಇಂತಹ ಗ್ರಾಮನಾಮಗಳನ್ನು ಪಕ್ಕಕ್ಕೆ ತಳ್ಳಿ ಹೊಸ ಹೆಸರಿಡುವುದು ಪ್ರಾಚೀ ಇತಿಹಾಸದ ಸಾಕ್ಷಿಗಳ ನಾಶನ ಎಂದೇ ಹೇಳಬೇಕಾಗುತ್ತದೆ. ಈ ರೀತಿಯ ನಾಮಾಂತರ ಕ್ರಿಯೆಗೆ ಮುನ್ನ ಅದ ಐತಿಹಾಸಿಕ ನೆಲೆಯತ್ತ ಚಿಂತನೆ ನಡೆಸಿ ಅನಂತರ ಅತ್ಯಗತ್ಯ ಕಂಡಲ್ಲಿ ಹೊಸನಾಮಕರಣಕ್ಕೆ ತೊಡಗುವುದು ಲೇಸು ಆತುರಪಟ್ಟ ನಿರ್ಧಾರ ಮೌಲಿಕ ದಾಖಲೆಯ ನಷ್ಟ

ವಡಿಗೇನಹಳ್ಳಿ ನಮ್ಮ ಪ್ರಾಚೀನ ಶಿಕ್ಷಣದ ನೆಲೆಯಾಗಿದ್ದದ್ದು ಹೆಮ್ಮೆಯ ವಿಚಾರವಲ್ಲವೇ ? – ಕ್ಷೇತ್ರಕಾರ್ಯಕ್ಕೆ ಇದೊಂದು ನೆಲೆಯೂ ಆಗಿದೆಯಲ್ಲವೇ ?

ಸಹಕಾರಿ ಸಂಘಗಳ ಹಿಂದುಮುಂದು

'ಕರ್ಣಾಟಕ ಕೇಸರಿ' ಯಿಂದ

೧೯೨೭ಜುಲೈನಲ್ಲಿ ಪ್ರಾರಂಭವಾದ 'ಕರ್ಣಾಟಕ ಕೇಸರಿ' ಮಾಸಪತ್ರಿಕೆಯು ದಕ್ಷಿಣಕನ್ನಡದ ಪುತ್ತೂರಿನಿಂದ ಹೊರಟರು, ಕನ್ನಡ ಸಾಹಿತ್ಯ ಪತ್ರಿಕೆಗಳಲ್ಲಿ ವಿಶಿಷ್ಟ ಸ್ಥಾನವುಳ್ಳದ್ದು. ಅದು ಒಂದು ಕಾಲಕ್ಕೆ, ಕನ್ನಡದ ಮಹತ್ತದ ಬರಹಗಾರರ ಸಾಂಸ್ಕೃತಿಕ ವೇದಿಕೆ ಕೂಡ ಆಗಿತ್ತು. ಆದರೆ ಕೆಲವು ವೈಚಾರಿಕ ಲೇಖನಗಳ ಬರಹಗಾರರು ಯಾರು ಎಂಬುದೇ ನಮೂದಾಗಿಲ್ಲ. ಅಂಥ ಬರಹದಲ್ಲಿ ೧೯೨೭ ನವೆಂಬರ್ ಸಂಪುಟ ೧, ಸಂಚಿಕೆ ೫ರ ಮೇಲ್ಕಂಡ ಲೇಖನವೂ ಒಂದು. ಇಂದಿಗೆ ಪ್ರಕಟವಾಗಿ ೮೧ ವರ್ಷಗಳಾದರೂ, ಆಗಿನ ಹಾಗೂ ಆವರೆಗಿನ ವಸ್ತುಸ್ಥಿತಿಯನ್ನ ವಿವೇಚಿಸುವುದೇ ಅಲ್ಲದೆ, ಇವತ್ತಿಗೂ ಅಲ್ಲಿನ ವಿಚಾರಗಳು ಎಷ್ಟು ಮುಖ್ಯ ಮತ್ತು ಆ ಲೇಖನದ ಆಲೋಚನೆಯ ಪರಿಣಾಮವನ್ನೇ ಮುಟ್ಟಿರುವುದು ಕೂಡ ಈಗ ಪರಿಶೀಲಿಸಬೇಕಾದ ಅಗತ್ಯವಿದೆ. ಮೈಸೂರು ವಿಶ್ವವಿದ್ಯಾನಿಲಯ, ಶ್ರೀನಿವಾಸ ಹಾವನೂರರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಕನ್ನಡ ಪತ್ರಿಕಾ ಸೂಚಿ' ಪುಟ ೧೮ರಲ್ಲಿ ಈ ಪತ್ರಿಕೆಯ ಹೆಸರು ತಪ್ಪಾಗಿಯಲ್ಲ ತಿರುಚಿ ಕರ್ನಾಟಕ ಎಂದು ಅಚ್ಚಾಗಿರುವುದು, ದಾಖಲಿಸಿರುವುದು ಅಕ್ಷಮ್ಯ. ಇನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದ 'ಕನ್ನಡ ಸಾಹಿತ್ಯ ಪತ್ರಿಕೆಗಳು : ಇತಿಹಾಸ – ವರ್ತಮಾನ' ಎಂಬ ಪುಸ್ತಕದಲ್ಲಿ ದಾಖಲಿಸಿರುವ ರೀತಿಯಂತೂ ಹಾಸ್ಯಾಸ್ಪದವಾಗಿದೆ..

ಸಂಪಾದಕ

ಸಹಕಾರಿ ಸಂಘಗಳೆಂಬ ಸಂಸ್ಥೆಗಳು ಈಗೇನೂ ಹೊಸದಲ್ಲ . ಸಹಕಾರಿ ಸಂಘಗಳ ಏರ್ಪಾಡಿಗೋ ಇಂಡಿಯಾ ಸರಕಾದವರು ಪ್ರಥಮದ ಕಾನೂನನ್ನು ಮಾಡಿ ಇಂದಿಗೆ ೨೫. ವರ್ಷಗಳಿಗೂ ಮೇಲಾಯಿ ಅನಂತರ, ಹಳೆಯ ಕಾನೂನಿನಲ್ಲಿ ಅನೇಕ ತರದ ಮುಖ್ಯ ಮುಖ್ಯ ಬದಲಾವಣೆಗಳನ್ನು ಮಾಡಿ ಎರಡನೇ

ಕಾನೂನನ್ನು ಏರ್ಪಡಿಸಿಯೂ ೧೫ ವರ್ಷಗಳಾದುವು. ಆ ಹೊಸ ಕಾನೂನನ್ನು ಮಾಡಿ ನಾಲ್ಕೈದು ವರ್ಷಗಳಾದಾಗ, ಅಂದಿನ ತನಕದ ಬೆಳವಣಿಗೆಯನ್ನು ಪರಿಶೀಲಿಸಿ, ಮುಂದಿನ ದಾರಿಯನ್ನು ತೋರಿಸಲಿಕ್ಕೆಂದು ಇಂಡಿಯಾ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿದರು. ಸದರಿ ಕಮಿಟಿಗೆ ಸರ್ ಎಡ್ವರ್ಡ್ ಮೆಕ್ಲೆಗನ್ ಎಂಬುವರು ಅಧ್ಯಕ್ಷರಾಗಿದ್ದುದರಿಂದ, ಅದಕ್ಕೆ ಮೆಕ್ಲೆಗನ್ ಕಮಿಟಿಯೆಂದು ಹೆಸರಾಯಿತು. ಆ ಕಮಿಟಿಯವರು ಇಡೀ ಹಿಂದೂ ದೇಶದಲ್ಲಿ ಸಂಚಾರ ಮಾಡಿ, ಬೇರೆ ಬೇರೆ ಪ್ರಾಂತಗಳಲ್ಲಿನ ಸಂಸ್ಥೆಗಳನ್ನೂ ಸರಕಾರಿ ಜಿನ್ ಸರಕಾರಿ ಚಾಲಕರನ್ನೂ ವಿಚಾರಿಸಿ ಅನೇಕ ತತ್ತ್ವಗರ್ಭಿತವೂ, ಅತ್ಯಂತ ಬೋಧಪ್ರದವೂ ಬಹಳ ಮಟ್ಟಿಗೆ ಮಾರ್ಗದರ್ಶಕವೂ ಆಗಿದ್ದ ಒಂದು ದೊಡ್ಡ ವರದಿಯನ್ನು ತಯಾರಿಸಿದರು. ಅದರಲ್ಲಿನ ಸೂಕ್ತಿಗಳು ಸಹಕಾರಿಗಳಿಗೆಲ್ಲ ಇಂದಿಗೂ ಶ್ರುತಿವಚನಗಳಂತಿವೆ. ಆದರೆ ಶ್ರುತಿಗಳೆಂಬ ಗ್ರಂಥಗಳು ಇವೆ ಎಂಬ ವರ್ತಮಾನವನ್ನು ಕಿವಿಯ ಮೇಲೆ ಹಾಕಿಕೊಂಡವರ ಸಂಖ್ಯೆಯೇ ಹೆಚ್ಚಿದ್ದು, ಶ್ರುತಿ ವಚನಗಳನ್ನು ಪಠಿಸಿದವರ ಸಂಖ್ಯೆಯು ಕಡಿಮೆಯಾಗಿ, ಆ ಶ್ರುತಿವಚನಗಳನ್ನು ಆಚರಣೆಯಲ್ಲಿ ಅನುಸರಿಸುತ್ತಿರುವವರ ಸಂಖ್ಯೆಯು ಇನ್ನೂ ಕಡಿಮೆಯಾಗಿರುವಂತೆ, ಮೆಕ್ಲೆಗನ್ ಕಮಿಟಿಯ ವರದಿಯ ಸೊಗಸಿಗೆ ಮೆಚ್ಚಿ ತಲೆಯನ್ನು ಮಾತ್ರ ತೂಗಿದವರ ಸಂಖ್ಯೆಗಿಂತ ಅದನ್ನು ಮನ್ನಿಸಿ ಅನುಷ್ಠಾನದಲ್ಲಿ ತಂದವರ ಸಂಖ್ಯೆಯು ಎಷ್ಟೋ ಕಡಿಮೆಯೆನ್ನಬೇಕು. ಆದುದರಿಂದಲೇ, ಆ ವರದಿಯು ಪ್ರಕಟವಾಗಿ ೧೦-೧೨ ವರ್ಷಗಳಾದ ಇಂದಿಗೆ ಸಹಕಾರಿ ಚಳವಳಿಯಲ್ಲಿ ಸುಖವೂ ಶಾಂತತೆಯೂ ತೃಪ್ತಿಯೂ ನೆಲೆಗೊಂಡಿರುವುದರ ಬದಲಿಗೆ ದುಃಖವೂ ಕಳವಳವೂ ಅತೃಪ್ತಿಯೂ ತಲೆದೋರಿವೆ. ಸಹಕಾರಿ ಚಳವಳಿಯಲ್ಲಿ ಪಾತ್ರಲ್ಯವುಳ್ಳವರೂ ದಿಗ್ಭ್ರಾಂತರಾಗಿ ಮೊರೆಯಿಡತೊಡಗಿದ್ದಾರೆ. ದೇಶ ಹಿತಾಕಾಂಕ್ಷಿಗಳು, ಗತಿಹೀನರ ಉದ್ಧರಣಕ್ಕೆ ಸಹಕಾರವೆಂಬುದೊಂದು ಬಲವಾದ ಸಾಧನವೆಂದು ಮೊದಲು ಮೊದಲು ನಂಬಿಕೊಂಡಿದ್ದವರು, ಸಹಕಾರಿ ಸಂಸ್ಥೆಗಳ ಇಂದಿನ ದುರವಸ್ಥೆಯನ್ನು ನೋಡಿ ಸಹಿಸಲಾರದೆ, ಮನಸ್ಸು ಒಪ್ಪದಿದ್ದರೂ ಬೇರೆ ದಾರಿ ಕಾಣದವರಾಗಿ, ತಾವು ಅಂತಹ ಸಂಸ್ಥೆಗಳೊಂದಿಗೆ ಬೆಳೆಸಿಕೊಂಡಿದ್ದ ಸಂಬಂಧಗಳನ್ನು ಒಂದೊಂದಾಗಿ, ಕಡಿದುಕೊಳ್ಳುತ್ತಿದ್ದಾರೆ. ಇಷ್ಟು ಮಟ್ಟಿನ ಅವದಶೆಯು ಪ್ರಾಪ್ತವಾಗಲಿಕ್ಕೆ ಕಾರಣವೇನೆಂಬುದನ್ನು ಶೋಧಿಸಿ, ತಕ್ಕ ಪರಿಹಾರಗಳನ್ನು ಕಂಡು ಹಿಡಿಯುವುದು ಅತಿ ಜರೂರಿನ ಕೆಲಸವಾಯಿತು. ಆದರೆ ಇಂತಹ ಕೆಲಸವನ್ನು ಸಹಕಾರದಲ್ಲಿ ಚೆನ್ನಾಗಿ ನುರಿತ ಅಭಿಜ್ಞರೇ ಮಾಡಬೇಕಲ್ಲದೆ ಅನ್ಯರು ಮಾಡಲಿಕ್ಕೆ ಸಾಧ್ಯವಿಲ್ಲ. ಇದರ ಸಲುವಾಗಿ ಮದರಾಸು ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಜೆಗಳ ಕಡೆಯ ಪ್ರತಿನಿಧಿಗಳು ಅನುಮೋದಿಸಿದ ಒಂದು ನಿರ್ಣಯವನ್ನು ಪ್ರಾಂತಿಕ ಸರಕಾರದವರು ಅಂಗೀಕರಿಸಿ, ಅಭಿಜ್ಞರ ಕಮಿಟಿಯೊಂದನ್ನು ಏರ್ಪಡಿಸಿದ್ದರು.

ಈ ಕಮಿಟಿಯವರು ತಮ್ಮ ಕೆಲಸಗಳನ್ನು ಈಗಾಗಲೇ ಪ್ರಾರಂಭಿಸಿದ್ದಾರೆ. ವಿಚಾರಕ್ಕಾಗಿ ತಮಗೆ ವಹಿಸಿಕೊಟ್ಟ ವಿಷಯಗಳಿಗೆ ಸಂಬಂಧಿಸಿದ ಕೂಲಂಕಷವಾದ ಒಂದು ಪ್ರಶ್ನಾವಳಿಯನ್ನು ತಯಾರಿಸಿ ಅನೇಕ ಮಂದಿ ಗೃಹಸ್ಥರಿಗೂ ಅನೇಕ ಸಹಕಾರಿ ಸಂಸ್ಥೆಗಳಿಗೂ ಕಳುಹಿಸಿದುದಲ್ಲದೆ, ಬೇರೆ ಬೇರೆ ಜಿಲ್ಲೆಗಳಲ್ಲೆಲ್ಲ ಸಂಚರಿಸಿ, ಸಹಕಾರಾಸಕ್ತರಾಗಿರುವವರನ್ನು ಒಬ್ಬೊಬ್ಬರನ್ನಾಗಿ ಬಾಯ್ದೆರೆಯಿಂದಲೂ ವಿಚಾರಣೆ ಮಾಡುತ್ತ ಬಂದಿದ್ದಾರೆ. ಸಹಕಾರಿ ಸಂಘಗಳ ಈಗಿನ ಸ್ಥಿತಿಗತಿಗಳನ್ನು ಕುರಿತಾಗಿಯೂ ಇನ್ನು ಮುಂದಕ್ಕೆ ಅನುಸರಿಸತಕ್ಕ ದಾರಿಯನ್ನು ಕುರಿತಾಗಿಯೂ ಹಲವರು ಹಲವು ಬಗೆಯ ಅಭಿಪ್ರಾಯಗಳನ್ನು ಬಯಲು ಪಡಿಸಿದ್ದಾರೆ. ಅವುಗಳೊಂದಿಗೆ ನಮಗೆ ತೋಚಿದ ನಾಲ್ಕು ಅಭಿಪ್ರಾಯಗಳನ್ನೂ ಸಹಕಾರಿಗಳ ಮುಂದಿಡಬೇಕಾಗಿ ನಮ್ಮಾಶಯವಾಗಿದೆ.

ಹಿಂದೂ ದೇಶದ ಕಲ್ಯಾಣವು ಪಟ್ಟಣಗಳ ಬೆಳವಣಿಗೆಯ ಮೇಲೆ ಹೊಂದಿಕೊಂಡಿರುವುದಕ್ಕಿಂತ ಎಷ್ಟೋ ಹೆಚ್ಚಾಗಿ ಗ್ರಾಮಗಳ ಊರ್ಜಿತಾವಸ್ಥೆಯ ಮೇಲೆ ಆಧರಿಸಿಕೊಂಡಿರುತ್ತದೆ. ಹಿಂದೂ ದೇಶದ ಜನರೊಳಗೆ ಅತ್ಯಧಿಕಾಂಶದ ಜನರು ಹಳ್ಳಿಗಳಲ್ಲಿ ವಾಸಿಸಿಕೊಂಡಿದ್ದು ಸಂತಾನಪರಂಪರೆಯಿಂದ ಕೃಷೀವಲರಾಗಿಕೊಂಡು ಬಂದಂತಹವರು. ಪರಂತು ಹಳ್ಳಿಗಳ ಸ್ಥಿತಿಯು ಈಗೀಗ ಬಹಳ ಕೆಟ್ಟುಹೋಗಿದೆ. ಅನೇಕಾನೇಕ ಜನರು ಗ್ರಾಮಗಳನ್ನು ಬಿಟ್ಟೇಬಿಟ್ಟು ಪೇಟೆಪಟ್ಟಣಗಳಲ್ಲಿ ಹೋಗಿ ವಾಸಮಾಡಿಕೊಂಡಿದ್ದಾರೆ. ಉಳಿದ ಕೆಲವು ಮಂದಿ ಕೂಡ ಇನ್ನು ಬೇಗನೆ ಬಿಟ್ಟು ಹೋಗುವುದರಲ್ಲಿದ್ದಾರೆಂದೆನ್ನಬಹುದು. ಕೃಷಿಯಿಂದಲೇ ಜೀವನ

ನಡಿಸಿಕೊಂಡಿರುವಂತಹವರಿಗೆ ಇತ್ತೀಚಿಗೆ ಜೀವನವು ಕಷ್ಟಸಾಧ್ಯವಾಗತೊಡಗಿದೆ. ಎಷ್ಟೋ ತಲೆತಲೆಯಾಂತರಗಳಿಂದ ಒಂದೇ ಮನೆತನದಲ್ಲಿ ಬಾಳಿಕೊಂಡು ಬಂದಿದ್ದ ಸ್ಥಿರಾಸ್ತಿಗಳು ಒಂದಿಲ್ಲೊಂದು ಕಾರಣದಿಂದ ಯಾರ್‍ಯಾರ ಕೈವಶವಾಗಿವೆ. ಹಾಗೆ ಕೈವಶ ಮಾಡಿಕೊಂಡವರಾದರೂ ಆಯಾ ಗ್ರಾಮಗಳಲ್ಲಿರುವುದಿಲ್ಲ. ಆಂಗ್ಲವಿದ್ಯಾಭ್ಯಾಸದ ಗಂಧಗಾಳಿತಗಲಿತೆಂದಕೂಡಲೆ ಅಂತಹವರಿಗೆ ಗ್ರಾಮಗಳು ನಿಸ್ಸಾರವಾಗುತ್ತವೆ. ಸರಕಾರಿ ನೌಕರಿ, ವಕೀಲ ವೃತ್ತಿ , ಮೊದಲಾದ ಕಸಬುಗಳಲ್ಲಿದ್ದವರು ಹೇಗೂ ಪೇಟೆಪಟ್ಟಣಗಳಲ್ಲೇ ಕಾಲಕ್ಷೇಪಮಾಡಬೇಕಾಗಿದೆ. ಅಂತಹ ಯಾವುದೊಂದು ಆಧುನಿಕ ವೃತ್ತಿಯಿಲ್ಲದವರು ಕೂಡ ಮೊದಲು ಮೊದಲು ನಗರಲಕ್ಷ್ಮಿಯ ಶೃಂಗಾರಗಳಿಗೆ ಮನಸೋತು ಹಳ್ಳಿಗಳನ್ನು ತೊರೆದು ಪಟ್ಟಣಗಳಲ್ಲಿ ಬಂದು ವಾಸ್ತವಿಸಿದವರು, ಮತ್ತೆ ವಿಧವಿಧವಾದ ಪ್ರೇರಣೆಗಳಲ್ಲಿ ಸಿಕ್ಕಿಬಿದ್ದು ಸಾಲಬುರುಕರಾಗಿ, ಇದ್ದ ಆಸ್ತಿಪಾಸ್ತಿಗಳನ್ನೆಲ್ಲ ಯಾರ್‍ಯಾರ ಅಡಿಗಳಿಗರ್ಪಿಸಿ, ಹಳ್ಳಿಗಳಲ್ಲಿದ್ದ ಯಾವತ್ತೂ ಸಂಬಂಧಗಳನ್ನು ಕಡಿದುಕೊಂಡವರಾಗಿ ಪೇಚಾಡುತ್ತಿದ್ದಾರೆ. ಕೂಲಿಕಸಬಿನವರಿಗಿಂತಲೂ ಪೇಟೆ ಪಟ್ಟಣಗಳಲ್ಲೇ ಆಗಲಿ ಅವುಗಳಿಗೆ ಹತ್ತಿರದಲ್ಲಾಗಲಿ ನಿಂತೇ ಉದರನಿರ್ವಾಹವಾಗಬೇಕಾಗಿದೆ. ಹೀಗೆಲ್ಲ ಗ್ರಾಮಗಳು ಯಾವ ವರ್ಗದವರಿಗೂ ಬೇಡವಾಗಿಹೋಗಿವೆ. ''ಕೆಟ್ಟರೂ ಪಟ್ಟಣ ಸೇರಬೇಕು'' ಎಂಬುದು ಒಂದು ಗಾದೆಯಾಗಿದೆಯೇ ನಮ್ಮಲ್ಲೆಲ್ಲ ಪ್ರಚಾರದಲ್ಲಿದೆಯಷ್ಟೇ. ಕೆಟ್ಟುಹೋದವರು ಉದರ ನಿಮಿತ್ತದಿಂದ ಕೆಲಸವನ್ನು ಹುಡುಕಿ ಪಟ್ಟಣ ಸೇರುವುದಾಯಿತು. ಕೆಡದವರು ಪಟ್ಟಣಗಳ ಸೊಗಸಿಗೆ ಮರುಳಾಗಿ ಪಟ್ಟಣಗಳನ್ನು ಸೇರುವುದಾಯಿತು. ಹಾಗೂ ಹೀಗೂ ಗ್ರಾಮಗಳು ಮೂಲೆಪಾಲಾಗಹತ್ತಿವೆ. ಗ್ರಾಮಗಳಲ್ಲಿ ಜೀವಕಳೆಯಿಲ್ಲ. ಸಂಸ್ಕೃತಿಯೆಂದರೆ ಏನೆಂದು ಕೂಡ ತಿಳಿದವರಿಲ್ಲ. ವಿದ್ಯಾಗಂಧವು ಮೊದಲೇ ಇಲ್ಲ. ಯಾವುದೊಂದು ಗ್ರಾಮದಲ್ಲಾದರೂ ಓದು ಬರಹವಿದ್ದವರು ನಾಲ್ಕೈದು ಮಂದಿ ಕೂಡ ಸಿಕ್ಕುವುದು ಅಪರೂಪ. ಆ ನಾಲ್ಕೈದು ಮಂದಿಯಾದರೋ ನಿರಂಕುಶ ಪ್ರಭುತ್ವವನ್ನು ನಡಿಸುವಂತಹವರಾಗಿ ತಮ್ಮ ಬುದ್ಧಿವಂತಿಗೆಯನ್ನು ತೀರಾ ಡೊಂಕು ದಾರಿಗಳಲ್ಲೇ ಪ್ರಯೋಗಿಸುತ್ತಾರೆ. ''ಬುದ್ಧಿವಂತ'' ಎಂಬ ಶಬ್ದಕ್ಕೆ ನಮ್ಮಲ್ಲಿ ರೂಢಿಯಾಗಿರುವ ಅರ್ಥ ವಿಲಕ್ಷಣವಾಗಿದೆ. ''ಸಾಧು'', ''ಸಜ್ಜನ'' ಶಬ್ದಗಳಿಂದ ನಾವು ಸಾಮಾನ್ಯವಾಗಿ ನಿಂದೆಯನ್ನೇ ಸೂಚಿಸುತ್ತೇವೆ. ಪರರನ್ನು ವಂಚಿಸಿ ತಾನು ಲಾಭಮಾಡಿಕೊಳ್ಳುವವನೇ ನಮ್ಮ ನಿಘಂಟುವಿನಲ್ಲಿ ''ಬುದ್ಧಿವಂತ''ನು. ಇಂತಹವರೇ ಗ್ರಾಮಗಳಲ್ಲಿ ಮುಖಂಡರು. ಇಂತಹವರೇ ಗ್ರಾಮಸ್ಥರನ್ನು ಪೇಟೆ ಪಟ್ಟಣಗಳಲ್ಲಿನ ವಿಬುಧ ಸುಶಿಕ್ಷಿತ ಜನರಲ್ಲಿಗೆ ತಂದು ತೋರಿಸುವವರು. ಇಂತಹವರೇ ಸರಕಾರಿ ನೌಕರರು ಗ್ರಾಮಗಳಿಗೆ ಸಂಚಾರಕ್ಕೆ ಹೋದರೆ ಅವರಿಗೆ ಮೊದಲು ಕಾಣಸಿಕ್ಕಿ ಅವರನ್ನು ಸತ್ಕರಿಸುವವರು. ಇಂತಹವರೇ ವಕೀಲರು ಮೊದಲಾದ ಬಿನ್ ಸರಕಾರಿ ಗೃಹಸ್ಥರು ಕೂಡ ಯಾವಾಗಲಾದರೂ ಒಂದೊಂದು ವೇಳೆಯಾದರೂ ಗ್ರಾಮಗಳಿಗೆ ದಯೆಮಾಡಿಸಿದರೆ, ಅವರನ್ನು ಸಮ್ಮಾನದಿಂದ ಬರಮಾಡಿಕೊಂಡು ಆದರೋಪಚಾರ ಮಾಡುವವರು. ಒಂದೇ ಮಾತಿನಲ್ಲಿ ಹೇಳುವುದಾದರೆ, ಗ್ರಾಮಗಳ ಮಾತೆತ್ತಿದೊಡನೆ ದೃಷ್ಟಿಗೆ ಪ್ರಥಮತಃ ಹೊಳೆಯುವವರು ಇಂತಹವರೇ. ಅಂದ ಮೇಲೆ, ಗ್ರಾಮಗಳಿಗೆ ಸಂಬಂಧಿಸಿದ ಯಾವುದೊಂದು ಸಂಸ್ಥೆಯನ್ನು ಏರ್ಪಡಿಸಬೇಕೆನ್ನುವಾಗ ಇಂತಹವರ ನೆರಳೇ ದೃಷ್ಟಿಪಥದಲ್ಲಿ ಬೀಳದೆ ಹೋದೀತೇ ?

ಸಹಕಾರಿ ಸಂಘಗಳೂ ಹಲವು ಕಡೆಗಳಲ್ಲಿ ಇಂತಹವರ ವಶದಲ್ಲೇ ಸಿಕ್ಕಿಕೊಂಡಿವೆ. ಉಳಿದವರೆಲ್ಲರೂ ನಿರಕ್ಷರ ಕುಕ್ಷಿಗಳಾದ ಕೇವಲ ಸಾಧು ಸಜ್ಜನರಾಗಿರುವುದರಿಂದ ಅವರು ತಾವಾಗಿ ಎದುರಿಗೆ ಬೀಳುವ ಸಂಭವವೂ ಕಡಿಮೆ, ಸಹಕಾರಿ ಸಂಘಗಳ ವಿಚಾರಕ ಪ್ರಚಾರಕರ ಕಣ್ಣಿಗೆ ಹೊಳೆಯುವುದೂ ಅಪರೂಪ. ಅಪರೂಪದಲ್ಲಾದರೂ ಹೊಳೆದರೂ ಕೂಡ, ಮೇಲೆ ವಿವರಿಸಿದಂತಹ ಓದು ಬರಹವಿಲ್ಲದ್ದ 'ಅವ್ವಲ್ ಬುದ್ಧಿವಂತ'ರ ಪ್ರಾಬಲ್ಯವೇ ಹೆಚ್ಚಾಗಿ, ಸಂಘದ ಕಾರ್ಯಭಾರವೆಲ್ಲವೂ ಅವರ ಕೈವಶವೇ ಆಗಿ ಹೋಗುತ್ತದೆ. ಮತ್ತೆ ಸಂಘವು ಯಾವ ರೀತಿಯಲ್ಲಿ ಮುಂದುವರಿಯುತ್ತದೆಂದು ಬೇರೆ ಹೇಳಬೇಕೆ ? ಪಂಚಾಯತ ಸಭೆಗಳು ಹೆಸರಿಗೆ ಮಾತ್ರವಾಗುತ್ತವೆ. ''ಬುದ್ಧಿವಂತ''ರು ಹೇಳಿದುದಕ್ಕೆ ಮಿಕ್ಕವರೆಲ್ಲರೂ ತಲೆದೂಗುತ್ತಾರೆ. ಅನೇಕವಾರ್ತಿ ಸಭೆಗಳು ಸೇರದನೆ ಸಭಾಕಾರ್‍ಯಕಲಾಪಗಳ ಪುಸ್ತಕವನ್ನು ಅವರವರ ಮನೆಗೆ ಕಳುಹಿಸಿ ಸಹಿ ಪಡೆದುಕೊಳ್ಳುತ್ತವೆ. ಕೆಲವು ಸಾರಿ

ಅಂತಹ ಸಹಿಗಳು ಕೂಡ ತೋರದುದರಿಂದ, ಕ್ರಮಗಳನ್ನು ಆ ಮಟ್ಟಿಗೆ ಸಹ ಲಕ್ಷಿಸುವುದಿಲ್ಲವೆಂದಾಗುತ್ತದೆ. ಸಾಲಗಾರನ ಸ್ಥಿತಿ, ಸಾಲದ ಉದ್ದೇಶ, ಮರುಪಾವತಿಯ ಶರ್ತ, ಮುಂತಾದ ಯಾವ ಸಂಗತಿಯ ಗಣ್ಯವೂ ಇಲ್ಲ. ಪಂಚಾಯತರು ಭೂಮ್ಯಾಲಿಕರಾದರೆ ಅವರಿಗೆ ಸಲ್ಲತಕ್ಕ ಗೇಣಿ ಬಾಕಿಯೆಲ್ಲ ಸಂಘದಲ್ಲಿ ಆಯಾ ಒಕ್ಕಲಿತನ ಮೇಲೆ ಸಾಲವಾಗಿ ಮಾರ್ಪಟ್ಟು ನಿಲ್ಲುತ್ತದೆ. ಪಂಚಾಯತರು ಸಾಹುಕಾರರಾದರೆ, ಅವರ ಅಂಗಡಿಯ ಅಥವಾ ಬಂಡಲಾಸೆಯ ಲೆಕ್ಕಗಳಲ್ಲಿ ಬರಲಿಕ್ಕೆ ಬಾಕಿ ತೋರುವ ಹಣವೆಲ್ಲ ಆಯಾ ಕುಳವಾರುಗಳ ಮೇಲೆ ಸಂಘಕ್ಕೆ ಸಲ್ಲತಕ್ಕ ಸಾಲಗಳಾಗಿ ರೂಪುಗೊಳ್ಳುತ್ತದೆ. ಪಂಚಾಯತರು ಬಡ್ಡಿಗೆ ಹಣಕೊಡುವವರಾದರೆ, ವರ್ಷಗಟ್ಟಲೆಯಿಂದ ಅವರಿಗೆ ಯಾರ್‍ಯಾರಿಂದ ಬರಲಿಕ್ಕಿದ್ದ ಹಣವೆಲ್ಲ ಸಂಘದ ಸಾಲಗಳ ಖಾತೆಯಲ್ಲಿ ಆಯಾ ಜನರ ಹೆಸರಿನಲ್ಲಿ ಕಾಣಿಸಕೊಳ್ಳುತ್ತದೆ. ಉದ್ದೇಶ್ಯಗಳು ಯಾವುವಾದರೇನು ? ಸಂಘದ ನಿಬಂಧನೆಗಳಲ್ಲಿ ಉಕ್ತವಾದಂತಹುವುಗಳಾಗಿದ್ದರೆ ಸಾಕು. ಅಥವಾ ನಿಬಂಧನೆಯಲ್ಲಿ ಉಕ್ತವಾಗಿಲ್ಲದಿದ್ದರೂ ಯಾರ ಭಯವೇನು? ಹತ್ತು ವೇಳ್ಯಕ್ಕೆ ಅದನ್ನು ಕಂಡು ಹಿಡಿಯುವವರೇ ಇಲ್ಲ. ಕಂಡು ಹಿಡಿದರೂ, ಸಾಲ ಕೊಟ್ಟಾದ ಮೇಲೆ, ''ಓಹೋ! ಹಾಗೋ ! ನಮಗೆ ಗೊತ್ತೇ ಇದಿಲ್ಲವಲ್ಲಾ ! ಸರಿ. ಇನ್ನು ಹಾಗೆ ಮಾಡುವುದಿಲ್ಲ''ವೆಂದರೆ ಧಾರಾಳವಾಯಿತು. 'ಇಂತಿಂತಹ ತಪ್ಪುಗಳು ಸಂದರ್ಶನದಲ್ಲಿ ಕಂಡುಬಂದವು. ಪಂಚಾಯತರಿಗೆ ತಕ್ಕ ಸೂಚನೆ ಕೊಟ್ಟಿದ್ದೇನೆ'' ಎಂದು ವಿಚಾರಕ ಪ್ರಚಾರಕರು ಬರೆದು ಮೇಲೆ ವರೆಗೆ ತಮ್ಮ ವರದಿಯನ್ನು ಕಳುಹಿಸಿದರೆ ಮುಗಿಯಿತು.

ಹಲವು ಸಂಘಗಳಲ್ಲಿ ಲೆಕ್ಕ ಪತ್ರಗಳನ್ನು ಕ್ರಮವಾಗಿ ಬರೆಯುವುದೇ ಇಲ್ಲ. ವಿಚಾರಕ ಪ್ರಚಾರಕರು ಹೋದಾಗ ಸ್ವತಃ ಬರೆಯಬೇಕಷ್ಟೆ. ಹಣದ ಗೊಡವೆ ಮೊದಲೇ ಇಲ್ಲ. ಭೇದಬುದ್ಧಿಯಿದ್ದರೆ ತಾನೇ ? ತಮ್ಮದೂ ತಮ್ಮದೇ, ಎಲ್ಲೆಲ್ಲಿಂದ ಬರುವ ಹಣವೂ ತಮ್ಮದೇ, ಎಂಬ ಅದ್ವೈತ ಭಾವನೆಯಲ್ಲಿ ಸದಾ ಸರ್ವಕಾಲವೂ ಆನಂದಾನುಭವವೇ ಸರಿ ! ಹಣವಿಲ್ಲದಿದ್ದರೆ , ಸೆಂಟ್ರಲ್ ಬೇಂಕಿಗೆ ಛಾಪಾಅರ್ಜಿ ಬರಕೊಂಡರಾಯಿತು. ಹಣ ಬಂದಾಗ ಬೇಕಾದುದಷ್ಟನ್ನು ಹಂಚಿ ಸದ್ವಿನಿಯೋಗ ಮಾಡಿತು, ಬೇಡದುದನ್ನು ಹಂಚದೆ ದುರ್ವಿನಿಯೋಗ ಮಾಡಿತು. ಮೆಂಬರಿಂದ ಹಿಂತಿರುಗಿ ವಸೂಲಾದರೆ, ಪುನಃ ಹಾಗೆಯೇ ಸದ್ವಿನಿಯೋಗವೂ ದುರ್ವಿನಿಯೋಗವೋ ಮಾಡಿತೋ, ಬೇಂಕಿನ ವಾಯಿದೆ ಗುಜಾರಾದಾಗ ಹೆಚ್ಚಿಗೆ ವಾಯಿದೆಗೆ ಬರಕೊಂಡಿತು. ಮೆಂಬರರಿಂದಲೇ ವಸೂಲಾಗದಿದ್ದರೆ , ಬೇಂಕಿನಿಂದ ಹೆಚ್ಚಿಗೆ ವಾಯಿದೆ ಕೇಳಿಕೊಳ್ಳಲಿಕ್ಕೆ ಇನ್ನಷ್ಟು ಬಲವಾದ ಕಾರಣವಾಯಿತು. ಮೆಂಬರರು ಕೊಡದಿದ್ದರೆ, ತಾವೇನು ಮಾಡಲಿ ? ಎಂಬುದೇ ಪಂಚಾಯತರ ಪ್ರಶ್ನೆ! ಇದಕ್ಕೆ ಉತ್ತರ ಕೊಡುವವರಾರು ? ಪಂಚಾಯತರು ತಮ್ಮ ಜವಾಬ್ದಾರಿಯನ್ನು ಗ್ರಹಿಸಿ ವರ್ತಿಸುವುದಿಲ್ಲವೆಂಬುದೇ ಇದರಿಂದ ತಿಳಿಯಬೇಕಾದ ಮುಖ್ಯ ವಿಷಯವಾಗಿದೆ. ಮತ್ತೆ, ಜವಾಬ್ದಾರಿಯನ್ನು ಚೆನ್ನಾಗಿ, ಗ್ರಹಿಸದಿದ್ದರೂ, ಅದು ಪರರಿಗೆ ಗೊತ್ತಾಗಬಾರದೆಂಬ ಅಭಿಲಾಷೆಯು ಕೆಲವರಿಗಾದರೂ ಇರುವುದರಿಂದ ವಸೂಲಾದಂತೆಯೂ ಪುನಃ ಸಾಲಕೊಟ್ಟಂತೆಯೂ ತೋರಿಕೆಗೆ ಮಾತ್ರ ಲೆಕ್ಕಗಳಲ್ಲಿ ಕೆಲವು ಖತಾಯಿತಿಗಳನ್ನು ಬರೆಯುವ ಸವ್ಯಾಪಸವ್ಯದ ಕ್ರಮ, ಬಿನಾಮೆ ಸಾಲಗಳ ಪದ್ಧತಿ, ಮುಂತಾದ ಒರಟು ಯುಕ್ತಿಗಳು ತಲೆದೋರುತ್ತವೆ. ಇದ್ದ ಬುದ್ಧಿವಂತಿಗೆಯೆಲ್ಲ, ನಿಬಂಧನೆಗಳನ್ನು ಗ್ರಹಿಸಿ ತತ್ತ್ವಗಳನ್ನು ತಿಳಿದುಕೊಂಡು ಕೆಲಸಮಾಡುವುದರ ಬದಲಿಗೆ, ಇಲ್ಲದ ಅರ್ಥವನ್ನು ಕಲ್ಪಿಸಿ, ಕಟ್ಟು ಕಟ್ಟಳೆಗಳ ಹಿತಕರವಾದ ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವ ದಾರಿಗಳನ್ನು ಕಂಡು ಹಿಡಿಯುವುದರಲ್ಲಿ ಪ್ರಯೋಗಿಸಲ್ಪಡುತ್ತದೆ.

ಮೆಂಬರರ ಜೀವನ್ಮೃತಾವಸ್ಥೆಯನ್ನು ಕುರಿತು ಹೇಳಿ ತೀರದು. ಒಂದೂಕಾಲು ರೂಪಾಯಿ ತೆತ್ತಲ್ಲಿ ೨೫ ರೂಪಾಯಿ ಸಾಲ ಸಿಕ್ಕುವ ಹಕ್ಕು ಬರುತ್ತದೆಂಬುದಿಷ್ಟೆ ಅವರಿಗೆ ತಿಳಿದಿರುವ ಅಂಶ. ಬಾಧ್ಯತೆಯ ಸಂಗತಿಯನ್ನೇ ಅವರರಿಯರು. ''ಹೊರಬಲ್ಲಾದವ ಆಳು, ತೆರಬಲ್ಲಾದವ ಹೊಣೆ''ಯೆಂಬದು ಮಾತ್ರ ಅವರ ಗಮನಕ್ಕೆ ಆಗಾಗ್ಗೆ ಬರುತ್ತಿರುವ ಅನುಭವವಾಗಿದೆ. ಆದರೆ ಆ ಅನುಭವವು ಕೂಡ ಹೆಚ್ಚು ಹೊತ್ತು ಅವರ ಮನಸ್ಸಿನಲ್ಲಿ ಉಳಿಯುವುದಿಲ್ಲ. ಒಂದು ಸಾಲವು ಬಾಕಿ ಬಿದ್ದು ಅನೇಕಾನೇಕ ವಿಧಗಳಿಂದ ಅನೇಕಾನೇಕ ಸರ್ತಿ ವ್ಯವಹರಣೆ ನಡೆಸಿ ಜ್ಯಾಮೀನುದಾರನಿಂದ ವಸೂಲ್ಮಾಡಲ್ಪಟ್ಟರೂ, ಮತ್ತೆ ಪುನಃ ಅದೇ ಮೆಂಬರನು ಜ್ಯಾಮೀನಿರುವ ಮತ್ತೊಂದು ಸಾಲವು ಬಾಕಿ ಬಿದ್ದರೆ , ಅದರ ಬಾಬಿನಲ್ಲಿ ಮತ್ತೆ ಮತ್ತೆ ಪುನಃ ಪುನಃ ಅನೇಕಾನೇಕ ಸರ್ತಿ

ಅನೇಕಾನೇಕ ತರದ ವ್ಯವಹರಣೆ ನಡಿಸಿಯೇ ಅದನ್ನು ವಸೂಲು ಮಾಡಬೇಕಾಗುತ್ತದೆ ಹೊರತು, ತನ್ನ ಜವಾಬ್ದಾರಿಯನ್ನು ತಾನಾಗಿ ಗ್ರಹಿಸಿ ಕೊಡಬೇಕಾದ ಹಣವನ್ನು ಸ್ವೇಚ್ಛೆಯಿಂದ ಕೊಡುವ ಕಾಲವಿಲ್ಲ. ಮೆಂಬರರ ಪ್ರಯತ್ನಗಳೆಲ್ಲ ತಮ್ಮ ನಿಜವಾದ ಸ್ಥಿತಿಗತಿಗಳನ್ನು ಮರೆಮಾಡಿ ಎಲ್ಲೆಲ್ಲಿ ಅತ್ಯಧಿಕವೆಂದರೆ ಎಷ್ಟೆಷ್ಟು ಸಾಲ ಸಿಕ್ಕಬಹುದೋ ಅಷ್ಟನ್ನು ಪೂರಾ ಅಲ್ಲಲ್ಲಿಂದ ಪಡೆಯುವ ಸಾಧನೆಗಳಲ್ಲೇ ಪರ್ಯವಸಾನವಾಗುತ್ತವೆ. ಸಂಘದಿಂದ ಪಡೆದ ಸಾಲಕ್ಕೆ ತಗಾದೆಯಾಗುವುದೇ ಅಪರೂಪ; ಎಂದಾದರೂ ತಗಾದೆ ಆಯಿತೆಂದರೆ, ಖಾಸಗಿ ಸಾಲ ಮಾಡಿ ಅದನ್ನು ತುಂಬಿಸುತ್ತಾರೆ. ಹಾಗೆ ಖಾಸಗಿಯಿಂದ ಮಾಡಿದ ಸಾಲಕ್ಕೆ ಒತ್ತಾಯವಾದಾಗ, ಸಂಘಕ್ಕೆ ಸಾಲದ ಅರ್ಜಿ ಬರುತ್ತದೆ. ಸಾಲಗಳ ಚಕ್ರವು ಈ ರೀತಿಯಲ್ಲಿ ಚಿರಭ್ರಮಣವಾಗುತ್ತಲೇ ಇದೆ. ತನ್ಮಧ್ಯದಲ್ಲಿ ಸ್ವಲ್ಪವೇನಾದರೂ ತೊಡಕಾಯಿತೆಂದರೆ ಜೀವ ಕಳೆಯು ತೀರಾ ಆರಿಹೋಗುತ್ತದೆ. ಸಾಲಗಾರನಿಗೆ ಮೂರ್ಛಾವಸ್ಥೆ, ಜ್ಯಾಮೀನುದಾರನಿಗೆ ಅಚೇತನಾವಸ್ಥೆ, ಪಂಚಾಯಿತರಿಗೆ ನಿದ್ರಾವಸ್ಥೆ, ಇಡೀ ಸಂಘಕ್ಕೆ ಮೃತಾವಸ್ಥೆ.

ಸಾಲ ಪಡೆಯುವ ಒಂದು ಚಟುವಟಿಕೆಯನ್ನು ಬಿಟ್ಟರೆ , ಮೆಂಬರರೆಲ್ಲರು ನಿರ್ವಿಕಲ್ಪ ಸಮಾಧಿಯಲ್ಲಿರುವವರೇ ಎಂದೆನ್ನಬೇಕು. ತಮ್ಮಿಂದ ಸಲತಕ್ಕ ಹಣವನ್ನು ಎಂದಾದರೂ ಒಮ್ಮೆ ವಸೂಲು ತೆತ್ತರೂ, ರಶೀದಿ ಪಡಿಕೊಳ್ಳುವ ಯೋಚನೆಯೇ ಅವರಿಗಿಲ್ಲ. ಎಷ್ಟು ಛಾಪಾ ಕಾಗದಗಳಿಗೆ ಬೇಕಾದರೂ ಹೇಳದೆ ಕೇಳದೆ ಸಹಿ ಕೊಟ್ಟುಬಿಡುತ್ತಾರೆ. ಎಷ್ಟೋ ಸಂಘಗಳಲ್ಲಿ ವಿಚಾರಕಪ್ರಚಾರಕರು ಹೆಬ್ಬೆರಳ ಮುದ್ರೆಯೊತ್ತಿದ ಖಾಲಿಫೋರ್ಮುಗಳನ್ನು ಕಂಡು ಹಿಡಿದಿರುವರು! ಮಹಾಸಭೆಗೆ ಬರಹೇಳಿದರೆ, 'ನಾವೇಕೆ, ಸ್ವಾಮಿ ? ನೀವೆಲ್ಲ ಕೂಡಿ ಮಾಡಿದುದಕ್ಕೆ ನಮ್ಮಡ್ಡಿ ಇದೆಯೇ?'' ಎಂದೇ ಅವರ ಅಂಬೋಣ. ಸಾಲವಸೂಲಿಯ ತಗಾದೆಯಾದರೆ, ಸ್ವಲ್ಪ ಗೊಣಗುಟ್ಟುವರು. ಇಲ್ಲವಾದರೆ, ಚಕಾರ ಶಬ್ದ ವಿಲ್ಲ. ಅನರ್ಥ ಅನ್ಯಾಯಗಳೇನು ನಡೆದರೂ, ತಮ್ಮಷ್ಟಕ್ಕೆ ತಾವು ತಟಸ್ಥರಾಗಿರುವವರೇ ಹೊರತು, ಬಾಯ್ದೆರೆಯಲೊಲ್ಲರು. ಇಂತಹ ಕಿವುಡ, ಕುರುಡ, ಮೂಗರ ರಾಜ್ಯದಲ್ಲಿ ನಿರಂಕುಶ ಪ್ರಭುತ್ವವು ನಡೆದರೆ ಹೇಗಾದೀತೆಂದು ಯಾರೂ ಆಲೋಚಿಸಬಹುದು.

ಅನೇಕ ಸಹಕಾರಿ ಸಂಘಗಳಿಗೆ ಇಂದಿಗೆ ಪ್ರಾಪ್ತವಾಗಿರುವ ಅವಸ್ಥೆಯು ಇದೇ ಆಗಿದೆ. ಇದೊಂದು ಆಶ್ಚರ್ಯವೆನ್ನಲಾಗದು. ಬರೇ ಪ್ರಾಮಾಣಿಕತೆ ಮಾತ್ರ ಎಷ್ಟಿದ್ದರೂ ಈ ದಿವಸಗಳಲ್ಲಿ ಪೂರೈಸದು. ರವೀಂದ್ರನಾಥಠಾಕೂರರವರು ತಮ್ಮದೊಂದು ಪ್ರಬಂಧದಲ್ಲಿ ಒಂದು ಕುರಿಮರಿಯ ಸಮಸ್ಯೆ ಹೇಳಿದ್ದಾರೆ. ಕುರಿಮರಿಗಳಿಗೆ ಎಲ್ಲಿ ಹೋದರೂ ಪ್ರಾಣ ಹಾನಿಯ ಸಂಭವ ತೋರಿತು. ಕಾಡಿನಲ್ಲಿ ಕ್ರೂರ ಮೃಗಗಳು ಅಟ್ಟಿಕೊಂಡು ಬಂದುವು; ಪೇಟೆಯಲ್ಲಿ ನಾಯಿಗಳು ಹಿಂದೊತ್ತಿ ಬಂದುವು; ಮನೆಯಲ್ಲಿ ಕಟುಕರು ಒಯ್ಯಲೆಳಸಿದ್ದರು. ಏನು ಮಾಡಬೇಕೆಂದು ತೋಚದೆ, ಕುರಿಮರಿಯು ಪ್ರತ್ಯಕ್ಷ ಪರಮಾತ್ಮನಿದ್ದಲ್ಲಿಗೇ ಹೋಗಿ, ''ದೇವಾ ! ಎಲ್ಲಿದ್ದರೂ ನನ್ನನ್ನು ಕೊಲ್ಲುವುದಕ್ಕೆ ಬರುತ್ತಿರುವರಲ್ಲಾ! ಏನು ಮಾಡಲಿ ? ನಾನು ಹೇಗೆ ಬದುಕಲಿ?'' ಎಂದಿತು. ಅದಕ್ಕೆ ಪರಮಾತ್ಮನು, 'ಅಯ್ಯೋ ಕುರಿಮರಿಯೇ ! ನಿನ್ನ ಕೋಮಲ ದೇಹವನ್ನೂ ನಿಷ್ಕಲಂಕ ಮುಖ ಮುದ್ರೆಯನ್ನೂ ನೋಡಿದರೆ, ನಿನ್ನನ್ನು ತಿನ್ನಬೇಕೆಂಬ ಆಶೆಯು ನನ್ನಲ್ಲಿ ಕೂಡ ಹುಟ್ಟುತ್ತಿದೆಯಲ್ಲಾ!' ಎಂದನಂತೆ. ಕೇವಲ ಸಾಧು ಸಜ್ಜನರಾಗಿರುವವರ ಪಾಡು ಹೀಗೆಯೇ ಸರಿ. ''ಬಾಗಲು ತೆರೆದಿದ್ದರೆ, ಸಾಧು ಸಂತನಿಗೆ ಕೂಡ ಒಳನುಗ್ಗಿ ಸಿಕ್ಕಿದುದನ್ನು ಕಸುಕೊಳ್ಳುವ ಪ್ರೇರಣೆಯಾಗುತ್ತಿದೆ'' *ಯಂತೆ. ಪ್ರಾಮಾಣಿಕತೆಯೊಂದಿಗೆ ಬುದ್ಧಿ ಬಲವೂ ವ್ಯವಹಾರದಕ್ಷತೆಯೂ ಬೇಕಾಗಿವೆ. ಇವು ಆಡಳಿತೆಯವರಲ್ಲಿ ಮಾತ್ರವೇ ಅಲ್ಲ, ಜನ ಸಾಮಾನ್ಯರಲ್ಲಿ ಕೂಡ ಸ್ವಲ್ಪ ಮಟ್ಟಿಗಾದರೂ ಅಗತ್ಯವಾಗಿವೆ. ಆಡಳಿತೆ ನಡಿಸುವವರು ಒಂದಿಲ್ಲೊಂದು ವೇಳೆ ಗೊತ್ತಿದ್ದಾಗಲಿ ಗೊತ್ತಿಲ್ಲದಾಗಲಿ ತಪ್ಪಿ ಬೀಳುವುದುಂಟು. ಹಾಗೆ ತಪ್ಪಿಬಿದ್ದ ಸಂದರ್ಭಗಳಲ್ಲಿ ಶೋಧನೆ ಮಾಡಿ ಕಾರಣಗಳನ್ನು ಕಂಡು ಹಿಡಿದು ಮುಂದಕ್ಕೆ ಆ ರೀತಿಯ ತಪ್ಪುಗಳಾಗುವ ಸಂಭವಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬೇಕಾದರೆ, ಸಾಮಾನ್ಯ ಮೆಂಬರ ಜನರಲ್ಲಿ ಸದಸದ್ವಿಚಾರ ಶಕ್ತಿಯಿರಬೇಕು. ಇಲ್ಲದಿದ್ದರೆ, ಮೊದಲು ಮೊದಲು ತಿಳಿಯದೆ ಸಂಭವಿಸುವ ತಪ್ಪುಗಳು ಕೂಡ ಕಾಲಕ್ರಮೇಣವಾಗಿ ತಿಳಿದೇ ಮಾಡಲ್ಪಡುವಂತಹುವುಗಳಾಗತೊಡಗಿ, ಕೊನೆಗೆ ಸರ್ವನಾಶವಾಗುತ್ತದೆ.

* "An open door will tempt a saint"

ಹಲವು ಸೆಂಟ್ರಲ್ ಬೇಂಕುಗಳ ಜಾಹೀರಾತುಗಳಲ್ಲಿ, ಸೆಂಟ್ರಲ್ ಬೇಂಕಿನ ಹಣಗಳನ್ನು ಹೆಚ್ಚಾಗಿ ಅಮಿತ ಜವಾಬ್ದಾರಿಯ ಹಳ್ಳಿ ಸಂಘಗಳಿಗೇನೇ ಸಾಲ ಕೊಡುವುದರಿಂದ ಅಪ್ರತಿಮವಾದ ಭದ್ರತೆ ಇದೆಯೆಂದು ಪ್ರಕಟಿಸುವುದನ್ನು ನೋಡಬಹುದು. ಹಳ್ಳಿ ಸಂಘಗಳಲ್ಲಿ ಮೆಂಬರರ ಅಜ್ಞಾನ ನಿರುತ್ಸಾಹಗಳೇ ಅಪ್ರತಿಮವಾಗಿವೆ. ಸಂಘವನ್ನು ಏರ್ಪಡಿಸುವುದಕ್ಕೆ ಮನವಿಯನ್ನು ತಯಾರಿಸುವಾಗ ೧೦-೧೫ ಮಂದಿಯಿದ್ದರೆ ಕಾನೂನಿನ ಮಟ್ಟಿಗೆ ಧಾರಾಳವಾಯಿತೆಂಬ ಗ್ರಹಿಕೆಯಿಂದ, ಬರೇ ಕೆಲವರನ್ನು ಮಾತ್ರ ಒಟ್ಟು ಸೇರಿಸಿ ಮನವಿಗೆ ಸಹಿಗಳನ್ನು ಪಡಕೊಳ್ಳುತ್ತದೆ. (ಅಥವಾ ಒಟ್ಟು ಸೇರಿಸುವ ವಿಧಾನವನ್ನು ಕೂಡ ನಡಿಸದೆ, ೧೦-೧೨ ಮನೆಗಳಿಗೆ ಹೋಗಿ ಸಹಿಗಳನ್ನು ಪಡಕೊಂಡರೂ ಆಯಿತು.) ಸಂಘದ ಕೆಲಸವನ್ನು ಪ್ರಾರಂಭಿಸುವಾಗಲೇ ಮನವಿಗೆ ಸಹಿ ಕೊಟ್ಟವರು ಒಬ್ಬಿಬ್ಬರು ಹಿಂದಕ್ಕೆ ಸರಿಯುತ್ತಾರೆ. (ಕಾನೂನಿನ ಮೇರೆಗೆ ಇರಬೇಕಾದಷ್ಟು ಮಂದಿ ಹಾಜರಿಲ್ಲದೇನೇ ಸಂಘಗಳನ್ನು ಏರ್ಪಡಿಸಿದ್ದೂ ಉಂಟು). ಮತ್ತೆ ಹಣ ಸಾಲ ಸಿಕ್ಕುತ್ತದೆಂದು ಬಂದ ಬಂದವರನ್ನೆಲ್ಲ, ಲೇವಾದೇವಿಯ ಮೊತ್ತವನ್ನೇರಿಸಬೇಕೆಂದು ಮೆಂಬರರನ್ನಾಗಿ ಸೇರಿಸಿಕೊಳ್ಳುತ್ತದೆ. ಯಾರ ಸ್ಥಿತಿ ಎಷ್ಟರದೆಂದು ನೋಡುವವರೇ ಇಲ್ಲ. ಕಾಲ ಕಳೆದ ಹಾಗೆ, ಹಲ ಕೆಲವರು ರಾಜಿಕೊಟ್ಟು ಬಿಟ್ಟೂ ಹೋಗುತ್ತಾರೆ, ಹಲ ಕೆಲವರು ಸತ್ತು ಮೆಂಬರಿಕೆಯಿಂದ ಕಳಚಿಯೂ ಹೋಗುತ್ತಾರೆ. ಮೆಂಬರರ ಜವಾಬ್ದಾರಿಯಲ್ಲಿ ಇಂತಹ ವಿದ್ಯಮಾನಗಳಿಂದ ಉಂಟಾಗುವ ಏರಿಳಿತಗಳನ್ನು ಇದುವರೆಗೆ ಅಳೆದವರೇ ಇಲ್ಲ. ಸಂಘವು ಕಾಲ ಕ್ರಮೇಣವಾಗಿ ಜಾಗೃತಿ, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ದಾಟಿ, ತುರೀಯಾವಸ್ಥೆಯನ್ನೈದಿದಾಗ, ಅನುಕೂಲಸ್ಥರಾಗಿದ್ದವರು ಕೆಲವರು ಮೊದಲೇ ಮೆಂಬರಿಕೆಯಿಂದ ತಪ್ಪಿ ಹೋಗಿದ್ದಾರೆಂದೂ, ಉಳಿದವರಲ್ಲಿ ಕೆಲವರು ತಮಗಿದ್ದ ಆಸ್ತಿ ಪಾಸ್ತಿಗಳನ್ನೆಲ್ಲ ಯಾರ್‍ಯಾರ ಹೆಸರಿಗೆ ಮಾಡಿಟ್ಟು ತೋರಿಕೆಗೆ ನಿರ್ಗತಿಕರಾಗಿ ಕುಳಿತುಕೊಂಡು ಬಿಟ್ಟಿದ್ದಾರೆಂದೂ ಉತ್ತರ ಕ್ರಿಯಾಧಿಕಾರಿಗಳ ಕಾರ್ಯಾವಸರದಲ್ಲಿ ಬಯಲಾಗುತ್ತದೆ. ಅಂತಹವರು ಕೆಲವರು ಮಾತ್ರವಾದುದರಿಂದ, ಸಂಘಕ್ಕೆ ಸಾಲ ತೆತ್ತವರಿಗೆ ಉಳಿದವರೆಲ್ಲರ ಸ್ಥಿರಚರಾದಿಗಳು ಸಿಕ್ಕಿ ಅವುಗಳ ಮೂಲಕ ಹಣಗಳ ವಸೂಲಿಗೆ ಹೆಚ್ಚಿನ ಮೋಸವೇನೂ ಬಾರದಿದ್ದರೂ, ನಿರಪರಾಧಿಗಳಾದ ಕುರಿಮರಿಗಳಂತಿರುವವರೇ ಕೊನೆಗೆ ಬಲಿವಿದ್ದು, ಅಮಿತ ಜವಾಬ್ದಾರಿಯ ಅಪ್ರತಿಮ ಭದ್ರತೆಯೆಂಬುದು ಮಿತಿಯಿಲ್ಲದ ಅಪಾಯವಾಗಿ ಪರಿಣಮಿಸುತ್ತದೆ. ಅಮಿತ ಜವಾಬ್ದಾರಿಯ ಅಪಾಯಗಳನ್ನು ತಪ್ಪಿಸಬೇಕಾದರೆ ಎಲ್ಲರು ಜಾಗರೂಕತೆಯಿಂದ ಕಣ್ಣು ಬಿಟ್ಟು ನೋಡುವಂತಹವರಾಗಬೇಕು. ಜಾಗರೂಕತೆಗೆ ಬುದ್ಧಿ ಬಲವೇ ಮೂಲವಾಗಿದೆ. ಬುದ್ಧಿ ಬಲವು ಕೇವಲ ಪ್ರಾಮಾಣಿಕತೆಯೊಂದರಿಂದಲೇ ಬಾರದು. ಬುದ್ಧಿ ಬಲಕ್ಕೆ ವಿದ್ಯಾಬಲದ ಆಧಾರವಿರಬೇಕು. ಅಜ್ಞಾನಿಗಳಾದ ನಿರಕ್ಷರ ಕುಕ್ಷಿಗಳ ಬುದ್ಧಿ ಬಲವು ಎಷ್ಟೆಂದರೂ ಅಷ್ಟೇ. ಸಹಕಾರಿ ಸಂಘಗಳು ಸರಿಯಾಗಿ ನಡೆದು ಸಹಕಾರದಲ್ಲಿ ಫಲಪ್ರಾಪ್ತಿಯಾಗಬೇಕಾದರೆ - ಸಹಕಾರವೇ ಎಂದೇನು, ಯಾವ ಗ್ರಾಮ ಸಂಸ್ಥೆಗಳಾದರೂ ಸರಿಯಾಗಿ ನಡೆಯಬೇಕಾದರೆ, ವಿದ್ಯೆಯು ಗ್ರಾಮಗಳಲ್ಲೆಲ್ಲ ಸರ್ವತ್ರ ಹರಡಬೇಕಾಗಿದೆ. ಅವಿದ್ಯೆಯಲ್ಲಿ ಸಹಕಾರವೆಂದರೆ, ಮಳಲಿನಲ್ಲಿ ಮನೆ ಕಟ್ಟಿದಂತೆಯೇ ಸರಿ. "ವಿದ್ಯಾ ವಿಹೀನಃ ಪಶುಃ" ಎಂಬುದರ ಅರ್ಥವನ್ನು ಸಹಕಾರಿ ಸಂಘಗಳ ಇಂದಿನ ಅವಸ್ಥೆಯು ಚೆನ್ನಾಗಿ ನಿದರ್ಶಿಸಿ ತೋರಿಸಿದೆ.

ಆದುದರಿಂದ ಗ್ರಾಮಸ್ಥರ ಶಿಕ್ಷಣ ಕಾರ್ಯವು ಮೊದಲು ನೆರವೇರಬೇಕಾಗಿದೆ. ವಿದ್ಯೆಯ ಮೂಲಕ ಬುದ್ಧಿ ವಿಕಾಸವಾಗಿ, ವಿಚಾರಶೀಲತೆಯೂ, ವಿಚಕ್ಷಣತೆಯೂ ವ್ಯವಹಾರದಕ್ಷತೆಯೂ ಉಂಟಾದ ಮೇಲೆಯೇ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ವಿಹಿತವು. ತನ್ನ ಮನೆಮಾರೆಂದರೆ ಪ್ರತಿಯೊಬ್ಬನಿಗೂ ಸ್ವಾಭಾವಿಕವಾಗಿ ಒಂದು ಬಗೆಯ ಕುರುಡು ಅಭಿಮಾನವಿದೆ. "ತನ್ನ ಮರಿ ಹೊನ್ನ ಮರಿ, ಪರರ ಮರಿ ಕಾಗೆ ಮರಿ" ಯೆಂಬಂತಹ ನಾಣ್ನುಡಿಗಳಲ್ಲಿ ಬಿಂಬಿಸಲ್ಪಡುವ ಅಭಿಮಾನವೇ ಅದು. ಅಂತಹ ಮೂಢ ವಾತ್ಸಲ್ಯದಲ್ಲಿ ಸಾರ್ಥಕ್ಯವಿಲ್ಲ. ನಮ್ಮದೆಲ್ಲವೂ ಒಳ್ಳೇದೆಂದಂದುಕೊಂಡು ಕೂಪ ಮಂಡೂಕಗಳಂತೆ ನಮ್ಮ ಜೀವನವನ್ನು ಇದು ವರೆಗೆ ಸಾಗಿಸಿದೆವು. ಇನ್ನಾದರೂ ಚೆನ್ನಾಗಿ ಕಣ್ಣು ಬಿಟ್ಟು ಹೊರಗೆ ನೋಡಿ. ಅನ್ಯರಲ್ಲಿಯೂ ಒಳ್ಳೇದಿದೆಯೆಂಬುದನ್ನರಿತು, ಹಾಗೆ ಒಳ್ಳೇದಾಗಿದ್ದುದನ್ನು ಕಲಿತುಕೊಳ್ಳಬೇಕಾಗಿದೆ. ಅನ್ಯರಾಗಿದ್ದುದನ್ನು ಸೇವಿಸುವಾಗ ಒಳ್ಳೇದನ್ನು ಮಾತ್ರ ಸ್ವೀಕರಿಸಿ ಉಳಿದುದನ್ನು ಬಿಟ್ಟುಬಿಡಬೇಕಾಗುತ್ತದೆ. ಇಂತಹ ವಿವೇಚನೆಯನ್ನು ತೋರಿಸುವುದಕ್ಕೆ ವಿದ್ಯಾಬಲದಿಂದ

ಪರಿಷ್ಕರಿಸಲ್ಪಟ್ಟ ಬುದ್ಧಿ ಬಲವು ಆಗತ್ಯವಿದೆ. ನಮ್ಮ ನಮ್ಮ ಮಕ್ಕಳುಮರಿ, ಮನೆ ಮಾರು, ಆಸ್ತಿಪಾಸ್ತಿಗಳ ಮಟ್ಟಿಗೆ ಮಾತ್ರ ವ್ಯಾಪಿಸಿಕೊಂಡಿರುವ ನಮ್ಮ ಮಮತೆಯನ್ನು ನಮ್ಮ ನಮ್ಮ ಗ್ರಾಮಗಳ ಮಟ್ಟಿಗೂ ವಿಸ್ತರಿಸಬೇಕಾಗಿದೆ. ದೇಶಭಕ್ತಿ, ರಾಷ್ಟ್ರಾಭಿಮಾನ, ಮುಂತಾದ ಗುಣಗಳನ್ನಾರ್ಜಿಸಿ ಆಚರಣೆಯಲ್ಲಿ ತರುವುದಕ್ಕೆ ನಮ್ಮ ನಮ್ಮ ಗ್ರಾಮಗಳ ಸಂಸ್ಕರಣವೇ ಪ್ರಥಮ ಸೋಪಾನವಾಗಿದೆ. ಜಗಲಿ ಹಾರಿ ಗಗನ ಹಾರಬೇಕಾಗಿದೆ. ಪ್ರತಿಯೊಂದು ಗ್ರಾಮದವರೊಳಗಿನ ಯಾವತ್ತೂ ವಾದ ವಿದಾಗಳನ್ನು ಆಯಾ ಗ್ರಾಮದಲ್ಲೇ ತೀರಿಸುವಂತಿರಬೇಕು. ಪ್ರತಿಯೊಂದುಗ್ರಾಮದವರ ಶಿಕ್ಷಣ ಆರೋಗ್ಯ ರಕ್ಷಣ, ಮುಂತಾದ ಸಾರ್ವಜನಿಕ ಸೌಕರ್ಯಗಳನ್ನು ಆಯಾ ಗ್ರಾಮದ ಹತ್ತು ಸಮಸ್ತರೇ ನಡಿಸುವಂತಾಗಬೇಕು. ಇದಕ್ಕೆಲ್ಲ ಅನುಕೂಲವಾಗುವಂತೆ, ಹಳೆಯ ಗ್ರಾಮ, ಕೋರ್ಟುಗಳನ್ನು ಪಂಚಾಯತರ ನ್ಯಾಯಸ್ಥಾನಗಳಾಗಿ ಮಾರ್ಪಡಿಸಿ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿಯದೆ. ಗ್ರಾಮ ಪಂಚಾಯತ ಸಂಸ್ಥೆಗಳ ಕಾನೂನೊಂದನ್ನು ಪ್ರತ್ಯೇಕವಾಗಿ ಏರ್ಪಡಿಸಿಯದೆ. ಆದರೆ ಅವುಗಳ ಸದ್ವಿನಿಯೋಗಮಾಡಿ ಪೂರ್ಣ ಪ್ರಯೋಜನವನ್ನು ಪಡೆಯಬೇಕಾದರೆ, ವಿದ್ಯಾ ವ್ಯಾಪ್ತಿಯಿಂದ ಲಭಿಸುವ ಬುದ್ಧಿ ವಿಕಾಸವೂ, ವಿಶಾಲ ಸಂಸ್ಕೃತಿಯೂ, ಉದಾರ ಹೃದಯವೂ ಬೇಕು. ವಿದ್ಯೆಯಿಲ್ಲದಿದ್ದರೆ, ಬುದ್ಧಿ ವಿಕಾಸವೆಂಬುದು ಒರಟುತನವಾಗುತ್ತದೆ, ವಿಶಾಲ ಸಂಸ್ಕೃತಿಯೆಂಬುದು ದುರಹಂಕಾರವಾಗುತ್ತದೆ, ಉದಾರ ಹೃದಯವೆಂಬುದು ದುಂದುಗಾರಿಕೆಯಾಗುತ್ತದೆ. ಆದುದರಿಂದ ಎಲ್ಲದಕ್ಕೂ ಮೊದಲಾಗಿ ವಿದ್ಯೆಯನ್ನು ಸರ್ವತ್ರ ಹರಡಿಸಬೇಕಾಗಿದೆ. ಇದಕ್ಕೆ ಸರಕಾರವೇ ಕೈಯಿಕ್ಕಬೇಕು. ವಿದ್ಯಾದಾನ ಮಾಡುವುದು ಎಲ್ಲಿಯೂ ಸರಕಾರದ ಧರ್ಮವಾಗಿದೆ. ನಮ್ಮಲ್ಲಿ ಜನತೆಯ ಪ್ರಕೃತಾವಸ್ಥೆಯು ಕೇವಲ ನಿಶ್ಚೇತನಾವಸ್ಥೆಯಾಗಿರುವುದರಿಂದ, ವಿದ್ಯೆ ಕೊಡುವುದು ಇನ್ನಷ್ಟು ಹೆಚ್ಚು ಮಟ್ಟಿಗೆ ಸರಕಾರದ ಕರ್ತವ್ಯವಾಗಿದೆ. ವಿದ್ಯೆಯು ಹಬ್ಬಿ, ಗ್ರಾಮ ಪಂಚಾಯತ ಸಂಸ್ಥೆಗಳು ಶ್ರೇಯಸ್ಕರವಾಗಿ ನಡೆಯತೊಡಗಿ, ಪಂಚಾಯತರ ನ್ಯಾಯ ಸ್ಥಾನಗಳು ವಿಶ್ವಸನೀಯವಾಗಿ ಕೆಲಸಮಾಡುತ್ತಿದ್ದು, ಗ್ರಾಮಸ್ಥರು ತಮ್ಮ ಸಾರ್ವಜನಿಕ ಜವಾಬ್ದಾರಿಗಳನ್ನು ಸುಸೂತ್ರವಾಗಿ ನಿರ್ವಹಿಸುತ್ತಾರೆಂಬ ಭರವಸೆಗೆ ಸಾಕಷ್ಟು ಆಸ್ಪದವಾದಮೇಲೆಯೇ ಸಹಕಾರಿ ಸಂಘಗಳ ಏರ್ಪಾಡು ಕಾಲೋಚಿತವೆನ್ನಬಹುದು. ಆಗ ಮಾತ್ರ ಹಣವನ್ನು ಸಿಕ್ಕಿದ ಹಾಗೆ ಪಡಕೊಂಡು ಕೇಳಿದ ಹಾಗೆ ಕೊಟ್ಟು ವಾಯಿದೆ ಬಂದಾಗ ಕಣ್ಣು ಮುಚ್ಚಿ ನಿದ್ರೆ ಹೋಗುತ್ತಿದ್ದು ಸಂಬಂಧಪಟ್ಟವರೆಲ್ಲರ ನೆಮ್ಮದಿಗೆ ಭಂಗವನ್ನುಂಟುಮಾಡುವ ಅಪಾಯವು ತಪ್ಪಿ ಹೋದೀತು. ಸಹಕಾರಿ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಮಿತಿಮೇರೆಗಳಿಲ್ಲದೆ ಹೋಯಿತು. ಉತ್ಸಾಹವು ಗಗನಕ್ಕೇರಿತು. ವಿವೇಕವು ಜಾರಿತು; ಹದ ಮೀರಿತು; ಎಲ್ಲವೂ ತೀರಿತು. ಹೋಮಾಗ್ನಿಯು ಬಹಳ ಪ್ರಬಲವಾಗಿ ಹೋಗಿ ಮನೆಗೇ ಬೆಂಕಿ ಹತ್ತಿತಂತೆ. 'ಹೋಮ ಮೀರಿತು, ಇನ್ನು ಒಕ್ಕಲು ಏಳಿರಿ' ಎಂದು ತುಳುವರಲ್ಲಿ ಒಂದು ಗಾದೆಯೇ ಆಗಿ ನಿಂತಿತು. ಈ ಸಂದರ್ಭದಲ್ಲಿ ಆ ಗಾದೆಯು ನೆನಪಿಗೆ ಬರುತ್ತದೆ. ಅಂತೂ ಅವಸ್ಥೆಯು ಬಹಳ ಶೋಚನೀಯವಾಯಿತು. ಶೋಧನೆ ಮಾಡಿ ಪರಿಹಾರಗಳನ್ನು ಸೂಚಿಸುವುದಕ್ಕೆ ಅಭಿಜ್ಞರ ಕಮಿಟಿಯೇ ಬೇಕಾಯಿತು. ಇನ್ನು ಆ ಕಮಿಟಿಯವರ ಬತ್ತೆ ಸಂಬಳಗಳಿಗಾಗಿ ಸಾವಿರಗಟ್ಟಲೆ ರೂಪಾಯಿ ಖರ್ಚುಮಾಡಿದರೆ ಸೈ. ಮದುವೆಗಾಗಿ ಉಪಯೋಗಿಸಲ್ಪಡಬೇಕಾದ ಅಕ್ಕಿಯು ಸೇಸೆಯಲ್ಲೇ ಮುಗಿಯುತ್ತದೆ.

ಇನ್ನಾದರೂ ಹೊಸ ಸಂಘಗಳ ಏರ್ಪಾಡನ್ನು ಗ್ರಾಮಗಳ ಸ್ಥಿತಿಯು ಸುಧಾರಣೆಯಾಗುವವರೆಗೆ ನಿಲ್ಲಿಸಬೇಕಾಗಿದೆ. ಈಗಾಗಲೇ ಏರ್ಪಡಿಸಿರುವ ಸಂಘಗಳನ್ನು ಕೂಲಂಕಷವಾಗಿ ಶೋಧನೆ ಮಾಡಿ ನೋಡುವುದು ಅತ್ಯಗತ್ಯವು. ಸಂಘಗಳಲ್ಲಿ ಕಾರ್ಯನಿರ್ವಾಹವು ಸರಿಯಾಗಿ ಸಾಗಬೇಕಾದರೆ ಯೋಗ್ಯ ಜನ ಸಹಾಯವು ಆಗತ್ಯವೆಂಬುದು ಮಂದಟ್ಟಾಗಬಹುದು. ಈಗಿನ ಸಂಘಗಳು ಕೆಲಸ ನಡಿಸುತ್ತಿರುವಲ್ಲಿ ಎಲ್ಲಿಲ್ಲಿ ಯೋಗ ಜನಸಹಾಯದ ಅನುಕೂಲತೆಯು ಸಾಕಷ್ಟಿದೆಯೆಂದು ನಿರ್ಧರಿಸಬೇಕು. ಅಂತಹ ಅನುಕೂಲತೆಯು ಒದಗಿರುವಲ್ಲಿ, ಅಥವಾ ಒದಗುವಲ್ಲಿ, ಇಲ್ಲವೆ ಒದಗುವ ಸಂಭವವಿರುವಲ್ಲಿ ಮಾತ್ರ ಸಂಘಗಳನ್ನು ಇರಗೊಡಿಸಬೇಕು. ಉಳಿದೆಡೆಗಳಲ್ಲಿರುವ ಸಂಘಗಳನ್ನೆಲ್ಲ ಮುಚ್ಚಿ ಅವುಗಳ ಉತ್ತರಕ್ರಿಯಾದಿಗಳನ್ನೆಲ್ಲ ಆದಷ್ಟು ಶೀಘ್ರದಲ್ಲಿ ಮುಗಿಸಿ ಸೂತಕ ನಿವೃತ್ತಿ ಮಾಡಿಕೊಂಡು ಸ್ವಸ್ಥಚಿತ್ತರಾಗಬೇಕು. ಇಲ್ಲವಿದ್ದರೆ ಹುಳಿತು ಕೊಳೆಯುತ್ತಿರುವ ಭಾಗಗಳಿಂದ ಕಲುಷಿತವಾದ ವಾತಾವರಣದಲ್ಲಿ ಇಂದಿನ ತನಕ ಆರೋಗ್ಯದಿಂದಿರುವ ಭಾಗಗಳು ಸಹ ಹಳಿ ಹಾಳಾಗಿಹೋಗಿ, ಸಹಕಾರದ ಹೆಸರೇ ಸಂಪೂರ್ಣವಾಗಿ ಕೆಟ್ಟುಹೋದೀತು.

ಆದುದರಿಂದ ಈಗ ವಿಚಾರನಡೆಸುತ್ತಿರುವ ಕಮಿಟಿಯವರು ಬೇರೆ ಯಾವ ವಿಷಯಕ್ಕಿಂತಲೂ ಹೆಚ್ಚಾಗಿ ಈ ವಿಷಯಕ್ಕೆ ಗಮನಕೊಡಬೇಕಾಗಿದೆ. ಸಹಕಾರಿ ಚಳವಳಿಯ ಭವಿತವ್ಯತೆಯು ತೀರಾ ಮೂಲಸಂಘಗಳ ಮೇಲೆಯೇ ಹೊಂದಿದೆ. ಮೂಲಸಂಘಗಳ ಉತ್ತರೋತ್ತರವೆಲ್ಲ ಯೋಗ್ಯ ಜನಸಹಾಯದ ಮೇಲೆ ಆಧರಿಸಿಕೊಂಡಿದೆ. ಯೋಗ್ಯ ಜನ ಸಹಾಯವಿಲ್ಲದಿದ್ದರೆ ಎಷ್ಟು ಲೆಕ್ಕಪರಿಶೋಧನೆ, ಮೇಲ್ವಿಚಾರಗಳಿದ್ದರೂ, ಎಷ್ಟು ಧನಬಲವಿದ್ದರೂ, ಕೆಲಸವು ಕೈಗೂಡದು. ಯೋಗ್ಯ ಜನಸಹಾಯವಿದ್ದರೂ ಜ್ಞಾತಾಜ್ಞಾತ ಲೋಪದೋಷಗಳು ಸಂಭವಿಸಬಹುದು. ಆದರೆ ಜ್ಞಾತ ಲೋಪದೋಷಗಳು ಕಡಮೆಯಾದಾವು. ಮತ್ತು ಸ್ವಲ್ಪ ಮೇಲ್ವಿಚಾರವಿದ್ದರೆ, ತಪ್ಪುಗಳು ಕಾಲಕ್ರಮೇಣವಾಗಿ ಇಲ್ಲದೆ ಹೋದಾವು. ಕಮಿಟಿಯವರು ಸಹಕಾರಿ ಸಂಘಗಳ ಇಂದಿನವರೆಗಿನ ಪ್ರಗತಿಯನ್ನಳೆದು ಮುಂದಿನ ಅಭಿವೃದ್ಧಿಯ ಮಾರ್ಗವನ್ನು ಸೂಚಿಸುವುದರಲ್ಲಿ ಈ ವಿಷಯವನ್ನು ಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಳ್ಳುವುದು ವಿಹಿತವೆಂದು ನಮ್ಮ ಅಭಿಪ್ರಾಯವಾಗಿದೆ. ಆ ಒಂದು ವಿಷಯವನ್ನು ಬದಿಗೊತ್ತಿ, ಲೆಕ್ಕಪತ್ರಗಳನ್ನಿಡೋಣ, ಲೆಕ್ಕಪರಿಶೋಧನೆ ಮಾಡಿಸೋಣ, ಮೇಲ್ವಿಚಾರ ನಡಿಸೋಣ, ಠೇವಣಾತಿಗಳನ್ನು ಶೇಖರಿಸೋಣ, ಮೊದಲಾದ ಬೇರೆ ಯಾವ ವಿಷಯಗಳನ್ನು ಕುರಿತು ಎಂತಹ ಕಟ್ಟುಕಟ್ಟಳೆಗಳನ್ನು ವಿಧಿಸಿದರೂ, ಅವುಗಳನ್ನು ಅನುಸರಿಸಲಿಕ್ಕೆ ಯೋಗ್ಯಚಾಲಕರಾಗಲಿ ಅವುಗಳನ್ನನುಸರಿಸುವಂತೆ ನೋಡಿಕೊಳ್ಳಲಿಕ್ಕೆ ಸುಶಿಕ್ಷಿತಮೆಂಬರ ವರ್ಗವಾಗಲಿ ಇಲ್ಲದೆಹೋದರೆ, ಸಂಘಗಳ ಸ್ಥಿತಿಯು ಮತ್ತೂ ಕೆಟ್ಟುಹೋಗಿ ಇನ್ನೇನಾಗಬೇಕೆಂದು ಸೂಚಿಸುವುದಕ್ಕೆ ಮತ್ತೆ ಪುನಃ ಬೇರೊಂದು ಕಮಿಟಿಯಾಗಬೇಕಾದೀತು. ಸಹಕಾರಾಭಿಮಾನಿಗಳು ಆಲೋಚಿಸಲಿ.

❑

೬

ಶಿಕ್ಷಣದಲ್ಲಿ ಭಾಷೆ ಮತ್ತು ಬುದ್ಧಿವಂತಿಕೆ

ಚೆ.ವಿ. ಶ್ರೀನಾಥಶಾಸ್ತ್ರಿ

ಕರ್ನಾಟಕದಲ್ಲಿ ಪ್ರತಿವರ್ಷವೂ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಗಳ ಶೇಕಡಾವಾರು ಉತ್ತೀರ್ಣ ಮತ್ತು ಅಂಕಗಳಿಕೆಯಲ್ಲಿ ಬೆಂಗಳೂರಿಗಿಂತ ಗ್ರಾಮಾಂತರ ವಿದ್ಯಾರ್ಥಿಗಳು ಮೇಲುಗೈ ಪಡೆಯುತ್ತಿದ್ದಾರೆ. ನಗರ ಪ್ರದೇಶಗಳ ಮಕ್ಕಳು ಇಂಗ್ಲಿಷ್‌ನಲ್ಲಿ ಸಲೀಸಾಗಿ ಮಾತನಾಡಿದರೂ ನಿಜವಾದ ಬುದ್ಧಿವಂತಿಕೆಯಲ್ಲಿ ಅವರು ಹಿಂದುಳಿದಿದ್ದಾರೆ. ಇದಕ್ಕೆ ನಿಜವಾದ ವೈಜ್ಞಾನಿಕ ಕಾರಣಗಳನ್ನು ನೋಡೋಣ.

ಶಿಕ್ಷಣದ ಉದ್ದೇಶ

ಬಹುಮುಖ್ಯವಾಗಿ ಶಿಕ್ಷಣದ ಉದ್ದೇಶವೆಂದರೆ ಮಕ್ಕಳು ವಿವಿಧ ವಿಷಯಗಳಲ್ಲಿ ಬುದ್ಧಿವಂತರಾಗುವುದು. ಅಂದರೆ ಮಕ್ಕಳು ತಾವು ನೋಡಿದ, ಓದಿದ ಹಾಗೂ ಕೇಳಿದ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು; ಈಗಾಗಲೇ ಕಲಿತ ವಿಷಯಗಳ ಬಗ್ಗೆ ಇನ್ನೂ ಹೆಚ್ಚಿನ ವಿಚಾರಗಳನ್ನು ತಿಳಿಯಲು ಆಸಕ್ತಿ ತೋರಿಸುವುದು; ಅಗತ್ಯವಾದಾಗಲೆಲ್ಲಾ ನೆನಪಿನಲ್ಲಿನ ವಿಷಯಗಳನ್ನು ಮನಸ್ಸಿಗೆ ತಂದುಕೊಂಡು ಅವುಗಳ ಬಗ್ಗೆ ಆಲೋಚಿಸುವುದು; ತಾವು ತಿಳಿದ ವಿಚಾರಗಳನ್ನು ಮನಸ್ಸಿಗೆ ತಂದುಕೊಂಡು ಅವನ್ನು ಮಥಿಸಿ ಹೊಸ ವಿಚಾರಗಳನ್ನು ಕಂಡುಕೊಳ್ಳುವುದು. ಇದು ಎಲ್ಲರೂ ಅಪೇಕ್ಷಿಸುವ, ಎಲ್ಲರಲ್ಲೂ ನಿರೀಕ್ಷಿಸುವ, ನಿಜವಾದ ಬುದ್ಧಿಶಕ್ತಿಯ ಮತ್ತು ವ್ಯಕ್ತಿತ್ವದ ಬೆಳವಣಿಗೆಯ ಪ್ರಧಾನ ಅಂಶಗಳು.

ವಿಶ್ವಾದ್ಯಂತ ಮನಶ್ಶಾಸ್ತ್ರಜ್ಞರು ನಡೆಸಿರುವ ಆಳವಾದ ಸಂಶೋಧನೆಗಳ ಫಲಿತಾಂಶವೆಂದರೆ ಮಕ್ಕಳ ಸಂಬಂಧದ ಬುದ್ಧಿವಂತಿಕೆಯ ಮೇಲ್ಕಂಡ ಈ ೪ ಪ್ರವೃತ್ತಿಗಳು ೧೨ ವರ್ಷಗಳೊಳಗೆ ಮಾತ್ರ ಬರುತ್ತವೆ. ಅನಂತರವಲ್ಲಿ ಅಲ್ಲ. ಇಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಮಕ್ಕಳು ಮಾತ್ರ ಮುಂದೆ ಯಾವುದನ್ನಾದರೂ ಚೆನ್ನಾಗಿ ಕಲಿಯಬಲ್ಲರು ಮತ್ತು ಬುದ್ಧಿವಂತರಾಗಬಲ್ಲರು.

ಆದ್ದರಿಂದ ಮಕ್ಕಳು ನಿಜವಾಗಿ ಬುದ್ಧಿವಂತರಾಗಲು ೧೨ ವರ್ಷಗಳೊಳಗಿನ ವಿದ್ಯಾಭ್ಯಾಸ ಮತ್ತು ವಿದ್ಯಾಭ್ಯಾಸದ ಭಾಷೆಯು ಬಹುಮುಖ್ಯವಾದುದು. ಅಲ್ಲಿಯವರೆಗಿನ ಶಿಕ್ಷಣದ ಭಾಷೆ ಮತ್ತು ಮಾಧ್ಯಮ ಮಾತೃಭಾಷೆಯಾಗಿರಬೇಕು. ಬಹುಮುಖ್ಯವಾಗಿ, ಕಲಿಕೆಯ ಭಾಷೆಯು ವೈಜ್ಞಾನಿಕ, ಅಸಂದಿಗ್ಧ ಸಂಬದ್ಧ ರಚನೆಯ ಹಾಗೂ ಧ್ವನ್ಯಾತ್ಮಕ ಭಾಷೆಯಾಗಿರಬೇಕು. ಭಾರತೀಯ ಭಾಷೆಗಳು ಅತ್ಯಂತ ವೈಜ್ಞಾನಿಕ, ಧ್ವನ್ಯಾತ್ಮಕ; ಉಚ್ಚಾರಣೆ ಮತ್ತು ಬರವಣಿಗೆಗಳ ನಡುವೆ ಅವಿನಾಭಾವದ ಸಂಬಂಧವಿದೆ. ಇಂಗ್ಲಿಷ್ ಆದರೋ ಅತ್ಯಂತ ಅವೈಜ್ಞಾನಿಕ, ಸಂದಿಗ್ಧಮಯ, ಅಸಂಬದ್ಧ ರಚನೆಯ ಹಾಗೂ ಧ್ವನ್ಯಾತ್ಮಕವಲ್ಲದ ಭಾಷೆ.

ಭಾರತೀಯ ಭಾಷೆಗಳ ಗುಣ ಮತ್ತು ಇಂಗ್ಲಿಷ್ ಭಾಷೆಯ ಅವಗುಣಗಳನ್ನು ಇಂಗ್ಲಿಷ್ ಮಾತೃಭಾಷೆಯುಳ್ಳವರೂ ಸೇರಿ ವಿಶ್ವದ ಅನೇಕ ಪ್ರತಿಷ್ಠಿತ ವಿಜ್ಞಾನಿಗಳು ಮತ್ತು ವಿದ್ವಾಂಸರು ಹೇಳಿದ್ದಾರೆ. ಬರವಣಿಗೆಗೂ ಉಚ್ಚಾರಣೆಗೂ ಸಂಬಂಧವಿಲ್ಲದ ಇಂಗ್ಲಿಷ್ ಪದಗಳ ಸ್ಪೆಲಿಂಗುಗಳ ಮತ್ತು ಗೊಂದಲಕ್ಕೆ ದೂಡುವ ವಾಕ್ಯರಚನೆಗಳ ಸುಳಿಯಲ್ಲಿ ಸಿಕ್ಕಿ ಆರಂಭದಲ್ಲೇ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ದೂಡಲ್ಪಟ್ಟ ನೂರಕ್ಕೆ ತೊಂಬತ್ತು ಮಂದಿ ಮಕ್ಕಳಿಗೆ ಸಂಬಂಧಿಸಿದಂತೆ ಅವರ ಮನಸ್ಸು ಅರಳದು ಹಾಗೂ ಅವರಿಗೆ ಕಲಿಕೆಯಲ್ಲಿ ಆಸಕ್ತಿ ಹುಟ್ಟದು. ಅವರು ವಿಷಯಗಳನ್ನು ಚೆನ್ನಾಗಿ ಗ್ರಹಿಸಲಾರರು ಮತ್ತು ಗ್ರಹಿಸಿದ ವಿಷಯಗಳನ್ನು ಕುರಿತು ಸರಿಯಾಗಿ ಚಿಂತನೆ ನಡೆಸಲಾರರು. ಇದರಿಂದ ಅವರು ಉರು ಹೊಡೆಯುವ ಯಂತ್ರಗಳಾಗುತ್ತಾರೆ; ಸ್ವಂತಿಕೆಯಿಂದ ದೂರವಾಗುತ್ತಾರೆ; ಸೃಜನಾತ್ಮಕ ಶಕ್ತಿ ಅವರಲ್ಲಿ ಮೂಡುವುದಿಲ್ಲ. ಪ್ರಾಥಮಿಕ ಹಂತದಲ್ಲಿ (೧೨ ವರ್ಷದವರೆಗೆ), ಇಂಗ್ಲಿಷ್‌ಗಿಂತಲೂ ಅತ್ಯಂತ ವೈಜ್ಞಾನಿಕ ಭಾಷೆಯಾದ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ವಿಷಯಗಳನ್ನು ಅರಿಯುವ, ಕಲಿಯುವ ವಿಷಯಗಳ ಬಗ್ಗೆ ಆಲೋಚಿಸುವ, ಅವುಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯುವ ಪ್ರವೃತ್ತಿ ಹಾಗೂ ಶಕ್ತಿಯನ್ನು ಬೆಳೆಸಿಕೊಂಡಿರುತ್ತಾರೆ . ಆದ್ದರಿಂದ ಪ್ರಾಥಮಿಕ ಶಿಕ್ಷಣಕ್ಕಂತೂ ಇಂಗ್ಲಿಷ್ ಸರ್ವಥಾ ಯೋಗ್ಯವಲ್ಲ. ಇಂಗ್ಲಿಷ್ ಮಾತೃಭಾಷೆಯಾಗಿದ್ದರೂ ಪರದೇಶದ ಮಕ್ಕಳು, ವಿಜ್ಞಾನಿಗಳು, ಇಂಜಿನಿಯರುಗಳು ಮುಂತಾದವರು ನಿಜವಾದ ಬುದ್ಧಿವಂತಿಕೆಯಲ್ಲಿ ನಮ್ಮವರಿಗಿಂತ ಹಿಂದುಳಿದಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಾಸ್ತವ ಸಂಗತಿ. ೨೦೦೪ನೇ ಇಸವಿ ಮೇ ತಿಂಗಳಲ್ಲಿ ಕಾನ್ಪುರದಲ್ಲಿ ಸೇರಿದ್ದ ಭಾರತದ ಎಲ್ಲ ಐಐಟಿಗಳ ಪ್ರಾಧ್ಯಾಪಕರು ಮತ್ತು ದೇಶದ ವಿವಿಧ ಭಾಗಗಳಿಂದ ಬಂದಿದ್ದ ವಿಜ್ಞಾನಿಗಳು ಸಾಕಷ್ಟು ವಿಚಾರ ಮಂಥನದ ನಂತರದ, ಪ್ರತಿ ಭಾರತೀಯ ಭಾಷಾ ಮಕ್ಕಳಿಗೂ ಅನ್ವಯಿಸುವ, ಒಮ್ಮತದಿಂದ ಒಪ್ಪಿದ ತೀರ್ಮಾನಗಳೇ ಮೇಲ್ಕಂಡ ವಿಚಾರಗಳಾಗಿವೆ.

ಮೇಲ್ಕಂಡ ಎಲ್ಲ ವೈಜ್ಞಾನಿಕ ಹಾಗೂ ವ್ಯಾವಹಾರಿಕ ಅಂಶಗಳ ಪ್ರಕಾರ ಭಾರತದಲ್ಲಿ ಮಕ್ಕಳಿಗೆ ೧೨ ವರ್ಷಗಳಾಗುವವರೆಗೆ ಅಂದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಇಂಗ್ಲಿಷ್ ಅಲ್ಲದ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಮಾತ್ರ ಯೋಗ್ಯವಾದುದು. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಭಾಷೆ ಕನ್ನಡವೇ ಆಗಿರಬೇಕು. ಇದರಿಂದ ಭಾರತದ ಇತರ ಭಾಗಗಳಿಂದ ಬಂದ ಮಕ್ಕಳಿಗೆ ತೊಂದರೆ ಆಗುವುದಿಲ್ಲ. ಏಕೆಂದರೆ ಭಾರತೀಯ ಭಾಷೆಗಳೆಲ್ಲವೂ ಒಂದೇ ಸಂವಿಧಾನದ, ಲಿಪಿ ವ್ಯತ್ಯಾಸವಾದರೂ ಸಮಾನ ಅಕ್ಷರಮಾಲೆಯ ಧ್ವನ್ಯಾತ್ಮಕ ಭಾಷೆಗಳು. ಆದ್ದರಿಂದಲೇ ಮಕ್ಕಳು ಚಿಕ್ಕವಯಸ್ಸಿನಲ್ಲೂ ಎರಡು ಅಥವಾ ಮೂರು ಭಾಷೆಗಳನ್ನು ಕಲಿಯಬಲ್ಲರು. ಆ ಸಾಮರ್ಥ್ಯ ಅವರಿಗೆ ಇರುತ್ತದೆ ಎಂಬುದು ನಿಜವೇ ಆದರೂ, ಈ ಎರಡು ಮತ್ತು ಮೂರು ಭಾಷೆಗಳ ಗುಂಪಿನಲ್ಲಿ ಇಂಗ್ಲಿಷ್ ಅನ್ನು ಸೇರಿಸಲಾಗದು.

ಆದರೆ ಇಂಗ್ಲಿಷ್ ಅನಿವಾರ್ಯ ಮತ್ತು ಅತ್ಯಗತ್ಯವಾದ್ದರಿಂದ ಮಕ್ಕಳು ಅನಂತರದಲ್ಲಿ ಅಂದರೆ ೫ನೆಯ ತರಗತಿಯಿಂದ ಇಂಗ್ಲಿಷ್‌ನ್ನು ಕಲಿಯುವಾಗ ಸ್ಪೆಲಿಂಗುಗಳ ಅನಿವಾರ್ಯತೆಗೆ ಬೇಕಾದಷ್ಟು ಮಾತ್ರ ಬುದ್ಧಿ ನೀಡುತ್ತಾರೆ. ಇಂಗ್ಲಿಷ್‌ನ ಗೊಂದಲಮಯ ವ್ಯಾಕರಣದ ಅಗತ್ಯವಾದಷ್ಟು ಭಾಗವನ್ನು ಅರಗಿಸಿಕೊಳ್ಳಬಲ್ಲವರಾಗಿರುತ್ತಾರೆ. ಆಗ ಅವರು ನಿಜವಾಗಿಯೂ ಬುದ್ಧಿವಂತರಾಗುವ ಸರಿಯಾದ ಮಾರ್ಗದಲ್ಲಿರುವುದರಿಂದ ಬುದ್ಧಿಶಕ್ತಿಯ ಇತರ ಚಟುವಟಿಕೆಗಳಿಗೆ ಅಡ್ಡಿಯಾಗುವುದಿಲ್ಲ. ಅವರು ಕೇವಲ

ಉರುಹೊಡೆಯುವ ಯಂತ್ರಗಳಾಗುವುದಿಲ್ಲ; ವಿಷಯ ಗ್ರಹಣೆಯ ಪ್ರವೃತ್ತಿಯನ್ನು ಇಲ್ಲೂ ತೊಡಗಿಸುತ್ತಾರೆ. ಕೇವಲ ಎರಡು ಮೂರು ವರ್ಷಗಳಲ್ಲೇ ಇಂಗ್ಲಿಷನ್ನು ಬಹು ಚೆನ್ನಾಗಿ ಕಲಿಯಬಲ್ಲರು ಹಾಗೂ ಕಲಿಯುವ ಇಂಗ್ಲಿಷ್ ಚೆನ್ನಾಗಿರುತ್ತದೆ ಮತ್ತು ಅರ್ಥಪೂರ್ಣವಾಗುತ್ತದೆ.

ಒಟ್ಟಿನಲ್ಲಿ ಆರಂಭದಿಂದ ಇಂಗ್ಲಿಷ್ ಭಾಷೆಯನ್ನು ಸರಿಯಾಗಿ, ಸಂಭಾಷಣಾತ್ಮಕವಾಗಿ ಮತ್ತು ವ್ಯಾವಹಾರಿಕವಾಗಿ ಹೇಳಿಕೊಡಬೇಕು. ಇಲ್ಲಿ ಮಕ್ಕಳಿಗೆ ಇಂಗ್ಲಿಷ್ ಹೇಳಿಕೊಡುವ ಬಗ್ಗೆ ಅತಿ ಹೆಚ್ಚಿನ ಮುತುವರ್ಜಿ ವಹಿಸಲೇಬೇಕು. ಮಕ್ಕಳಿಗೆ ಕಲಿಸುವ ಇಂಗ್ಲಿಷ್ ಪಾಠಗಳು ಇಲ್ಲಿನ ಪರಿಸರ, ಜನಜೀವನ, ಸಂಸ್ಕಾರಗಳಿಗೆ ಸಂಬಂಧಿಸಿರಬೇಕು. ಇಂಗ್ಲಿಷ್ ಭಾಷೆಯ ಸುಲಲಿತ ಬಳಕೆಯಷ್ಟೇ ಮುಖ್ಯವಾದುದರಿಂದ, ಪರದೇಶದ ಅಪರಿಚಿತ ಹಾಗೂ ವಿಚಿತ್ರ ಉಚ್ಚಾರಣೆಯ ಪದಗಳು, ವಾಕ್ಯಗಳು, ವಿಷಯಗಳು, ಪಾಂಡಿತ್ಯಪೂರ್ಣ ಮಾಹಿತಿಗಳು ಮುಂತಾದವನ್ನು ಖಂಡಿತವಾಗಿಯೂ ದೂರವಿಡಬೇಕು. ಉಪಾಧ್ಯಾಯರು ಮಕ್ಕಳೊಡನೆ ಚಿಕ್ಕ ಚಿಕ್ಕ ವಾಕ್ಯಗಳನ್ನು ಬಳಸಿ ಸಂಭಾಷಣೆಗಳಲ್ಲಿ (ನಿನ್ನ ಹೆಸರೇನು, ನಿನ್ನ ತಂದೆ ಏನು ಮಾಡುತ್ತಾರೆ, ಸೋದರರು, ಸೋದರಿಯರ ಹೆಸರುಗಳು ಇವುಗಳನ್ನು ಕುರಿತ ಮಾಹಿತಿಗಳು ಇತ್ಯಾದಿ ಅತ್ಯಂತ ಸರಳ ಹಾಗೂ ಸುಲಭವಾದ ಪ್ರಶ್ನೆಗಳು ಮತ್ತು ಅವುಗಳಿಗೆ ಮಕ್ಕಳಿಂದ ಉತ್ತರಗಳು ಇತ್ಯಾದಿ) ತೊಡಗಬೇಕು. ಈ ರೀತಿಯ ಇಂಗ್ಲಿಷ್ ಕಲಿಕೆಗಾಗಿ ಕೆಲವು ಇಂಗ್ಲಿಷ್ ಪ್ರಾಧ್ಯಾಪಕರು 'ಇಂಗ್ಲಿಷ್ ವರ್ಕ್ ಬುಕ್'ಗಳನ್ನು ಸಿದ್ಧಪಡಿಸಿದ್ದಾರೆ; ಹಲವರು ಸುಲಭ ಇಂಗ್ಲಿಷ್ ಕಲಿಕೆಯ ಕೋರ್ಸ್‌ಗಳನ್ನು ನಡೆಸುತ್ತಿದ್ದಾರೆ . ಇವುಗಳಲ್ಲಿನ ಸಮುಚಿತ ಹಾಗೂ ಸುಲಭ ಇಂಗ್ಲಿಷ್ ಕಲಿಕೆಯ ವಿಚಾರಗಳನ್ನು ಸೂಕ್ತವಾಗಿ ಅಳವಡಿಸಿದ ಪಠ್ಯಪುಸ್ತಕಗಳು ಮತ್ತು ಪೂರಕ ಪುಸ್ತಕಗಳು ಪೋಷಕರು ಮತ್ತು ಮಕ್ಕಳಲ್ಲಿ ಇಂಗ್ಲಿಷ್ ಬಗೆಗಿನ ಆತಂಕ ಭಯಗಳನ್ನು ಖಂಡಿತವಾಗಿಯೂ ದೂರಮಾಡುತ್ತವೆ. ಇಂತಹ ಮಾರ್ಗಗಳನ್ನು ಅನುಸರಿಸಿದಾಗ ಇಂಗ್ಲಿಷ್ ಕಲಿಕೆಯು ಸಮಸ್ಯೆಯೇ ಅಲ್ಲ. ಒಟ್ಟಿನಲ್ಲಿ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಕಲಿತಿಲ್ಲವಾದ್ದರಿಂದ ಏನನ್ನೋ ಕಳೆದುಕೊಂಡಿದ್ದೇವೆ ಎಂಬ ಕೀಳರಿಮೆ ಮಕ್ಕಳಿಗೆ ಉಂಟಾಗದಂತೆ ಎಲ್ಲರೂ ಅವರಿಗೆ ತಿಳಿವಳಿಕೆ ಹೇಳಬೇಕು. ಇದಕ್ಕಾಗಿ ಅಧ್ಯಾಪಕರಿಗೆ ಸೂಕ್ತವಾದ ಸೂಚನೆಗಳನ್ನು ಕೊಡಬೇಕು, ಕಾರ್ಯಾಗಾರಗಳನ್ನು ನಡೆಸಬೇಕು ಮತ್ತು ತರಬೇತಿ ಕೊಡಬೇಕು.

❑

೭

ಭಾಷೆ ಅನ್ನೋತ್ಪಾದಕವಾಗಲಿ

ಬರಗೂರು ರಾಮಚಂದ್ರಪ್ಪ

ಇತ್ತೀಚೆಗೆ ಕನ್ನಡಕ್ಕೆ ಸಂಬಂಧಿಸಿದ ಒಂದು ಕಂಪ್ಯೂಟರ್ ಮಾಹಿತಿಯನ್ನು ಕೆಲವರು ವಿಶೇಷವಾಗಿ ಪ್ರಸ್ತಾಪಿಸಿ ನಮ್ಮ ಭಾಷೆಗೆ ಒದಗಿರುವ 'ಆಘಾತ'ವನ್ನು ಹಂಚಿಕೊಳ್ಳುತ್ತಿದ್ದಾರೆ. 'ದಕ್ಷಿಣ ಭಾರತದಲ್ಲಿ ಅವನತಿಯ ಅಂಚಿನಲ್ಲಿರುವ ಭಾಷೆಗಳಲ್ಲಿ ಕನ್ನಡವು ಮೊದಲನೆಯ ಸ್ಥಾನದಲ್ಲಿದೆ' - ಎಂಬುದೇ ಈ ಮಾಹಿತಿ. ನಮ್ಮ ನೆಚ್ಚಿನ ಕನ್ನಡಕ್ಕೆ ಇನ್ನೇನು ಅಂತ್ಯ ಸಂಸ್ಕಾರವೇ ಗತಿಯೆಂಬ ಆತಂಕದಿಂದ ಈ ಮಾಹಿತಿಯನ್ನು ಹೇಳಲಾಗುತ್ತಿದೆ. ಕಂಪ್ಯೂಟರ್‌ನಲ್ಲಿ ಲಭ್ಯವಿರುವ ವೆಬ್‌ಸೈಟೊಂದು ಈ ಮಾಹಿತಿಯನ್ನು ನೀಡಿರಬಹುದು. ಆದ್ದರಿಂದ ಈ ಮಾಹಿತಿಯ ಆಧಾರದ ಮೇಲೆ ಮಾತಾಡುವವರ ಪ್ರಾಮಾಣಿಕತೆಯನ್ನು ನಾನು ಶಂಕಿಸಲಾರೆ. ಆದರೆ ನಾನು, ೨೦೦೪ರಲ್ಲಿ ಅಮೇರಿಕದ ಆರ್ಲೆಂಡೊದಲ್ಲಿ ನಡೆದ 'ವಿಶ್ವ ಕನ್ನಡ ಮೇಳ'ದ ಆಶಯ ಭಾಷಣ ಮಾಡಲು ಹೋಗಿದ್ದ ಸಂದರ್ಭದಲ್ಲಿ ಸ್ನೇಹಿತರೊಬ್ಬರು ವೆಬ್‌ಸೈಟೊಂದನ್ನು ತೋರಿಸಿದರು. ಅದರ ಪ್ರಕಾರ 'ಕನ್ನಡವು ವಿಶ್ವದ ಮೊದಲ ಇಪ್ಪತ್ತು ಜೀವಂತ ಭಾಷೆಗಳಲ್ಲಿ ಒಂದು'. ಈ ಎರಡು ವೆಬ್‌ಸೈಟ್‌ಗಳಲ್ಲಿ ಯಾವುದನ್ನು ನಂಬಬೇಕು ? ಕನ್ನಡವು ವಿಶ್ವದ ಮೊದಲ ಇಪ್ಪತ್ತು ಜೀವಂತ ಭಾಷೆಗಳಲ್ಲಿ ಒಂದು ಎಂಬುದನ್ನು ಯಾರಾದರೂ 'ಉತ್ಪ್ರೇಕ್ಷಿತ' ಎಂದು ಭಾವಿಸಿದರೆ, ನಾನು ಇಷ್ಟನ್ನು ಹೇಳಬಯಸುತ್ತೇನೆ : ಮೊದಲ ಇಪ್ಪತ್ತು ಜೀವಂತ ಭಾಷೆಗಳಲ್ಲಿ ಕನ್ನಡವೂ ಒಂದೊ

ಅಲ್ಲವೊ, ಅದು ಒಂದು ಜೀವಂತ ಭಾಷೆ ಎಂಬುದರಲ್ಲಿ ಎರಡು ಮಾತಿಲ್ಲ. ಎಲ್ಲಿಯವರೆಗೆ ಕನ್ನಡವು ಜನಬಳಕೆಯಲ್ಲಿರುತ್ತದೆಯೊ ಅಲ್ಲಿಯವರೆಗೆ ಅದಕ್ಕೆ ಅವಸಾನವಿಲ್ಲ. ಯಾವ ಜನಭಾಷೆಯೂ ಅವಸಾನಗೊಳ್ಳುವುದಿಲ್ಲ; ಪರಿಮಿತಗಳು ಇರುತ್ತವೆ. ಆತಂಕಗಳು ಎದುರಾಗುತ್ತವೆ. ಜನಭಾಷೆಗಳು ಎಲ್ಲವನ್ನೂ ಎದುರಿಸುತ್ತ, ಅರಗಿಸಿಕೊಳ್ಳುತ್ತ ಉಳಿಯುತ್ತವೆ; ಅಷ್ಟೇ ಅಲ್ಲ ಬೆಳೆಯುತ್ತವೆ.

ಜನಭಾಷೆಗಳು ತಂತಾನೆ ಉಳಿದು ಬೆಳೆಯುತ್ತವೆಯೆ ? ಜನಗಳು ಬಳಕೆ ಮಾಡುತ್ತಿದ್ದರೆ, ಆಯಾ ಕಾಲದ ಅಗತ್ಯಗಳನ್ನು ಪೂರೈಸುವ ಪ್ರಕ್ರಿಯೆ ನಡೆಯುತ್ತಿದ್ದರೆ ಜನಭಾಷೆಗಳು ನಿಜವಾದ ಅರ್ಥದಲ್ಲಿ ಜನಗಳ ಭಾಷೆಯಾಗಿರುತ್ತದೆ. ಕನ್ನಡದ ವಿಷಯದಲ್ಲೂ ಇದು ನಿಜ. ಕಂಡವರಿಂದ ಕನ್ನಡ ಹಾಳಾಗುತ್ತಿದೆಯೆಂದು ಸದಾ ಶತ್ರು ಶೋಧದಲ್ಲಿ ತೊಡಗುವ ಹುಸಿ ಅಭಿಮಾನವೇ ಒಂದು ತೊಡಕು. ಯಾಕೆಂದರೆ ಹುಸಿ ಅಭಿಮಾನವು ಅಬ್ಬರದಲ್ಲಿ ಅರಿವನ್ನು ಹತ್ತಿಕ್ಕುತ್ತದೆ. ಆದ್ಯತೆಗಳನ್ನು ಪಲ್ಲಟಗೊಳಿಸುತ್ತದೆ. ನಿಜ, ಕೆಲವೊಮ್ಮೆ ಏರುದನಿಯಲ್ಲಿ ಮಾತನಾಡಬೇಕಾಗುತ್ತದೆ; ಎದುರಿಗಿರುವವರಿಗೆ ಕಿವಿ-ಕಣ್ಣುಗಳು ಮಂದವಾಗಿದ್ದರೆ ಅಬ್ಬರಿಸಬೇಕಾಗುತ್ತದೆ. ಆದರೆ ಅದು ಅರಿವನ್ನು ಅರಗಿಸಿಕೊಂಡ ಅಬ್ಬರವಾಗಬೇಕು. ಇಲ್ಲದಿದ್ದರೆ ಹೋರಾಟ ವಿಫಲವಾಗುತ್ತದೆ.

ಕನ್ನಡವನ್ನು ಉಳಿಸುವುದೆಂದರೆ ಉಪಯುಕ್ತಗೊಳಿಸುತ್ತಾ ಹೋಗುವ ಪ್ರಕಿಯೆಯೆಂದು ನಾವು ತಿಳಿಯಬೇಕಾಗಿದೆ. ಶಿಕ್ಷಣ, ಸಾಹಿತ್ಯ, ಸಮಾಜ, ಸರ್ಕಾರ - ಹೀಗೆ ಎಲ್ಲ ವಿಭಾಗಗಳಲ್ಲೂ ಕನ್ನಡವನ್ನು ಉಳಿಸಿ, ಉಪಯುಕ್ತಗೊಳಿಸುವ ನೀತಿ ನಿರೂಪಣೆ ಮತ್ತು ಅನುಷ್ಠಾನ ಅಗತ್ಯ. ಜನರು ಭಾಷೆಯೊಂದನ್ನು ಬಳಸುತ್ತ, ಸಾಹಿತ್ಯಗಳು ಬರೆಯುತ್ತ, ಸರ್ಕಾರವು ಶೈಕ್ಷಣಿಕ ಮತ್ತು ಆಡಳಿತಾತ್ಮಕ ನೆಲೆಯಲ್ಲಿ ಆದ್ಯತೆ ಕೊಡುತ್ತ, ಸಮಾಜವು ಸಾಧನವಾಗಿಸಿಕೊಳ್ಳುತ್ತ ಉಪಯುಕ್ತವಾಗಿಸಬೇಕು. ಹುಸಿ ಪ್ರತಿಷ್ಠೆಯ ಬದಲು ಪ್ರೀತಿಯ ಆಗರವಾಗಿರಬೇಕು.

ಕನ್ನಡದ ಉಪಯುಕ್ತತೆ ಮತ್ತು ವಿಕಾಸದ ಪ್ರಶ್ನೆ ಇಂದು ನೆನ್ನೆಯದಲ್ಲ. ಇದಕ್ಕೊಂದು ಅನುಭವ ಪರಂಪರೆಯಿದೆ. ಪಂಪ ಮಹಾಕವಿಯಿಂದ ಹಿಡಿದು ಇಂದಿನ ಹೋರಾಟಗಾರರು - ಚಿಂತಕರವರೆಗೆ ದೊಡ್ಡ ಇತಿಹಾಸವಿದೆ. ಸಂಸ್ಕೃತದ ಪೂಜ್ಯಸ್ಥಾನ ಮತ್ತು ದಟ್ಟ ಪ್ರಭಾವದ ಎದುರು ಕನ್ನಡವನ್ನು ಬದುಕಿನ ಭಾಷೆಯನ್ನಾಗಿ ಬೆಳೆಸಿದ ಜನರು ಮತ್ತು ಕವಿಗಳು ನಮಗೆ ಬೆಳಕಾಗಿದ್ದಾರೆ. ಸಂಸ್ಕೃತದ 'ಮಾರ್ಗ'ವನ್ನು ಮೀರಿ ಪಂಪಕವಿ ಬಳಸಿದ 'ದೇಸಿ'ಯು ಕನ್ನಡವನ್ನು ಉಸಿರಾಗಿಸುವ ಉಪಯುಕ್ತ ಸೃಜನಶೀಲಕ್ರಿಯೆಯಾಗಿತ್ತು. ಸಂಸ್ಕೃತವನ್ನು ನಿರಾಕರಿಸದೆ, ಆದರೆ ಅಧೀನವಾಗದೆ, ಮೀರಿ ಅದನ್ನು ಒಳಗೊಳ್ಳುತ್ತಲೇ ಮೀರುತ್ತ ಕನ್ನಡದ ದೇಸಿಯನ್ನು ಬಳಸಿದ ಪಂಪನ ಕನ್ನಡಾಭಿಮಾನ, ಚಾರಿತ್ರಿಕ ಮಹತ್ವ ಪಡೆದಿದೆ. 'ಸಂಸ್ಕೃತದಲ್ಲಿ ಬರೆಯುವವರು ಅದರಲ್ಲೇ ಬರೆಯಿರಿ, ಕನ್ನಡಕ್ಕೆ ಅದನ್ನು ಬೆರಸಬೇಡಿ. ಎಣ್ಣೆ ಮತ್ತು ತುಪ್ಪವನ್ನು ಬೆರಸುವುದು ತರವಲ್ಲ' ಎಂದು ನಯಸೇನ ಕವಿ ಪ್ರತಿಪಾದಿಸಿದ ಕನ್ನಡದ ಜನಪದೀಯ ಪರಿಭಾಷೆಗೆ ಪ್ರಾಮುಖ್ಯ ಕೊಟ್ಟ, ಮುಂದೆ ಆಂಡಯ್ಯಕವಿ ಸಂಸ್ಕೃತದ ಬಳಕೆಯನ್ನು ತಿರಸ್ಕರಿಸಿ. ಆ ಭಾಷೆಯ ಪದಗಳಿಗೆ ಕನ್ನಡದ ತದ್ಭವ ರೂಪಗಳನ್ನು ಬಳಸಿದ. ಕಾವ್ಯಕ್ಕೆ ಕಬ್ಬ, ಕಾರ್ಯಕ್ಕೆ ಕಜ್ಜ ಸುಖಕ್ಕೆ ಸೊಗ, ಮುಖಕ್ಕೆ ಮೊಗ ಹೀಗೆ ಕನ್ನಡ ತದ್ಭವಗಳು ಬಳಕೆಯಾದವು. ಕುಮಾರವ್ಯಾಸನ ಭಾಷೆಯಲ್ಲಿರುವ ಕನ್ನಡ ದೇಸಿತನ ಮೌಲಿಕವಾದುದು. ವಚನಕಾರರಂತೂ ಹೊಸ ಪರಿಭಾಷೆಯನ್ನೇ ಹುಟ್ಟುಹಾಕಿದರು. ಕನ್ನಡಕ್ಕೆ ಆಧುನಿಕತೆಯ ಶಕ್ತಿ - ಸಾಧ್ಯತೆಗಳನ್ನು ತುಂಬಿದರು. ಇನ್ನು ಬ್ರಿಟಿಷ್ ವಸಾಹತುಶಾಹಿಯ ಆಡಳಿತದಲ್ಲಿ ಅನೇಕ ಆಂಗ್ಲಪದಗಳನ್ನು ಕನ್ನಡ ಜನ ಸಾಮಾನ್ಯರು ತಮ್ಮದಾಗಿಸಿಕೊಂಡರು. ರೈಲು, ಬಸ್ಸು, ಸೈಕಲ್ಲು, ಕರೆಂಟು - ಮುಂತಾದ ಪದಗಳು ಕನ್ನಡ ಬಳಕೆಯ ಜಾಯಮಾನದಲ್ಲಿ ಒಂದಾಗಿಬಿಟ್ಟವು. ಉರ್ದು, ಮರಾಠಿ, ಪಾರ್ಸಿ ಮುಂತಾದ ಭಾಷೆಗಳ ಪದಗಳು ಕನ್ನಡದೊಳಗೆ ಸೇರಿ ಕನ್ನಡವೇ ಆದವು. ಕುರ್ಚಿ, ಮೇಜು, ಅಮಲ್ದಾರ, ಶಿರಸ್ತೇದಾರ, ಹುಕುಂ, ಜಮಾಬಂದಿ - ಇಂತಹ ಅನೇಕ ಪದಗಳನ್ನು ಉದಾಹರಿಸಬಹುದು. ಇದಕ್ಕೂ ಹಿಂದೆ ಸಂಸ್ಕೃತದ ಅನೇಕ ಪದಗಳು ಕನ್ನಡ ಭಾಷೆಯ ಭಾಗವಾಗಿದ್ದವು. ಮಹಾಪ್ರಾಣಾಕ್ಷರವುಳ್ಳ ಪದಗಳು ಮೂಲತಃ ಸಂಸ್ಕೃತಕ್ಕೆ ಸೇರಿದ ರೂಪಗಳೆಂಬುದನ್ನು ಗಮನಿಸಿದಾಗ, ನಾವು ಮಾತಾಡುವ ಕನ್ನಡದಲ್ಲಿ ಬೆರೆತುಹೋಗಿರುವ ಸಂಸ್ಕೃತ ಪದಗಳ ಸಮೂಹ ಅಚ್ಚರಿ ಹುಟ್ಟಿಸುತ್ತದೆ. ಆದರೆ, ಸಂಸ್ಕೃತ ಜನಬಳಕೆಯಿಂದ ದೂರ ಉಳಿಯಿತು.

ಕನ್ನಡ ಜನ ಬಳಕೆಯಲ್ಲಿ ಬೆಳೆಯುತ್ತ ಬಂತು. ಕನ್ನಡವು ಮಡಿವಂತಿಕೆಯನ್ನು ಮೀರಿದ ಭಾಷೆಯಾದ್ದರಿಂದ ಬೆಳೆಯಿತು. ಜೀವಂತ ಭಾಷೆಯಾಯಿತು. ಜಡಗೊಂಡ ಮೂಲಭೂತವಾದಿ ಮನಸ್ಸುಗಳಿಂದ ಭಾಷೆಯೊಂದು ಬೆಳೆಯುವುದಿಲ್ಲ; ಹುಸಿವೈಭವದಲ್ಲಿ ಮೆರೆಯುತ್ತದೆ; ಅಷ್ಟೆ. ಕನ್ನಡ ಜನಸಾಮಾನ್ಯರ ಮನಸ್ಸು ಮೂಲಭೂತವಾದಿಯಾಗಿರಲಿಲ್ಲವಾದ್ದರಿಂದ ಅನ್ಯಭಾಷೆಯ ಅಗತ್ಯ ರೂಪಗಳನ್ನು ಒಳಗೊಳ್ಳುತ್ತ ವಿಕಾಸಗೊಂಡಿತು. ಇದು ಜೀವಂತ ಭಾಷೆಯ ಸಹಜ ಗುಣಲಕ್ಷಣ.

ಅಂದಿನಿಂದ ಅಗತ್ಯಕ್ಕನುಗುಣವಾಗಿ ಭಾಷೆಯನ್ನು ಸಜ್ಜುಗೊಳಿಸುವಿಕೆ ಕೆಲಸ ನಡೆಯಬೇಕು. ಜನಗಳು ಕನ್ನಡವನ್ನು ದೈನಂದಿನ ವ್ಯವಹಾರದಲ್ಲಿ ಬಳಸುವುದು ಕನ್ನಡ ಪರ ಪರಿಸರ ನಿರ್ಮಾಣಮಾಡುವುದು ಒಂದು ಕೆಲಸವಾದರೆ, ಎಲ್ಲ ಕ್ಷೇತ್ರಗಳಲ್ಲೂ ಕನ್ನಡವನ್ನು ಸಮಕಾಲೀನ ಅಗತ್ಯಕ್ಕನುಗುಣವಾಗಿ ಸಜ್ಜುಗೊಳಿಸುವುದು ಇನ್ನೊಂದು ಬಹುಮುಖ್ಯ ಕೆಲಸ. ಇಂಥ ರಚನಾತ್ಮಕ ಕೆಲಸಗಳಿಂದ ಕನ್ನಡವನ್ನು ಉಪಯುಕ್ತವಾಗಿಸುತ್ತ ಹೋಗಬೇಕು.

ನನ್ನ ಈ ಮಾತುಗಳನ್ನು ಹೀಗೆ ಸ್ಪಷ್ಟಪಡಿಸಬಹುದು; ಈಗ ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕ ಜ್ಞಾನ ವಲಯದ ಎಷ್ಟು ಉಪಯುಕ್ತ ಪುಸ್ತಕಗಳು ಸಿಗುತ್ತವೆಯೆಂಬುದನ್ನು ಒಮ್ಮೆ ಗಮನಿಸಿ. ಬಿಡಿ ಪ್ರಯತ್ನಗಳು ನಡೆದಿವೆಯಾದರೂ ಇಡಿಯಾಗಿ ಯೋಜಿತ ಮಾರ್ಗದಲ್ಲಿ ಕನ್ನಡ ಭಾಷೆಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಮಾನವಿಕ ಜ್ಞಾನವನ್ನು ತರುವ ಕೆಲಸ ನಡೆದಿಲ್ಲ. ಪದವಿಪೂರ್ವ ತರಗತಿಯಿಂದಾಚೆಗೆ ವಿಜ್ಞಾನದ ಪಠ್ಯ ಪುಸ್ತಕಗಳು ಕನ್ನಡದಲ್ಲಿ ಇಲ್ಲ. ಮಾನವಿಕ ವಿಭಾಗದಲ್ಲಿ ಪದವಿ ತರಗತಿಗಳಿಗೂ ಕೆಲವು ಪಠ್ಯ ಪುಸ್ತಕಗಳು ಬಂದಿವೆ; ಪಠ್ಯ ಪುಸ್ತಕಗಳಿಗಷ್ಟೇ ಸೀಮಿತವಾಗದೆ, ಮಹತ್ವದ ಗ್ರಂಥಗಳು ಕನ್ನಡದಲ್ಲಿ ಸಿಗುವಂತಾಗಬೇಕು. ಎಲ್ಲ ಜ್ಞಾನ ಶಾಖೆಗಳ ಮಹತ್ವದ ಗ್ರಂಥಗಳ ಪಟ್ಟಿಯನ್ನು ಸಿದ್ಧಪಡಿಸಿ ಕನ್ನಡಕ್ಕೆ ತರುವ ಕೆಲಸವಾಗಬೇಕು. ಜೊತೆಗೆ ವಿವಿಧ ಜ್ಞಾನಶಾಖೆಗೆ ಸಂಬಂಧಿಸಿದಂತೆ ಕನ್ನಡದಲ್ಲೇ ಸ್ವತಂತ್ರ ಕೃತಿಗಳನ್ನೂ ರಚಿಸಬೇಕು. ಈ ಎಲ್ಲ ಕೆಲಸಗಳಿಗೆ ಸೂಕ್ತ ಭಾಷಾಯೋಜನೆಯನ್ನು ಸಿದ್ಧಗೊಳಿಸಬೇಕು.

ಮಾಹಿತಿ ತಂತ್ರಜ್ಞಾನವು ವ್ಯಾಪಕವಾಗತೊಡಗಿದಂತೆ ಕನ್ನಡಕ್ಕೆ ಹಿನ್ನಡೆಯಾಗಿದೆ. ಮಾಹಿತಿತಂತ್ರಜ್ಞಾನವನ್ನು 'ಜ್ಞಾನ'ದ ಬದಲು 'ಉದ್ಯಮ'ವಾಗಿ ಬೆಳೆಸತೊಡಗಿದ್ದು ಈ ಹಿನ್ನಡೆಗೆ ಒಂದು ಮುಖ್ಯ ಕಾರಣ. ಮಾಹಿತಿ ತಂತ್ರಜ್ಞಾನವು ಯಾವುದೇ ಭಾಷೆಗೆ ವಿರೋಧಿಯಾಗಬೇಕಾಗಿಲ್ಲ. ಆದರೆ ಮಾಹಿತಿ 'ತಂತ್ರಜ್ಞಾನ'ದ ಹೆಸರಿನಲ್ಲಿ ಮಾಹಿತಿ 'ತಂತ್ರೋದ್ಯಮ'ವನ್ನು ವಿಜೃಂಭಿಸಿದ ಸನ್ನಿವೇಶದಿಂದ ಕನ್ನಡದಂತಹ ದೇಶಭಾಷೆಗಳಿಗೆ ತಾತ್ಕಾಲಿಕ ಹಿನ್ನಡೆಯಾಗಿದೆ. ಈಗ ನಾವು ಮಾಡಲೇಬೇಕಾದ ಕೆಲಸವೆಂದರೆ ಮಾಹಿತಿ ತಂತ್ರಜ್ಞಾನಕ್ಕೆ ಕನ್ನಡ ಭಾಷೆಯನ್ನು ಸಜ್ಜುಗೊಳಿಸುವುದು. ಮಾಹಿತಿ ತಂತ್ರಜ್ಞಾನವನ್ನು ಕನ್ನಡಕ್ಕೆ ಉಪಯುಕ್ತವಾಗುವಂತೆ ಬಳಸಿಕೊಳ್ಳುವುದು. ಕರ್ನಾಟಕದ ಮೂಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ಉದ್ಯಮವಾಗಿ ವಿಶ್ವಖ್ಯಾತಿ ಪಡೆದ ಐ.ಟಿ. ಕಂಪನಿಗಳು ಕನ್ನಡಕ್ಕೆ ಮಾಡಿದ ಕೆಲಸ ಸೊನ್ನೆ, ಹೋಗಲಿ, ಸೊನ್ನೆ ಕೆಲಸಕ್ಕೂ ಸಂತೃಪ್ತರಾಗದೆ ಇಂಗ್ಲಿಷ್‌ಭಾಷೆಯಿಂದಲೇ ಸಕಲ ಸುಖ ಸಂಪತ್ತು - ಎಂಬ ಪ್ರಚಾರ ಮಾಡುತ್ತ ಕನ್ನಡವನ್ನು ಅನುಪಯುಕ್ತ ಭಾಷೆಯೆಂದು ಬಿಂಬಿಸುತ್ತ ಸಂಭ್ರಮಿಸುತ್ತಿವೆ. ಇಂಥ ವಿಷಮ ಸನ್ನಿವೇಶದ ನಡುವೆಯೂ ಚಿಕ್ಕಪುಟ್ಟ ಸಂಸ್ಥೆಗಳು, ಕೆಲವು ವ್ಯಕ್ತಿಗಳು ಕನ್ನಡವನ್ನು ಕಂಪ್ಯೂಟರ್‌ಗೆ ಸಜ್ಜುಗೊಳಿಸುವ ಕೆಲಸ ಮಾಡುತ್ತಿದ್ದಾರೆನ್ನುವುದು ಸಮಾಧಾನದ ಸಂಗತಿ.

ಸರ್ಕಾರದ ಪಾತ್ರ ಬಹುಮುಖ್ಯವಾದುದು. ಕನ್ನಡಕ್ಕೆ ಧಕ್ಕೆಯಾಗದಂತೆ ನೀತಿ ನಿರೂಪಣೆ ಮಾಡಿ, ಸಂಕಲ್ಪ ಶ್ರದ್ಧೆಯಿಂದ ಅನುಷ್ಠಾನಗೊಳಿಸುವ ಹೊಣೆ ಸರ್ಕಾರದ್ದಾಗಿದೆ. ಕಂಪ್ಯೂಟರ್ ತಂತ್ರಜ್ಞಾನವೆಂದರೆ ಇಂಗ್ಲೀಷಲ್ಲ, ತಂತ್ರಜ್ಞಾನಕ್ಕೆ ಭಾಷೆಯಿಲ್ಲ ಎಂಬ ವಿವೇಕ ಮೊದಲು ಸರ್ಕಾರಕ್ಕೆ ಅಂದರೆ ಅಧಿಕಾರಿಗಳು ಮತ್ತು ಮಂತ್ರಿ ಮಹೋದಯರುಗಳಿಗೆ ಇರಬೇಕು. ಯಾವುದಕ್ಕೆ ಇಂಗ್ಲೀಷು, ಯಾವುದಕ್ಕೆ ಕನ್ನಡ ಎಂಬ ಔಚಿತ್ಯವೂ ಅಗತ್ಯ. ಮಾಹಿತಿ ತಂತ್ರಜ್ಞಾನದ ಸಾಧ್ಯತೆಗಳನ್ನು ಕನ್ನಡದ ಮೂಲಕ ಸಾಕಾರಗೊಳಿಸುವ ಕ್ರಿಯಾಯೋಜನೆಯೊಂದನ್ನು - ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದಾಗ ಸಿದ್ಧಗೊಳಿಸಲಾಗಿತ್ತು. ಅಗತ್ಯವಿದ್ದರೆ ಅದನ್ನು ಮತ್ತಷ್ಟು

ವಿಸ್ತೃತಗೊಳಿಸಿ, ಸಮಕಾಲೀನಗೊಳಿಸಿ ಕಂಪ್ಯೂಟರ್ ಕ್ರಿಯಾ ಯೋಜನೆಗೆ ಶಕ್ತಿ ತುಂಬಬೇಕು. ಮತ್ತೆ ಚಾಲನೆ ನೀಡಬೇಕು. ಅಲ್ಲದೆ, ಶಿಕ್ಷಣ, ಆಡಳಿತ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವುದು ಅಗತ್ಯ. ಕನ್ನಡ ಅಥವಾ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ, ಕನ್ನಡೇತರ ಭಾಷಾ ಮಾಧ್ಯಮದ ಶಾಲೆಗಳಲ್ಲಿ ಕನ್ನಡದ ಕಲಿಕೆ (ಒಂದು ಪತ್ರ ವಿಷಯವಾಗಿ) ಕಡ್ಡಾಯ, ಶಿಕ್ಷಣದ ಯಾವುದೇ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಬರೆಯಲು ಅವಕಾಶ - ಕನ್ನಡ ಮಾಧ್ಯಮದಲ್ಲಿ ಬೋಧನೆ, ಆಡಳಿತದಲ್ಲಿ ಕನ್ನಡದ ಕಟ್ಟುನಿಟ್ಟಿನ ಅನುಷ್ಠಾನ, ಅನುಷ್ಠಾನಗೊಳಿಸದೆ ಇರುವ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಶಿಸ್ತುಕ್ರಮ, ಸರ್ಕಾರಿ ಮತ್ತು ಖಾಸಗಿವಲಯಗಳ ಯಾವುದೇ ಉದ್ಯೋಗಕ್ಕೆ ಕನ್ನಡ ಭಾಷಾಜ್ಞಾನ ಕಡ್ಡಾಯ - ಹೀಗೆ ಸರ್ಕಾರವು ಕನ್ನಡ ಕೇಂದ್ರಿತ ನೀತಿಯನ್ನು ರೂಪಿಸಿ ನೂರಕ್ಕೆ ನೂರು ಬದ್ಧವಾಗಿರಬೇಕು. ಕನ್ನಡಪರ ಚಿಂತಕರು ಮತ್ತು ಹೋರಾಟಗಾರರು ಈ ವಿಷಯಗಳನ್ನೇ ಅತ್ಯಂತ ಆದ್ಯತೆಯ ಅಂಶಗಳೆಂದು ಪರಿಗಣಿಸಬೇಕು.

ಕನ್ನಡದಿಂದ ಬದುಕಲು ಸಾಧ್ಯವೆಂಬ ಸನ್ನಿವೇಶ ನಿರ್ಮಾಣವಾಗಬೇಕಾದರೆ ಕನ್ನಡ ಕೇಂದ್ರಿತ ಶಿಕ್ಷಣ, ಕನ್ನಡ ಕೇಂದ್ರಿತ ಆಡಳಿತ ಮತ್ತು ಕನ್ನಡ ಕೇಂದ್ರಿತ ಉದ್ಯೋಗ ನೀತಿಗಳು ಬಹುಮುಖ್ಯ. ಹೀಗೆಂದ ಕೂಡಲೇ ಅನ್ಯ ಭಾಷೆಗಳ ಕಲಿಕೆಯೇ ಬೇಡವೆಂದು ತಿಳಿಯಬಾರದು; ಕನ್ನಡವನ್ನು ಬಲಿಕೊಡದೆ ಯಾವುದೇ ಭಾಷೆಯನ್ನಾದರೂ ಕಲಿಯಬಹುದು.

ಭಾಷೆ ಭಯೋತ್ಪಾದಕವಾಗಬಾರದು; ಅನ್ನೋತ್ಪಾದಕವಾಗಬೇಕು. ಕನ್ನಡವನ್ನು ಜನರ ಅನ್ನದ ಪ್ರಶ್ನೆಯಾಗಿ ಪರಿಗಣಿಸಬೇಕು.

ಇಂದು ಕನ್ನಡಕ್ಕೆ ಬೇಕಾದ್ದು ರೋಚಕತೆಯಲ್ಲ, ರಚನಾತ್ಮಕತೆ; ಬಹು ಮುಖಿ ಕ್ರಿಯಾಶೀಲತೆ.

❑

೮

ರಾಜಕಾರಣ ಮತ್ತು ತಾತ್ವಿಕ ಬದ್ಧತೆ

ವಿಜಯಾ ಸುಬ್ಬರಾಜ್

ಚುನಾವಣೆಯ ಈ ಋತುಮಾನದಲ್ಲಿ ತಾತ್ವಿಕ ಬದ್ಧತೆಯ ಬಗ್ಗೆ ಮಾತನಾಡುವುದು ಸೂಕ್ಷ್ಮಬುದ್ಧಿಯ ಯಾರಿಗೇ ಆದರೂ ಹಾಸ್ಯಾಸ್ಪದವಾಗಿ ತೋರಿದರೆ ಆಶ್ಚರ್ಯವಿಲ್ಲ. ಪ್ರಪಂಚದಲ್ಲಿ ವಿಭಿನ್ನ ವೃತ್ತಿ, ಪ್ರವೃತ್ತಿ, ಮನೋಧರ್ಮ ಇರುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದು ತಾತ್ವಿಕ ನಿಷ್ಠೆ ಮತ್ತು ಬದ್ಧತೆ ಇರುವುದು ಸಹಜ ಮತ್ತು ಸ್ವಾಭಾವಿಕ. ತಾತ್ವಿಕತೆ ಎನ್ನುವುದು ಕೆಟ್ಟದ್ದಕ್ಕೆ ಸಂಬಂಧಿಸಿರಬಹುದು ಅಥವಾ ಒಳ್ಳೆಯದಕ್ಕೆ ಸಂಬಂಧಿಸಿರಬಹುದು. ಆದರೆ ಬದ್ಧತೆಯಂತೂ ಇದ್ದೇ ಇರುತ್ತದೆ. ಕಳ್ಳತನ ಕೆಟ್ಟದ್ದಿರಬಹುದು. ಆದರೆ ಕಳ್ಳನಾದವನು ಇಂತಹವರನ್ನೇ ಕಳವು ಮಾಡಬೇಕೆಂದು ಒಂದು ನಿಯಮವನ್ನು ಹಾಕಿಕೊಂಡಿರುತ್ತಾನೆ. ಹಾಗಿರುವಾಗ ಅವನು ಕಳವುಮಾಡುವುದು ಕೆಟ್ಟದ್ದೆನಿಸುವುದಿಲ್ಲ. ಅದೇ ಪ್ರಾಮಾಣಿಕತೆಯ ಬಗ್ಗೆ ಮಾತನಾಡುವ, ಕಳಬೇಡ, ಕೊಲಬೇಡ, ಎಂದು ಹೇಳುವ ವ್ಯಕ್ತಿ ಕಳವು ಮಾಡಿದರೆ ಅಕ್ಷಮ್ಯ ಅಪರಾಧವಾಗುತ್ತದೆ.

ಇವತ್ತಿನ ಪರಿಸ್ಥಿತಿಯಲ್ಲಿ ರಾಜಕಾರಣವೆಂಬ ಪ್ರಬಲ ಚುಂಬಕದ ಸೆಳೆತಕ್ಕೆ ಸಿಕ್ಕು ಚಿನ್ನದಂತಹವರೂ ಕಬ್ಬಿಣವಾಗಿ ಪರಿವರ್ತನೆಗೊಂಡು ಈ ಸೆಳೆತಕ್ಕೆ ಒಳಗಾವಲು ಮುಂದಾಗುತ್ತಿದ್ದಾರೆ; ಮುಗಿ ಬೀಳುತ್ತಿದ್ದಾರೆ. ಬುದ್ಧಿಜೀವಿ ಸಾಹಿತಿಗಳು,ಕಲಾವಿದರು, ಉದ್ಯಮಿಗಳು ಎಲ್ಲರೂ ಇಷ್ಟೊಂದು ಸಂಖ್ಯೆಯಲ್ಲಿ ಅಧಿಕಾರಕ್ಕೆ ಪಾಸ್‌ಪೋರ್ಟ್ ಆಗಬಲ್ಲ ಚುನಾವಣಾ ಕಣಕ್ಕೆ ಇಳಿಯುತ್ತಿದ್ದಾರೆ. ಹಣ, ಅಂತಸ್ತು , ಅಧಿಕಾರ ಎಲ್ಲವನ್ನೂ ಏಕಕಾಲಕ್ಕೆ ಸಾಧ್ಯವಾಗಿಸಿಕೊಡಬಲ್ಲ ರಾಜಕಾರಣ ಯಾರಿಗೆ ತಾನೇ ಬೇಡ ! ಒಂದು ಕಾಲಕ್ಕೆ ಆದರ್ಶಪ್ರಾಯವಾದ ಮತ್ತು ನೈತಿಕತೆಯ ಸಾಕಾರವಾದ ಅಧ್ಯಾಪಕ ವೃತ್ತಿ ಎಲ್ಲ ಜನರಿಂದ ಪೂಜನೀಯ

ಆರಾಧನೀಯವಾಗಿತ್ತು. ಅಧ್ಯಾಪಕರು ಸತ್ಪ್ರಜೆಗಳನ್ನು ಮೌಲಿಕ ವ್ಯಕ್ತಿತ್ವವನ್ನು ರೂಪಿಸಬಲ್ಲ ಸಮರ್ಥರೂ ಗೌರವನೀಯರೂ ಆಗಿದ್ದರು. ಗುರುವನ್ನು ಬ್ರಹ್ಮ ವಿಷ್ಣು ಮಹೇಶ್ವರರೊಂದಿಗೆ ಸಮೀಕರಿಸಲಾಗುತ್ತಿತ್ತು. ಆದರೆ ಈಗ ಜಗತ್ತೇ ಸಂಕರಗೊಂಡಿರುವಾಗ, ಯಾವ ವೃತ್ತಿ , ಪ್ರವೃತ್ತಿಯವರನ್ನೂ ರಾಜಕಾರಣ ಬಿಟ್ಟಿಲ್ಲ . ಅದರ ಪ್ರಲೋಭನೆಗಳು ಎಷ್ಟು ಪ್ರಬಲವಾಗಿದೆಯೆಂದರೆ, ಎಲ್ಲ ಮಾನವೀಯ ಮೌಲ್ಯಗಳನ್ನು ಆದರ್ಶಗಳನ್ನು , ತಾತ್ವಿಕ ಬದ್ಧತೆಗಳನ್ನು ಸಮಾಧಿಗೊಳಿಸಿಯಾದರೂ ಕಣಕ್ಕಿಳಿದು ಗೆಲ್ಲಬೇಕೆಂಬ ಗುರಿಯೊಂದೇ ಹಾದಿ ಬೆಳಕಾಗಿದೆ.

ನಮ್ಮಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ , ಪ್ರಜಾಸಂಕ್ಷೇಮವೊಂದೇ ಪ್ರಮುಖ ಗುರಿಯಾಗಿರಬೇಕು. ಪ್ರಜಾಪ್ರಭುತ್ವದ ವ್ಯಾಖ್ಯಾನವಾದರೂ ಏನು ? ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ! ಆದರೆ ಇವತ್ತು ನಮ್ಮ ರಾಜಕೀಯ ನಾಯಕರ, ರಾಜಕಾರಣಿಗಳ (ಯಾವುದೇ ಪಕ್ಷಕ್ಕೆ ಸೇರಿರಲಿ) ಗುರಿ ಒಂದೇ ! ಅದೆಂದರೆ ಸಕ್ಷೇಮ ಸ್ವಚಿಂತೆ; ಸ್ವಜನ ಕ್ಷೇಮ; ಸ್ವಜನ ಚಿಂತೆ ! ನಮ್ಮ ಸಂವಿಧಾನ ಬಹಳ ಉದಾರ ನೀತಿಯನ್ನು ಒಳಗೊಂಡಿರುವಂತಹುದು. ಜಾತಿ, ಮತ, ಗುಣ, ವ್ಯಕ್ತಿತ್ವ , ಚಾರಿತ್ರ್ಯ ಎಂತಹದೇ ಆದರೂ ಅಧಿಕಾರಕ್ಕಾಗಿ ಸ್ಪರ್ಧಿಸಲು ಅರ್ಹನಾಗುತ್ತಾನೆ. ಎಷ್ಟೆಷ್ಟು ಬಲಿಷ್ಠನೋ ಅಷ್ಟಷ್ಟು ಅವನ ಗೆಲುವಿನ ಸಾಧ್ಯತೆಗಳು ಭರವಸೆದಾಯಕವಾಗಿರುತ್ತವೆ. ಹಣ ಬಲ, ಅಧಿಕಾರ ಬಲ, ರಾಜಕೀಯ ಬಲವಿದ್ದರೆ ಸಾಕು ಅವನ (ಸ್ಪರ್ಧಿಸುವ ವ್ಯಕ್ತಿ) ಮೇಲೆ ಎಷ್ಟೇ ಆರೋಪಗಳಿರಲಿ, ಎಷ್ಟೇ ಕೊಲೆಗಳನ್ನು ಮಾಡಿರಲಿ, ಎಷ್ಟೋ ಮಂದಿಗೆ ಮೋಸಮಾಡಿರಲಿ, ಕೈದಿಯಾಗಿ ಸೆರೆಮನೆಯಲ್ಲಿರಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಗೆದ್ದು ಬರಲು ಅವಕಾಶ ಕಲ್ಪಿಸುವಷ್ಟು ಉದಾರವಾಗಿದೆ ನಮ್ಮ ರಾಜನೀತಿ, ರಾಜಕೀಯ ಪರಿಸರ !

ನಮ್ಮ ಬುದ್ಧಿಜೀವಿ ಸಾಹಿತಿಗಳು, ಕಲಾವಿದರು ತಮ್ಮ ಪಾಡಿಗೆ ತಾವು ವಿಚಾರನಿಷ್ಠತೆ, ಮೌಲ್ಯನಿಷ್ಠತೆ, ಸಾಮಾಜಿಕ ಕಳಕಳಿಯೊಂದಿಗೆ, ಲೋಹಿಯಾವಾದ, ಸಮಾಜವಾದ, ಮಾರ್ಕ್ಸ್ ವಾದ ಇತ್ಯಾದಿ ಇತ್ಯಾದಿ ರಾಜಕೀಯ, ಸಾಮಾಜಿಕ ತಾತ್ವಿಕ ಚಿಂತನೆಗಳಲ್ಲಿ ತಪೋನಿರತರಾಗಿ, ಬುದ್ಧ ಸಾಹಿತ್ಯ, ಪ್ರಬುದ್ಧ ಸಾಹಿತ್ಯ, ಶ್ರೇಷ್ಠ ಸಾಹಿತ್ಯ ಅದೂ ಇದೂಂತ ಕೆಲದಶಕಗಳ ಹಿಂದಿನವರೆಗೆ, ಬದುಕುತ್ತಿದ್ದಂತಹವರೂ ಈಗ ಸಕ್ರಿಯವಾಗಿ ರಾಜಕೀಯ ರಂಗ ಪ್ರವೇಶಕ್ಕೆ ಹಾತೊರೆಯ ತೊಡಗಿದ್ದಾರೆ. ಹಳೆಯ ಮುಖವಾಡಗಳನ್ನು ಕಳಚಿ ಹೊಸಮುಖವಾಡಗಳಿಗೆ ಹೊಂದಿಸಿಕೊಳ್ಳತೊಡಗಿದ್ದಾರೆ. ಕೋಮು ಸೌಹಾರ್ದತೆ, ಬಹುಸಂಸ್ಕೃತಿ ಪರತೆ, ಧರ್ಮನಿರಪೇಕ್ಷತೆ ಇತ್ಯಾದಿ ಪರಿಕಲ್ಪನೆಗಳ ಬೆನ್ನೇರಿ ರಾಜಕಾರಣದಿಂದ ದೂರ ದೂರವೆನ್ನುತ್ತಲೇ ರಾಜಕೀಯ ಪಕ್ಷಗಳ ಬೆನ್ನು ಹಿಡಿದಿದ್ದಾರೆ. ದೊಡ್ಡ ದೊಡ್ಡ ಪ್ರಶಸ್ತಿ, ಪುರಸ್ಕೃತ ಸಾಹಿತಿ, ಕಲಾವಿದರೆಲ್ಲರೂ ಚುನಾವಣಾ ಕಣದಲ್ಲಿ ಹಿಂಡು ಹಿಂಡಾಗಿ ಬಂದು ಸೇರಿದ್ದಾರೆ. ಪ್ರಜಾಸೇವೆ, ಸಾಮಾಜಿಕ ಕಳಕಳಿ, ಪರೋಪಕಾರ, ರಾಷ್ಟ್ರಭಕ್ತಿ , ರಾಷ್ಟ್ರಕಲ್ಯಾಣ, ದೇಶೋದ್ಧಾರಗಳ ಅರ್ಥವನ್ನೂ ಸರಿಯಾಗಿ ಗ್ರಹಿಸದ ಮಂದಿ ಹಿಂಡು ಹಿಂಡಾಗಿ ಜನನಾಯಕರಾಗುವ, ರಾಜಕೀಯ ಮುತ್ಸದ್ಧಿಗಳಾಗುವ ಮಹತ್ವಾಕಾಂಕ್ಷೆಯ ಕುದುರೆಯೇರಿ ವೈಹಾಳಿಗೆ ಹೊರಬಿದ್ದಿದ್ದಾರೆ. ಇಂತಹವರು ಚುನಾವಣೆಯ ಸ್ಪರ್ಧೆಯಲ್ಲಿ ಗೆದ್ದೂ ಬರುತ್ತಾರೆ ! ಇದರಲ್ಲಿ ಆಶ್ಚರ್ಯವಿಲ್ಲ. ಎಲ್ಲಿಯವರೆಗೆ ನಮ್ಮಂತಹ ದಡ್ಡ ಪ್ರಜೆಗಳಿರುತ್ತಾರೆ, ಎಲ್ಲಿಯವರೆಗೆ ವ್ಯಕ್ತಿ, ವ್ಯಕ್ತಿತ್ವ , ಗುಣ, ಅವನಲ್ಲಿ ಪ್ರಜಾಸೇವೆಯ ಸಾಮರ್ಥ್ಯವಿದೆಯೇ ಎನ್ನುವ ಯಾವೊಂದನ್ನೂ ಗಮನಿಸದೆ, ಜಾಣ ಮಾತುಗಳಿಗೆ , ಕೇವಲ ಜನಪ್ರಿಯತೆಗೆ ಮೋಹಿತರಾಗುವವರು ಇರುತ್ತಾರೋ ಅಲ್ಲಿಯವರೆಗೆ ಈ ಬಣ್ಣದ, ಬೆಡಗಿನ ಕಲಾವಿದರಿಗೆ, ಸಾಹಿತಿಗಳಿಗೆ ಜಯ ಸಿಗುವುದರಲ್ಲಿ ಮೋಸವಿರುವುದಿಲ್ಲ . ಅನೇಕ ಮಂದಿ ಸಾಮಾಜಿಕ ಚಳುವಳಿಗಳ ಮುಂಚೂಣಿಯಲ್ಲಿದ್ದು, ಶೋಷಿತ ವರ್ಗಗಳ ಜಾತಿಗಳ ಪರವಾಗಿ ಹೋರಾಡಿ ಅವರಿಗೆ ನ್ಯಾಯ ಸಲ್ಲಿಸುವ ಪ್ರಯತ್ನದಲ್ಲಿ ಅದ್ಭುತ ಜಯಗಳಿಸಿದ್ದಂತೂ ಸುಳ್ಳಲ್ಲವಾದರೂ ನಂತರ ರಾಜಕೀಯ ಕ್ಷೇತ್ರ ಪ್ರವೇಶ ಸಾಧಿಸಿಕೊಂಡಮೇಲೆ ಅವರ ಹೋರಾಟ ಯಾವದಿಕ್ಕಿನತ್ತ ಸಾಗುತ್ತಿದೆ ಎಂಬುದನ್ನು ಅವರೇ ಅವರ ಆತ್ಮಸಾಕ್ಷಿಗೆ ಕೇಳಿಕೊಳ್ಳಲಿ. ಅವರ ಅಬ್ಬರದ ಘೋಷಣೆಗಳು, ಹೋರಾಟಗಳು ಎಲ್ಲವೂ ತಣ್ಣಗಾಗಿ ಬಿಡುತ್ತವೆ. ರಾಜಕೀಯ ನಾಯಕರು ಚಾಣಕ್ಯ ನೀತಿಯಿಂದ ಮುಂದಾಳುಗಳನ್ನು ಸೆಳೆದುಕೊಂಡು ಪದವಿಯ ಆಮಿಷಗಳಿಂದ ಬಾಯಿ ಮುಚ್ಚಿಸಿಬಿಡುತ್ತಾರೆ. ಮತ್ತೆ ಎಲ್ಲವೂ ರಾಜಕೀಯ ವ್ಯವಸ್ಥೆಯ ಅವಿಚ್ಛಿನ್ನ ಭಾಗವಾಗಿ, ರಾಜಕೀಯ

ಪ್ರವಾಹದೊಂದಿಗೆ ತಾವೂ ಸೇರಿ ಹೋಗಿ ವೈಯಕ್ತಿಕ ಸುಧಾರಣೆ, ಅಭಿವೃದ್ಧಿ ವಿಕಾಸಗಳತ್ತ ಗಮನ ಹರಿದು, ಹಿಂದೆ ಬಿಟ್ಟು ಬಂದಂತಹ ಯಾವುದೂ ನೆನಪಿನಲ್ಲಿ ಉಳಿಯದೆ ಹೋಗುತ್ತದೆ. ಎಲ್ಲವೂ ಸದ್ದಿಲ್ಲದೆ ಅಡಗಿ ಹೋಗುತ್ತದೆ.

ಬುದ್ಧಿವಂತ ಭಾಷಣಗಳಿಂದ, ವರ್ಚಸ್ವಿ ಸಾರ್ವಜನಿಕ ವ್ಯಕ್ತಿತ್ವದಿಂದ ಮುಗ್ಧ ಜನರನ್ನು ಬೇಸ್ತು ಬೀಳಿಸುತ್ತ, ಯುಟೋಪಿಯನ್ ಮಾದರಿಯ ಭರವಸೆಗಳನ್ನು ನೀಡುತ್ತ ತಾವು ಪ್ರತಿನಿಧಿಸುವ ಕ್ಷೇತ್ರಗಳಿಂದ ಆಯ್ಕೆ ಬಂದ ನಂತರ, ತಮ್ಮನ್ನು ಆರಿಸಿದ ಕ್ಷೇತ್ರ ಪ್ರಜೆಗಳಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿಯಾದರೂ ಒಮ್ಮೆಯೂ ಹಿಂತಿರುಗಿ ಹೋಗಿ ಹೆಜ್ಜೆ ಇಡದ ಮಂದಿ, ಇನ್ನು ಅವರ ಬದುಕು ಬವಣೆಗಳ ಪರಿಹಾರಕ್ಕೆ ಪ್ರಯತ್ನಿಸುವುದಾದರೂ ಹೇಗೆ? ಇಂತಹ ಪರಿಸ್ಥಿತಿಯಲ್ಲಿ ನೈತಿಕತೆ, ಬದ್ಧತೆಗಳು ಕ್ಲೀಷೆ ಎನಿಸುತ್ತವೆ; ಅವುಗಳ ಬಗ್ಗೆ ಮಾತನಾಡುವುದು ದುರಂತ ವ್ಯಂಗ್ಯವೆನಿಸುತ್ತವೆ.

ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಳ್ಳುವಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಗೂ, ನಡೆಮುಂದೆ ನಡೆಮುಂದೆ, ನುಗ್ಗಿ ನಡೆ ಮುಂದೆ ಎನ್ನುವ ಪ್ರಚೋದನಕಾರಿ, ಉತ್ತೇಜನಕಾರಿ ಮಾತುಗಳು ಬೆಂಬಲಕಾರಿಯಾಗಿದ್ದವು ಮತ್ತು ಅವು ಅನಿವಾರ್ಯವೂ ಆಗಿದ್ದವು. ಆದರೆ ಈಗ ಈ ಮಾತುಗಳು ಸ್ಪರ್ಧಿಸುವ, ಹೇಗಾದರೂ ಮಾಡಿ ಗೆಲ್ಲುವ, ಮುಂಬರುವ ವ್ಯಕ್ತಿಗೆ ತನ್ನೊಳಗಿನ ಮಾತುಗಳಾಗಿವೆ. ಮೋಸವೋ, ವಂಚನೆಯೋ, ಕೊಲೆಯೋ, ಮಸಿ ಬಳಿಯುವುದೋ, ಯಾವುದಾದರೇನಂತೆ, ಮುಂದೆ ನಡೆಯಬೇಕು; ನುಗ್ಗಿ ನಡೆಯಬೇಕು. ಅಷ್ಟೇ ! ಇದೇ ಇವತ್ತಿನ ಮಹತ್ವಾಕಾಂಕ್ಷೆಯ ಜನನಾಯಕರ ಬೀಜಮಂತ್ರ.

ಅವಕಾಶಗಳಿಗಿಂತಲೂ ಇವತ್ತಿನ ರಾಜಕೀಯ ಹವಾಮಾನ ಬಹಳ ಅನುಕೂಲಕರವಾಗಿದೆ; ಸುವರ್ಣಾವಕಾಶದಂತಿದೆ. ತಮ್ಮ ಬೇಳೆ ಬೇಯಿಸಿಕೊಳ್ಳಲು ಅತ್ಯಂತ ಆಪ್ತವಾದ ತಾಪಮಾನವಾಗಿದೆ. ಪಕ್ಷ, ಪಕ್ಷಾಂತರಗಳ ಭರಭರಾಟೆಯ ಸಂದರ್ಭದಲ್ಲಿ ಗೆಲ್ಲುವ ಕುದುರೆಗಳ ಬೆನ್ನು ಹಿಡಿಯುವ ಪ್ರವೃತ್ತಿ ಒಡೆದದ್ದು ಕಾಣುತ್ತಿದೆ. ನಿಜವಾದ ಸೇವಾ ಮನೋಭಾವ, ದೇಶ, ಸಮಾಜ ಉದ್ಧಾರಮಾಡಬೇಕೆಂಬ ತುಡಿತದ ವ್ಯಕ್ತಿಗಳನ್ನು ಗುರುತಿಸಿ ಕಣಕ್ಕಿಳಿಸುವುದಕ್ಕೆ ನಮ್ಮ ದೇಶದ ಪಕ್ಷ ನಾಯಕರಿಗೆ ತಾಳ್ಮೆಯಾಗಲೀ ಬಿಡುವಾಗಲೀ, ಮನೋಧರ್ಮವಾಗಲೀ ಎಲ್ಲಿದೆ ? ವ್ಯಕ್ತಿಗಳಿಗಿಂತ ಪಕ್ಷವನ್ನು ಗೆಲ್ಲಿಸುವ, ಬಲಿಷ್ಠಗೊಳಿಸುವ ಹುನ್ನಾರದಲ್ಲಿ ಕಣಕ್ಕಿಳಿಯುವ ವ್ಯಕ್ತಿಯ ವ್ಯಕ್ತಿತ್ವಕ್ಕಿಂತ ಜನಪ್ರಿಯತೆ ಮತ್ತು ಖಂಡ ಬಲ, ಹಣಬಲಗಳೇ ಪ್ರಮುಖ ಮಾನದಂಡಗಳಾಗಿವೆ. ಪಕ್ಷಗಳು ಅನುಸರಿಸುತ್ತಿರುವ ಪ್ರಚಾರಸಾಧನಗಳು, ತೇಜೋವಧೆ ಮತ್ತು ಹುಸಿಭರವಸೆಗಳು ಮತ್ತು ಹಣ, ಹೆಂಡ, ಇತ್ಯಾದಿಗಳು !

ಯಾವ ಪಕ್ಷವೇ ಆದರೂ ರಾಜಕೀಯ ಪಕ್ಷಗಳು, ರಾಜಕೀಯ ಪಕ್ಷಗಳೇ ! ಯಾವುದೂ ಸಾಚಾ ಆಗಿ ಇರಲು, ಮುಂದುವರೆಯಲು ಸಾಧ್ಯವೇ ಇಲ್ಲ. ಒಂದು ಪಕ್ಷದ ದೌರ್ಬಲ್ಯ, ಹುಳುಕುಗಳು ಮತ್ತೊಂದು ವಿರೋಧಿಪಕ್ಷದ ಬಲ, ಬಂಡವಾಳ ಆಗಬಲ್ಲವು. ಅದೂ ಪ್ರಚಾರ ಸಂದರ್ಭದಲ್ಲಿ ಮಾತ್ರ ! ಯಾವ ಪಕ್ಷ ಅಧಿಕಾರಕ್ಕೆ ಬಂದರೂ ನೀತಿ, ನಿಷ್ಠೆ ತಾತ್ವಿಕತೆಗಳಿಗೆ ಬದ್ಧವಾಗಿ ಬದುಕುಳಿಯಲು, ಮುಂದುವರೆಯಲು ಸಾಧ್ಯವಿಲ್ಲ. ಡಾರ್ವಿನ್ನ ವಿಕಾಸವಾದದ ಸಿದ್ಧಾಂತಗಳಾದ Survival of the fittest and struggle for existence , ಅಂದರೆ ಬದುಕುಳಿದವನೇ ಬಲಿಷ್ಠ ಮತ್ತು ಅಸ್ತಿತ್ವಕ್ಕಾಗಿ ಹೋರಾಟ ಎನ್ನುವ ನೀತಿಗಳಿಗೆ ಬದ್ಧವಾಗಿ ಉಳಿಯುವುದು ಅನಿವಾರ್ಯವಾಗುತ್ತದೆ. ಹಾಗಾಗಿ ನೈತಿಕತೆ, ತಾತ್ವಿಕತೆ, ಬದ್ಧತೆ, ಪಕ್ಷಾದರ್ಶ ಇತ್ಯಾದಿಗಳ ಬಗ್ಗೆ ಮಾತನಾಡುವುದು, ಯಾರೇ ಆಗಲೀ, ಹಾಸ್ಯಾಸ್ಪದವೆನಿಸುತ್ತಿದೆ. ಅದರಲ್ಲಿಯೂ ಸಾಹಿತಿ ಕಲಾವಿದರು ಯಾವುದೇ ಪಕ್ಷದ ವತಿಯಿಂದ ಮಾತನಾಡಿದರೂ ಮತ್ತಷ್ಟು ಹಾಸ್ಯಾಸ್ಪದವಾಗುತ್ತದೆ. ರಾಜಕೀಯ ಆಕಾಂಕ್ಷೆಗಳನ್ನು ಎದೆತುಂಬಿಕೊಂಡು, ಶುದ್ಧ ರಾಜಕಾರಣ, ಪಕ್ಷಾದರ್ಶ, ಪಕ್ಷ ನೀತಿ ಸಂಹಿತೆಯ ಪರ ವಿರೋಧ ಮಾತನಾಡುವ ಸಾಹಿತಿಗಳನ್ನು ಕಂಡರೆ ವಿಷಾದನೀಯವೆನಿಸುತ್ತಿದೆ.

ಸಾಹಿತ್ಯ, ಸಂಸ್ಕೃತಿಪರ ನಿಜವಾದ ಕಾಳಜಿಯುಳ್ಳವರು ಅವುಗಳ ಬಗ್ಗೆ ಮಾತನಾಡಲು ಚುನಾವಣಾ ಸಂದರ್ಭಗಳನ್ನು, ವೇದಿಕೆಗಳನ್ನು ಬಳಸಿಕೊಳ್ಳಬಾರದು. ಅವರ ವ್ಯಕ್ತಿತ್ವದ ಭಾಗವಾಗಿ ಬರುವ ಕಾಳಜಿ ಯಾವ್ಯಾವ

ಒಂದು ನಿರ್ದಿಷ್ಟ ಸಂದರ್ಭದಲ್ಲಿ ಮಾತ್ರ ಒಡೆದೆದ್ದು ಕಾಣುವಂತಾಗದೆ, ನಿರಂತರ ಹೋರಾಟವಾಗಿ, ಅವರ ಬದುಕಿನ ಉಸಿರಾಗಿ ಕಾಣಿಸಿಕೊಳ್ಳುತ್ತಾ ಬಂದಿರಬೇಕು. ಅದು ಬಿಟ್ಟು ಈ ಸಂದರ್ಭದಲ್ಲಿ ಸಾಂಸ್ಕೃತಿಕ ರಾಯಭಾರಿಗಳಂತೆ, ಕೋಮು ಸೌಹಾರ್ದತೆಯ ಮೂರ್ತರೂಪಗಳಂತೆ ಕಾಣಿಸಿಕೊಳ್ಳುತ್ತಿರುವುದು, ಅವರ ವ್ಯಕ್ತಿತ್ವ ವೈಚಾರಿಕ ನಿಲುವುಗಳು, ಸಾಹಿತ್ಯ ಸಾಧನೆಗಳ ಬಗ್ಗೆ ಅಪಾರವಾದ ಪ್ರೀತಿ, ಗೌರವವಿರಿಸಿಕೊಂಡಿರುವ, ಹೆಮ್ಮೆ ಪಡುತ್ತಿರುವ ಅಭಿಮಾನಿಗಳಿಗೆ, ಸಹೃದಯರಿಗೆ ಸ್ವಲ್ಪ ಹಿಂಸೆಯ ವಿಷಯವಾಗಿದೆ. ಈ ಸಂದರ್ಭದಲ್ಲಿ ಚಿತ್ರ ಸಾಹಿತಿ ಶಿವಶಂಕರ್ ಅವರ ಅಭಿಪ್ರಾಯದ ''ಸಾಹಿತಿ ಕಲಾವಿದರೆಂದರೆ ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸುವವರು. ಅನಂತಮೂರ್ತಿ ಮತ್ತು ಅವರ ಬಳಗ ತಮ್ಮ ವೈಯಕ್ತಿಕ ನೆಲೆಯಲ್ಲಿ ಏನಾದರೂ ಮಾಡಲಿ, ಆದರೆ ಹೀಗೆ ಸಾಹಿತಿ ಕಲಾವಿದರನ್ನು ಪ್ರತಿನಿಧಿಸುವ ಹಾಗೆ ವರ್ತಿಸಬಾರದು' – ಎಂಬ ಮಾತುಗಳನ್ನು ಪುರಸ್ಕರಿಸುವುದು ಅನಿವಾರ್ಯವಾಗುತ್ತದೆ. ಅವರಷ್ಟು ಮಂದಿಯ ಅಭಿಪ್ರಾಯಗಳು ಎಲ್ಲರದೂ ಆಗಲು ಸಾಧ್ಯವಿಲ್ಲ. ಕೋಮು ಸೌಹಾರ್ದ, ಬಹುಸಂಸ್ಕೃತಿಯನ್ನು ವಿರೋಧಿಸುವ ಬಿಜೆಪಿಗೆ ನಾವು ಮತ ನೀಡದೆ, ಉಳಿದ ಪಕ್ಷಗಳಿಗೆ ಮತ ನೀಡಿದ ಮಾತ್ರಕ್ಕೆ ಪರಿಸ್ಥಿತಿಯಲ್ಲಿ ಯಾವುದೇ ಸುಧಾರಣೆ ಸಾಧ್ಯವಿಲ್ಲ. ಪ್ರತಿಯೊಂದು ಪಕ್ಷದಲ್ಲಿಯೂ ಯಾವುದೋ ಒಂದು ರೀತಿಯ ಹುಳುಕುಗಳು ದೌರ್ಬಲ್ಯಗಳು ಇದ್ದೇ ಇರುತ್ತವೆ. ರಾಜಕೀಯ ಪಕ್ಷಗಳನ್ನು ರಾಜಕಾರಣಿಗಳಿಗೆ ಬಿಟ್ಟು ನಿಜವಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಳಕಳಿ ಇರುವವರು ತಮ್ಮದೇ ರೀತಿಯ ಸಂಘಟನೆಯೊಂದನ್ನು ರೂಪಿಸಿಕೊಂಡು, ತಾತ್ವಿಕತೆ ಮತ್ತು ನೈತಿಕತೆಗೆ ಬದ್ಧವಾಗಿ ನಮ್ಮ ರಾಷ್ಟ್ರವನ್ನು ಮತ್ತೊಮ್ಮೆ ಸಾಂಸ್ಕೃತಿಕ ವೈಭವದತ್ತ ಕೊಂಡೊಯ್ಯಲಿ.

ರಾಜಕಾರಣ ಮತ್ತು ನೈತಿಕತೆಗಳೆರಡೂ ಬದ್ಧಶತ್ರುಗಳು. ಅವು ಒಂದೆಡೆ ಇರಲಾರವು. ರಾಜಕೀಯದಲ್ಲಿದ್ದು ಮುಂದುವರೆಯಬೇಕೆಂದರೆ ನೈತಿಕತೆಯೊಂದಿಗೆ ರಾಜಿ ಮಾಡಿಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ನಮ್ಮ ಮುಂಚೂಣಿಯಲ್ಲಿರುವ ಸಾಹಿತಿ, ಕಲಾವಿದರು ರಾಜಕೀಯ ರಂಗದಿಂದ ದೂರವಿರಬೇಕೆಂಬುದು ಎಲ್ಲ ಪ್ರಜ್ಞಾವಂತರ ಮನದಾಳದ ಆಸೆಯಾಗಿದೆ.

೬

ರಾಜಕೀಯ ಮತ್ತು ಮಹಿಳೆ

ಟಿ. ಪದ್ಮ

ಭೂಮಿಗೆ ಕಾಲಿಟ್ಟ ಮಗು ಉಚ್ಚರಿಸುವ ಮೊದಲ ಶಬ್ದ 'ಅಮ್ಮ'. ದೇಹಕ್ಕೆ ನೋವಾದಾಗ, ರಕ್ತಸುರಿದಾಗ, ದುಃಖವಾದಾಗ, ನಮ್ಮ ಅರಿವಿಲ್ಲದೇ, ನಮ್ಮ ಬಾಯಿಂದ 'ಅಮ್ಮ' ಬಂದುಬಿಡುತ್ತಾಳೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ .... ಇಲ್ಲಿ ಮಾತೆಯೇ ಮೊದಲು. ಇವೆಲ್ಲಾ ಸ್ತ್ರೀ - ಪುರುಷನಿಗಿಂತಲೂ ಎತ್ತರವಾದ ಸ್ಥಾನವನ್ನು ಹೊಂದಿರುವುದನ್ನು ವ್ಯಕ್ತಪಡಿಸುತ್ತದೆ. ಆದರೆ ಅದೇಕೋ ಪ್ರಸ್ತುತ ಪ್ರಪಂಚದಲ್ಲಿ ಇನ್ನೂ ಮಹಿಳೆಗೆ ಸರಿಯಾದ ಸ್ಥಾನ-ಮಾನವಿಲ್ಲ. ಒಂದಲ್ಲ ಒಂದು ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ಇವುಗಳ ನಡುವೆಯೇ ತನ್ನ ಸ್ಥಾನವನ್ನು ಗಟ್ಟಿಯಾಗಿಸಲು ಪ್ರಯತ್ನಿಸುತ್ತಿದ್ದಾಳೆ.

ಬೆಳಗಾಗಿ ಎದ್ದು , ಅಂಗಳ ಗುಡಿಸಿ, ಸಾರಿಸಿ, ರಂಗವಲ್ಲಿ ಹಾಕಿ , ಅಡುಗೆ ಸಿದ್ಧಪಡಿಸುವುದೇ ಅವಳ ಪ್ರಮುಖ ಕೆಲಸ. ಹೀಗಿರುವಾಗ, ಮನೆ ಬಿಟ್ಟು ಆಕೆ ಹೊರಗೆಲ್ಲೂ ಹೋಗಬಾರದು. ಯಾವುದೇ ಗಂಡಸಿನೊಡನೆ ಸಲಿಗೆಯಿಂದ ಮಾತನಾಡಬಾರದು, ಇತ್ಯಾದಿ ಪುರುಷ ನಿರ್ಬಂಧಗಳ ನಡುವೆಯೂ ಮಹಿಳೆಗೆ ನಮ್ಮ ರಾಜ್ಯವು ಕಾನೂನಿನ ಮೂಲಕ ಅವಳಿಗೆ ಕೆಲವೊಂದು ಸವಲತ್ತುಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸಿದೆ. ಅವಳಲ್ಲೂ ರಾಷ್ಟ್ರ ಪ್ರೇಮವನ್ನು ಮೂಡಿಸಿದೆ. ಪ್ರಜಾಪ್ರಭುತ್ವದ ಆಧಾರಸ್ತಂಭವಾದ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳನ್ನು ನಿಜ ಮಾಡಲು ಎಲ್ಲಾ ರಾಷ್ಟ್ರಗಳೂ ಪ್ರಯತ್ನಿಸುತ್ತಿರುವ ನಿಟ್ಟಿನಲ್ಲಿ ಭಾರತವೂ ಒಂದು. ಇದನ್ನೇ ಆಧರಿಸಿ, ನಾವು ನಮ್ಮ ಸಂವಿಧಾನವನ್ನು ರಚಿಸಿಕೊಂಡಿದ್ದೇವೆ. 'ಸಂವಿಧಾನದ' ಮೂರನೇ ಅಧ್ಯಾಯದಲ್ಲಿನ ಮೂಲಭೂತ ಹಕ್ಕುಗಳಲ್ಲಿ

ಅದರಲ್ಲೂ 'ಸಂವಿಧಾನದ ಆತ್ಮ' ಎಂದೇ ಕರೆಯಲ್ಪಡುವ ೧೪ನೇ ವಿಧಿಯು 'ಸಮಾನತೆಯ ಹಕ್ಕಿನ'ಬಗ್ಗೆ ವಿವರಿಸುತ್ತದೆ. ಇದು ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ಪೋಷಕಾಂಶವಾಗಿದೆ. ಅಷ್ಟೇ ಅಲ್ಲದೆ, ನಮ್ಮ ಮೂಲಭೂತ ಕರ್ತವ್ಯಗಳಲ್ಲಿ ಒಂದಾದ ''ಮಹಿಳೆಯನ್ನು ಗೌರವಿಸಬೇಕು'' - ಎಂಬುದಂತೂ ಮಹಿಳೆಯರಿಗೊಂದು ಸರ್ಕಾರಕೊಟ್ಟ 'ವರ'ವಾಗಿದೆ.

ಹಿಂದಿನಿಂದಲೂ ಶೋಷಣೆಗೆ ಒಳಪಟ್ಟ ಮಹಿಳೆಗೆ ಸ್ವಲ್ಪವಾದರೂ ಮಾನಸಿಕ ನೆಮ್ಮದಿ ಹಾಗೂ ಹರುಷಸಿಗಲೆಂದು ತನ್ನ ಸ್ಥಾನವನ್ನು ವೃದ್ಧಿಪಡಿಸಿಕೊಳ್ಳಲೆಂದು, ಅವಳನ್ನು ಮೇಲೆತ್ತುವ ಪ್ರಯತ್ನವನ್ನು ಸರ್ಕಾರ ಮಾಡುತ್ತಲೇ ಇದೆ. ಅದೂ ಸರ್ವರ ಒಪ್ಪಿಗೆಯ ಮೇರೆಗೆ. ಎಲ್ಲಾ ಕ್ಷೇತ್ರಗಳಲ್ಲೂ ರಿಯಾಯಿತಿಗಳನ್ನು ಕೊಟ್ಟಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲೂ ಮೂರನೆಯ ಒಂದು ಪಾಲನ್ನು ಮಹಿಳೆಯರಿಗೆ ಮೀಸಲಿಡುವ ಪ್ರಯತ್ನದಲ್ಲಿದೆ. ಜೆ.ಎಸ್.ಮಿಲ್‌ರವರು ತಮ್ಮ 'ಉದಾರವಾದ'ದಲ್ಲಿ ಸ್ತ್ರೀಯ ಬಗ್ಗೆ ಚಿಂತನೆ ಮಾಡಿದ್ದಾರೆ. ೧೮೫೬-೧೮೬೮ರವರೆಗೂ ಇಂಗ್ಲೆಂಡ್ ಪಾರ್ಲಿಮೆಂಟಿನ ಪರಿವರ್ತನೆಯ ಪ್ರತಿಪಾದಕರಾಗಿದ್ದ ಮಿಲ್, ಲಿಂಗಭೇದವಿಲ್ಲದೇ, 'ಸ್ತ್ರೀ - ಪುರುಷರ ನಡುವೆ ಭೇದವೆಣಿಸುವ ಅನಿವಾರ್ಯವೇನಿಲ್ಲ' ಎಂದು ಸ್ತ್ರೀ ಮತದಾನದ ಪರವಾಗಿ, ಸ್ತ್ರೀಯರ ರಾಜಕೀಯ ಹಾಗೂ ಇತರ ಹಕ್ಕುಗಳ ಪರವಾಗಿ ಹೋರಾಟ ಮಾಡಿದ್ದರು.

ಕೇಂದ್ರ ಸರ್ಕಾರದ ಪಾರ್ಲಿಮೆಂಟಿನ ಉಭಯ ಸದನಗಳಾದ ಕೆಳಸದನವನ್ನು ಲೋಕಸಭೆ ಎಂತಲೂ ಮೇಲ್ ಸದನವನ್ನು ರಾಜ್ಯ ಸಭೆ ಎಂತಲೂ ಪರಿಗಣಿಸಲಾಗಿದೆ. ರಾಜ್ಯಸಭೆಗಿಂತಲೂ ಲೋಕಸಭೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಕಾರಣ, ಲೋಕಸಭೆಯ ಸದಸ್ಯರು ಪ್ರಜೆಗಳಿಂದ ನೇರವಾಗಿ ಚುನಾವಣೆಯಲ್ಲಿ ಆರಿಸಿಬಂದಿರುತ್ತಾರೆ. ಲೋಕಸಭೆಗೆ ಇರಬೇಕಾದ ಅರ್ಹತೆಗಳನ್ನು ನಮ್ಮ ಸಂವಿಧಾನದ ೮೪ನೇ ವಿಧಿಯಲ್ಲಿ ಈ ಕೆಳಕಂಡಂತೆ ನಮೂದಿಸಲಾಗಿದೆ. (೧) ಭಾರತೀಯ ಪ್ರಜೆಯಾಗಿರಬೇಕು (೨) ೨೫ ವರ್ಷ ವಯಸ್ಸಾಗಿರಬೇಕು. (೩) ಹುಚ್ಚನಾಗಿರಬಾರದು (೪) ಸರ್ಕಾರಿ ಸೇವೆಯಲ್ಲಿರಬಾರದು (೫) ದಿವಾಳಿಯಾಗಿರಬಾರದು. ಲೋಕಸಭೆಯ ಕಾಲಾವಧಿ ಐದು ವರ್ಷವಾಗಿದ್ದು ಮರು ಚುನಾವಣೆಯಲ್ಲಿ ಅದೇ ಸದಸ್ಯರು ಸ್ಪರ್ಧಿಸುವ ಅವಕಾಶವನ್ನು ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿದೆ.

ಹಾಗೆಯೇ ರಾಜ್ಯಸಭೆಗೂ ತನ್ನದೇ ಆದ ರಚನೆ ಇದೆ. ಇಲ್ಲಿಯ ಅರ್ಹತೆಗಳೆಂದರೆ (೧) ಭಾರತೀಯ ಪೌರನಾಗಿರಬೇಕು. (೨) ೩೦ ವರ್ಷ ವಯಸ್ಸಾಗಿರಬೇಕು. (೩) ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರಬೇಕು. (೪) ಸರ್ಕಾರಿ ಸೇವೆಯಲ್ಲಿರಬಾರದು. (೫) ಹುಚ್ಚನಾಗಿರಬಾರದು (೬) ದಿವಾಳಿಯಾಗಿರಬಾರದು. ನಮ್ಮ ಸಂವಿಧಾನದ ೧೭೩ನೇ ವಿಧಿಯಲ್ಲಿ ರಾಜ್ಯದ ವಿಧಾನಸಭೆಯ ಅರ್ಹತೆಯನ್ನೂ ಮೇಲಿನಂತೆಯೇ ವಿವರಿಸಲಾಗಿದೆ. ಈ ಅರ್ಹತೆಗಳಿದ್ದರೆ ಸಾಕು, ಸ್ತ್ರೀಯೂ ರಾಜಕೀಯದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಸ್ತ್ರೀಯೂ ಪುರುಷನಷ್ಟೆ ಸಮನಾಗಿ ರಾಜಕೀಯ ರಂಗದಲ್ಲಿ ಪಾಲ್ಗೊಳ್ಳಲು ಸಮಾನವಾದ ಅವಕಾಶಗಳನ್ನು ಹೊಂದಿದ್ದಾಳೆ.

ಸರ್ಕಾರದಿಂದ ಸಿಗುವ ಸವಲತ್ತು - ಸೌಲಭ್ಯಗಳನ್ನು ನಾವೇಕೆ ಬಳಸಿಕೊಳ್ಳಬಾರದು ? ಎಂಬ ಚಿಂತನೆ ಪ್ರತಿಯೊಬ್ಬ ಹೆಣ್ಣಿನಲ್ಲೂ ಸಹಜವಾಗಿಯೇ ಇದೆ. ಅಡುಗೆ ಮನೆಗಷ್ಟೇ ಸೀಮಿತವಲ್ಲ ಹೆಣ್ಣು, ಅವಳಲ್ಲೂ ಸಾಧನೆ-ಸಾಹಸಗಳಿವೆ ಎಂಬ ಅಂಶ ಹಿಂದಿನಿಂದಲೂ ಇದೆ.

ಕೆಟ್‌ಮಿಲೆಟ್ - ಒಬ್ಬ ಪಾಶ್ಚಾತ್ಯ ಸ್ತ್ರೀವಾದಿ ಲೇಖಕಿ. ಇವರು ತಮ್ಮ ತಮ್ಮ ಅಧ್ಯಯನದಲ್ಲಿ ಹೀಗೆ ಹೇಳಿದ್ದಾರೆ. ''ಪ್ರತಿಯೊಬ್ಬ ಹೆಂಗಸಿಗೂ ಗಂಡಸಿನ ಕೆಲವು ಗುಣಗಳಿರುತ್ತವೆ. ಹಾಗೆಯೇ ಪ್ರತಿಯೊಬ್ಬ ಪುರುಷನಿಗೂ ಹಲವು ಹೆಂಗಸಿನ ಗುಣಗಳಿರುತ್ತವೆ''. ಇದು ಪ್ರಕೃತಿಯ ನಿಯಮವೂ ಹೌದು. ಇದನ್ನು ಸಮಾಜಶಾಸ್ತ್ರ ಹಾಗೂ ಮನಃಶಾಸ್ತ್ರಗಳೆರಡೂ ಒಪ್ಪುತ್ತದೆ. ಆದರೆ ಸಾಂಪ್ರದಾಯಿಕ ಸಮಾಜ ಇದನ್ನು ಒಪ್ಪುವುದಿಲ್ಲವಷ್ಟೇ. ಕಸಗುಡಿಸುವುದು, ಮುಸುರೆ ತೊಳೆಯುವ ಕೆಲಸವನ್ನು ಗಂಡು ನಿರ್ವಹಿಸಿದರೆ, ಅವನನ್ನು 'ಹೆಣ್ಣಿಗ' ಎಂದು ವ್ಯಂಗ್ಯಮಾಡುವುದು; ಹಾಗೆಯೇ ಮಹಿಳೆ ಭಾಷಣ ಮಾಡುವುದು, ಸಭೆಗಳಿಗೆ ಹೋಗುವುದು,

ಉದ್ಯೋಗ ಅರಸುವುದು ಇತ್ಯಾದಿ ಲಕ್ಷಣಗಳಿರುವ ಹೆಣ್ಣನ್ನು 'ಗಂಡುಬೀರಿ' ಎಂದು ಈ ಸಾಂಪ್ರದಾಯಿಕ ಸಮಾಜ ಹಿಂದೆ ಅನ್ನುತ್ತಿತ್ತು.

ಪ್ಲೇಟೋ ಹೇಳಿದ್ದು, ಸ್ತ್ರೀಯಾಗಲಿ, ಪುರುಷನಾಗಲಿ ದೇಶಸೇವೆಗೆ ಸೇರಬಹುದು. ಆದರೆ ಪ್ಲೇಟೋನ ನ್ಯಾಯ ಪರಿಕಲ್ಪನೆಯಲ್ಲಿ ಸ್ತ್ರೀಗೆ ಆಸ್ತಿಯ ಹಕ್ಕು ಇಲ್ಲ ಮತ್ತು ಅವಳಿಗೆ ಮತದಾನದ ಅಧಿಕಾರವನ್ನು ಕೊಡುವುದಿಲ್ಲ ಎಂದಿದ್ದಾರೆ. ಹಾಗೂ ರಾಜನಾದವನು ಸ್ತ್ರೀಯನ್ನು ಹೊಂದಿರಬಾರದು ಎಂದಿದ್ದಾರೆ. ಹಾಗೂ ರಾಜನಾದವನು ಸ್ತ್ರೀಯನ್ನು ಹೊಂದಿರಬಾರದು ಎಂದಿದ್ದಾರೆ. ವಿವಾಹವಾಗುವುದರಿಂದ ಆಸ್ತಿಯನ್ನು ಹೊಂದುವುದರಿಂದ, ರಾಜನಿಗೆ ಇರಬೇಕಾದ ತೇಜೋ, ರಜೋಗುಣಗಳಿಗೆ ಧಕ್ಕೆ ಉಂಟಾಗುತ್ತದೆ ಎಂದಿದ್ದಾರೆ . ಸ್ತ್ರೀಗೆ ಸ್ಥಾನ-ಮಾನಗಳಿಲ್ಲದಿದ್ದರೂ ಆಕೆ ದೇಶ ಸೇವೆಗೆ ಸೇರಬಹುದು ಎಂದಿರುವ ಪ್ಲೇಟೋವಿನ ಕಲ್ಪನೆಯಲ್ಲಿಯೇ ಸ್ತ್ರೀಯು ರಾಜ್ಯಭಾರ ಮಾಡಲು ಯೋಗ್ಯಳು ಎಂಬ ಅಂಶವಿದೆ. ಈ ಮಾತನ್ನು ಪ್ಲೇಟೋ ಮರೆತಂತಿದೆ.

ಪ್ಲೇಟೋವಿನ ಪ್ರಕಾರ ತೇಜೋ, ರಜೋ, ತಾಮಸಗುಣಗಳಿದ್ದರೆ, (ರಾಜನಲ್ಲಿ) ಅದು ಆದರ್ಶರಾಜ್ಯವಾಗುತ್ತದೆ. ಹಾಗೆಯೇ ರಾಣಿಯಲ್ಲಿದ್ದರೂ ಅದು ಉತ್ತಮ ಆದರ್ಶ ರಾಜ್ಯವಾಗಬಹುದಲ್ಲವೆ? ಕೌಟಿಲ್ಯನ ಪ್ರಕಾರ ರಾಜ್ಯಭಾರ ಮಾಡಲು ಅಥವಾ ಒಬ್ಬ ಒಳ್ಳೆಯ ರಾಜನಾಗಲು, ರಾಜ, ಮಂತ್ರಿ, ಸೈನ್ಯ, ಕೋಶ, ಜನಪದ ಮಿತ್ರ, ಕೋಟೆ ಇವುಗಳಿದ್ದರೆ ಸಾಕು ಎಂದು ತಮ್ಮ ಮಂಡಲ ಸಿದ್ಧಾಂತದಲ್ಲಿ ಮಂಡಿಸಿದಾದರೆ. ಇಲ್ಲಿ ಸ್ತ್ರೀಯಾಗಲೀ, ಆಸ್ತಿಯ ವಿಷಯವಾಗಲೀ ಬಂದಿಲ್ಲ. ರಾಜ ಅಥವಾ ರಾಣಿಗೆ ಆಸ್ತಿ ಬೇಕು. ಅದೇ ಕೋಶ. ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದರೆ, ಜನಪದವನ್ನು ನೋಡಿಕೊಳ್ಳಲು ಸಾಧ್ಯ. ದೇಶದ ಅಭಿವೃದ್ಧಿಗೆ ಕೋಶಬೇಕೇಬೇಕು ಎಂಬುದು ಕೌಟಿಲ್ಯನ ವಾದ. ಅದೇನೇ ಇರಲಿ, ಇಲ್ಲ ಸ್ತ್ರೀಗೂ ರಾಜ್ಯಭಾರ ಮಾಡುವ ಅವಕಾಶವಿದೆ. ಒಬ್ಬ ರಾಜ ಅಥವಾ ರಾಣಿಗೆ ರಾಜಕೀಯ ನಾಯಕ-ನಾಯಕಿಗೆ ಈ ಮೇಲಿನ ಗುಣಗಳಿದ್ದರೆ ಸಾಕು. ಬೇರೆ ಯಾವುದೇ ಅಂಶವು ಪರಿಗಣನೆಗೆ ಬರುವುದಿಲ್ಲ.

ಇಂದಿನ, ಹಿಂದಿನ ಸಮಾಜದ ಏನೆಲ್ಲಾ ಕಟ್ಟಳೆಗಳಿದ್ದರೂ, ಅವುಗಳ ನಡುವೆಯೂ ಇಂದು ನಮ್ಮ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ತಮ್ಮ ಸಾಧನೆಯನ್ನು ಗುರುತಿಸಿಕೊಂಡಿದ್ದಾರೆ. ರಾಜಕೀಯ ಕ್ಷೇತ್ರ ತೆಗೆದುಕೊಂಡರೆ, ಇತಿಹಾಸದ ಪುಟಗಳನ್ನು ತಿರುವಿದಾಗ ಅನೇಕ ಮಹಿಳೆಯರು 'ರಾಜ್ಯಕ್ಕಾಗಿ' ತಮ್ಮ ಪ್ರಾಣವನ್ನೇ ಅರ್ಪಿಸಿ ಉತ್ತಮ ರಾಜ್ಯಭಾರ ಮಾಡಿರುವುದು ವ್ಯಕ್ತವಾಗಿದೆ. ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಇವರದು ಒಂದು ಕಾಲ. ಈಗ ಸಮಕಾಲೀನ ಮಹಿಳೆಯರದ್ದೇ ಇನ್ನೊಂದು ಕಾಲ. ಇಂದು ಮಹಿಳೆ ಬರೀ ಮತದಾನದ ಹಕ್ಕನ್ನು ಮಾತ್ರ ಹೊಂದಿರದೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾಜಕೀಯ ನಾಯಕಿಯೂ ಆಗಿದ್ದಾಳೆ. ಗಂಡ-ಮನೆ-ಮಕ್ಕಳು; ಅತ್ತೆ-ಮಾವ; ನಾದಿನಿ-ಮೈದುನಂದರ ಪ್ರೀತಿ ಮಮತೆಗಳನ್ನು ಉಳಿಸಿಕೊಂಡು, ರಾಜಕೀಯದಲ್ಲೂ ತನ್ನದೇ ಆದ ಮಹತ್ತರ ಪಾತ್ರವನ್ನು ನಿರ್ವಹಿಸಿದ್ದಾಳೆ. ಹಾಗೂ ನಿರ್ವಹಿಸುತ್ತಿದ್ದಾಳೆ.

ರಾಜಕೀಯವೆಂದರೆ, ಅಷ್ಟು ಸುಲಭದ ಮಾತಲ್ಲ, ರಾಜ್ಯನಿರ್ವಹಣೆಯು ಚಕ್ರವ್ಯೂಹವನ್ನು ಭೇದಿಸಿದಂತೆಯೇ ಸರಿ. ಅನೇಕ ಗಂಡಾಂತರಗಳೂ, ಜೀವಭಯ, ಪ್ರಜೆಗಳ ಸಮಸ್ಯೆಗಳ ನಿವಾರಣೋಪಾಯಗಳು ಇತ್ಯಾದಿ ಸಮಸ್ಯೆಗಳ ಎದುರಿನಲ್ಲಿಯೂ ಅವಳು ತನ್ನ ದೇಶವನ್ನು ಆಳಬೇಕಾಗುತ್ತದೆ. ರಾಜಕೀಯ ರಂಗದಲ್ಲಿ ಆಕೆ ಏನೆಲ್ಲಾ ಕಷ್ಟಗಳನ್ನು ಅನುಭವಿಸುತ್ತಾಳೆ, ಒಬ್ಬೊಬ್ಬ ಮಹಿಳೆ ಒಂದೊಂದು ಸಮಸ್ಯೆಗಳನ್ನು ತನ್ನದೇ ಆದ ರೀತಿಯಲ್ಲಿ ಎದುರಿಸಬೇಕಾಗುತ್ತದೆ. ಇವೆಲ್ಲದರ ನಡುವೆಯೂ ಆಕೆಯ 'ದೇಶಪ್ರೇಮ'ವನ್ನು ಮೆಚ್ಚಲೇ ಬೇಕು.

ಇತ್ತೀಚಿನ ರಾಜಕೀಯದಲ್ಲಿರುವ ಮಹಿಳೆಯರ ಸಂಖ್ಯೆ ಅಪಾರ. ಶ್ರೀಮತಿಯರಾದ ಸೋನಿಯಾ ಗಾಂಧಿ, ಮಮತಾ ಬ್ಯಾನರ್ಜಿ, ಶೀಲಾದೀಕ್ಷಿತ್ , ಮಾಯಾವತಿ ಮತ್ತು ಸುಷ್ಮಸ್ವರಾಜ್, ಜಯಲಲಿತ, ನಮ್ಮಲ್ಲಿನ ಲೀಲಾದೇವಿ ಆರ್. ಪ್ರಸಾದ್, ಬಿ.ಟಿ. ಲಲಿತಾನಾಯಕ್, ರಾಣಿಸತೀಶ್, ಮಾರ್ಗೆಟ್ ಆಳ್ವ ಹಾಗೂ ಈಗಿನ

ತೇಜಸ್ವಿನಿ ಶ್ರೀ ರಮೇಶ್ ..... ಹೀಗೆ ನಾಯಕಿಯರ ಪಟ್ಟಿ ಬೆಳೆಯುತ್ತಲೇ ಇದೆ. ರಾಜಕೀಯದಲ್ಲೂ ಮಹಿಳೆಯರು ಸಕ್ರಿಯವಾಗಿ ಪಾತ್ರ ವಹಿಸುತ್ತಿದ್ದಾರೆ ಎಂಬುದಕ್ಕೆ ಇವರೆಲ್ಲರೂ ನಿದರ್ಶನರಾಗಿದ್ದಾರೆ.

❑

೧೦

ಪಾಕಿಸ್ತಾನದಲ್ಲಿ ನಾನು : ಅಪರೂಪದ ಕೃತಿ

ಸತ್ಯಧ್ಯಾನ ಜೈನಾಪೂರ

ಶ್ರೀನಿವಾಸ ಕುಲಕರ್ಣಿಯವರ ಒಟ್ಟು ಸಾಹಿತ್ಯಕೃತಿಗಳ ಅಂತರಂಗವನ್ನು ಒಳಹೊಕ್ಕು ಅಧ್ಯಯನ ಮಾಡಿದಾಗ ಅವರ ಸೃಜನಶೀಲತೆಯ ಹಲವು ಫೈಲುಗಳು ವಿಶಾಲವಾಗಿ ಅನಾವರಣಗೊಳ್ಳುತ್ತವೆ. ಅವರ ಸಂವೇದನಾಶೀಲತೆಯ ದಟ್ಟತೆ , ವೈಶಾಲ್ಯತೆ ಮತ್ತು ಆಳ ಮನವರಿಕೆಯಾಗುತ್ತದೆ. ಅವರು ಪ್ರಧಾನವಾಗಿ ಜೀವನಕ್ಕೆ ಆಳವಾಗಿ ಸ್ಪಂದಿಸುವ 'ಮಾನವತಾವಾದ' ನೆಲೆಯ ಗಾಢ ಚಿಂತಕರಾಗಿ ಕಂಗೊಳಿಸುತ್ತಾರೆ. ಶೈಲಿಯ ದೃಷ್ಟಿಯಿಂದ ನವ್ಯ ಪಂಥದವರಾಗಿ ರಚಿಸಿದರೂ ಅವರಲ್ಲಿ ನವೋದಯದ ಚಿಂತನಶೀಲತೆ, ಕಾಳಜಿ, ಕಳಕಳಿ ಮತ್ತು ಮಾನವ ಕಲ್ಯಾಣದ ಒಳಿತು ಪ್ರಮುಖ ಗುಣಗಳಾಗಿವೆ. ಮೊದಲ ಕಥಾಸಂಕಲನ 'ಬಾಳು ನಂಜು ಬಯಕೆ ಮಂಜು'ದಿಂದ ಇತ್ತೀಚಿನ ಕಾದಂಬರಿ : 'ಅವನ ಸುತ್ತಲಿನ ಜಗತ್ತು' ವರೆಗೆ ಅವರನ್ನು ಸತತವಾಗಿ ಕಾಡಿರುವುದು ಮನುಷ್ಯ ಕೇಂದ್ರೀಕೃತವಾದ ಜಗತ್ತೇ ಆಗಿದೆ. ಅದುವೆ ಸಕಲ ಕೃತಿಗಳ ಮುಖ್ಯ ಪ್ರಾಣತಂತುವಾಗಿದೆ; ಅಂತರ್ವಾಹಿನಿಯಾಗಿದೆ. ವಿ.ಕೃ. ಗೋಕಾಕ್ ಮತ್ತು ಹೇಮಂತ ಕುಲಕರ್ಣಿಯವರಂತಹ ಹಿರಿಯ ಲೇಖಕರ ಪರಂಪರೆಯ ವಿಶಿಷ್ಟ 'ಛಾಪು' ಮತ್ತು ವಿಸ್ತರಣೆಯನ್ನು ಅವರಲ್ಲಿ ಕಾಣುತ್ತೇವೆ.

ಈ ಮಾನವೀಯ ನೆಲೆ ಅವರ ಕೃತಿಗಳಿಗೆ ಒಂದು ಅಪರೂಪದ ಮೆರುಗು ಮತ್ತು ಅನನ್ಯತೆ ಒದಗಿಸುತ್ತದೆ. ಮನುಷ್ಯನ ಸ್ವಭಾವದ ಉದಾತ್ತೀಕರಣದಲ್ಲಿ ನಂಬಿಕೆ ಇಟ್ಟ ವೈಚಾರಿಕತೆ ಇದು. ಸೃಷ್ಟಿಗೆ ಶ್ರೇಷ್ಠನಾಗಿ ವಿಕಸನ ಹೊಂದಿದ ಅವನಲ್ಲಿ ಉದಾತ್ತತೆ ಇರಬೇಕಾದ ಗುಣ ಎಂಬ ನೈತಿಕ ಸೂತ್ರ ಪಾಲಿಸುವ ecietic ಮೌಲ್ಯ ಅವರದು. ಈ ಉದಾತ್ತೀಕರಣದ ಶೋಧದಲ್ಲಿ ಅವರ ಕೃತಿಗಳ ಅಧ್ಯಯನ ಅರ್ಥಪೂರ್ಣ. ಮಾನವನ ಸಂಸ್ಕೃತಿಯ - ಅದರಲ್ಲೂ ಜೀವನ, ವಿಚಾರ ಮತ್ತು ಭಾಷೆಗಳನ್ನು ಕೇಂದ್ರವಾಗಿರಿಸಿಕೊಂಡು - ವಿಶ್ಲೇಷಣೆ ಮಾಡಿದ ಅವರ ಸಾಹಿತ್ಯ ಸೃಷ್ಟಿ ವೈಶಿಷ್ಟ್ಯಪೂರ್ಣವಾಗಿದೆ. ಒಟ್ಟು ಸಾಹಿತ್ಯದಲ್ಲಿ ಮೂಲ ಜೀವವಾಹಿನಿಯಾದ ಈ ಅಂಶ ಚಿಕ್ಕದಾದರೂ ಅಪರೂಪದ ಕೃತಿ 'ಪಾಕಿಸ್ತಾನದಲ್ಲಿ ನಾನು' ಇದರಲ್ಲಿ ದಟ್ಟವಾಗಿ ಅಭಿವ್ಯಕ್ತವಾಗಿದೆ.

ಕನ್ನಡದಲ್ಲಿ ಪ್ರವಾಸಕಥನ ವಿಪುಲವಾಗಿ ಬಂದರೂ ಅಮೇರಿಕೆ ಮತ್ತು ಯುರೋಪಗಳ ಪ್ರವಾಸದ ಬಗೆಗೆ ಅವು ಹೆಚ್ಚು. ಪಾಕಿಸ್ತಾನ ಪ್ರವಾಸದ ಮೇಲೆ ಕೃತಿಗಳು ಬಹಳೇ ವಿರಳ. ಇಲ್ಲವೆನ್ನುವಷ್ಟು ಕೊರತೆ. ಭಾರತೀಯ ಲೇಖಕನಲ್ಲಿ - ಅಷ್ಟೇ ಏಕೆ ಒಟ್ಟು ಭಾರತೀಯರ ಮನಃಪಟಲದಲ್ಲಿ - ದೇಶವಿಭಜನೆಯ ಚಿತ್ರ ಗಾಢವಾಗಿ ಅಚ್ಚೊತ್ತಿದೆ. ೧೯೪೭ರ ಮೊದಲು ನಮ್ಮ ದೇಶದ ಭಾಗವಾಗಿಯೇ ಇದ್ದು ನಮ್ಮಂತೆ ಬಾಳಿಬದುಕಿದ ಬಾಂಧವರು ರಾಜಕೀಯ ಮತ್ತು ಧಾರ್ಮಿಕ ಕುತಂತ್ರಕ್ಕೆ ಬಲಿಯಾಗಿ ನಿರ್ಮಾಣವಾದ ರಾಷ್ಟ್ರ ಪಾಕಿಸ್ತಾನ. ಉತ್ತರ ಭಾರತದ ದಿಲ್ಲಿ, ಆಗ್ರಾ, ಲಖನೌ, ಮೀರತ್, ಅಲೀಘರ್ ಮೊದಲಾದ ನಗರಗಳನ್ನು ನೋಡಿದ ಜನರಿಗೆ ಪಾಕಿಸ್ತಾನದ ನಾಗರೀಕರು ಬೇರೆಯಾಗಿ ತೋರಲು ಸಾಧ್ಯವೇ ಇಲ್ಲ. 'ನಮ್ಮ ಬಗೆಗೆ ಜನಸಾಮಾನ್ಯರಲ್ಲಿ ದ್ವೇಷವಾಗಲಿ, ಅಸೂಯೆಯಾಗಲಿ ಕಾಣಸಲಿಲ್ಲ' (ಪು : ೩೯) ಎಂದು ಲೇಖಕರು ದಾಖಲಿಸಿದಾದರೆ.

ಒಂದು ಸಮುದಾಯದ ವಿರುದ್ಧ ದ್ವೇಷ, ತಿರಸ್ಕಾರ, ವೈರತ್ವ ಮೊದಲಾದ ನಕಾರಾತ್ಮಕ ಅಂಶಗಳ ಮೇಲೆ ಉದಯಿಸಿ ಕಟ್ಟಲಾದ ದೇಶ ಪಾಕಿಸ್ತಾನ. ಇವುಗಳನ್ನು ಪೋಷಿಸುತ್ತಾ ಹೋಗುತ್ತಲಿರುವ ಅಂತರರಾಷ್ಟ್ರೀಯ ರಾಜಕೀಯ ಧೂರ್ತರು, ಲಾಭದಾಸೆಯ ಮಾಧ್ಯಮಗಳು ಇದಕ್ಕೆ ಕಾರಣ. ಅದು ಏನೇ ಇದ್ದರೂ ಲೇಖಕರಿಗೆ ಆ ದೇಶಕ್ಕೆ ದೂರದರ್ಶನದ ಪ್ರತಿನಿಧಿಯಾಗಿ ಕಾರ್ಯಾಗಾರಕ್ಕೆ ಆಯ್ಕೆಯಾದಾಗ ಸಂತೋಷವೇ ಆಗಿದೆ 'ಬೇಡ

ಎಂದು ನಿರಾಕರಿಸಿಲ್ಲ . ಕಾರಣ ಲೇಖಕರಲ್ಲಿ ಇರುವ ಬಾಳ ಮೌಲ್ಯ, ಮನುಷ್ಯನನ್ನು, ಅವನ ಮೂಲ ಪ್ರವೃತ್ತಿಯನ್ನು ಅರಿಯಬೇಕೆಂಬ 'ಶೋಧನಾ-ಕುತೂಹಲ' ಭಾವನೆಯೇ ಕಾರಣ. ಭಯ ಮತ್ತು ತಿರಸ್ಕಾರಗಳು ಮನಸ್ಸಿನಲ್ಲಿ ಮನೆಮಾಡಿದಾಗ ಮನುಷ್ಯ ಕುಗ್ಗುತ್ತಾನೆ. ಮಾನವ ಸಹಜ ಪ್ರೇಮ, ವಿಶ್ವಬಂಧುತ್ವ ಕಲ್ಪನೆ ಇದ್ದಾಗ ಮನುಷ್ಯ ಹಿಗ್ಗುತ್ತಾನೆ. ಆನಂದ ಪರವಶನಾಗುತ್ತಾನೆ. ಅಂತರಂಗದ ಮಾನಸ ಕ್ಷಿತಿಜ ತುಂ ತುಂ ತುಂಬಿರುತ್ತದೆ. ಪರಹಿತದ ವಿಚಾರ - ಚಿಂತನ - ಆವೃತವಾಗುತ್ತದೆ. ಮನಸ್ಸು ಭೇದಭಾವ ಅಂತರರಹಿತವಾಗುತ್ತದೆ. ಸುತ್ತಲಿನ ಪರಿಸರವನ್ನು ಅವನು ಹರಸುತ್ತಾನೆ. ಪ್ರಾರಂಭದಿಂದ ಪೂರ್ಣ ವಾಸ್ತವ್ಯದುದ್ದಕ್ಕೂ ಲೇಖಕರ ಪಕ್ವ ಮನೋಸ್ಥಿತಿ ಇದಾಗಿದೆ. ಈ ಅಂತರ - ಸೂತ್ರ ಕೃತಿಯನ್ನು ಬಂಧಿಸುತ್ತಾ ಹೋಗಿದೆ.

ಭಾಗ - ೨ರ ಶೀರ್ಷಿಕೆ ಗಮನಿಸಿ - 'ವಿದೇಶವೆನಿಸಿದ ಸ್ವದೇಶದಲ್ಲಿ' ಎಷ್ಟು ಅರ್ಥಪೂರ್ಣವಾಗಿದೆ ! ಶುದ್ಧ ಮನಸ್ಸು ಒಂದು ನಿರ್ಮಲ ಕನ್ನಡಿಯ ತರಹ. ಇದ್ದದ್ದನ್ನು ಪ್ರತಿಬಿಂಬಿಸುವ ಗುಣವುಳ್ಳದ್ದು . ನೈಜ ವಸ್ತುಸ್ಥಿತಿಯನ್ನು ಸ್ವಭಾವಜನ್ಯ ಗುಣಗಳನ್ನು ಬಿಂಬಿಸುವುದು.

ಭಾರತೀಯ ರಾಯಭಾರಿಯೂ ಕೂಡ ಹೇಗೆ ಸಂಶಯದ ವಾತಾವರಣದಲ್ಲಿ ಬದುಕುತ್ತಾನೆ ಎಂಬುದನ್ನು ಲೇಖಕರು ಅನುಭವಿಸುತ್ತಾರೆ. ಶಿಬಿರದ ವಿವರಗಳಾಗಲಿ, ಪ್ರವಾಸಿಗರ ಭೇಟಿಯ ಹಲವು ತಾಣಗಳ ಸ್ಥಿರಚಿತ್ರ ಮತ್ತು ವಿವರಗಳಾಗಲಿ ಕಿರು ಪುಸ್ತಕದ ಗೌಣಭಾಗ. ಇಂತಹ ಪುಸ್ತಕದಲ್ಲಿ ನಿರೀಕ್ಷಿತ ವಸ್ತು. ಆಶ್ಚರ್ಯವೆನಿಸುವುದಿಲ್ಲ.

ಈ ಚಿಕ್ಕ ಕೃತಿಯಲ್ಲಿ ಅವರಿಗೆ ಸ್ವಗತವಾಗಿ ಕಾಡಿದ ಮತ್ತು ಸಂವೇದನಾಶೀಲ ಚಿಂತಕರಿಗೆ ಅವರು ಜಾಗೃತಗೊಳಿಸಿದ ಪ್ರಜ್ಞಾಪ್ರವಾಹದ ಮುಖ್ಯ ಪ್ರಶ್ನೆ ಎಂದರೆ; ಒಬ್ಬ ಮನುಷ್ಯನನ್ನು ಕಂಡರೆ ಇನ್ನೊಬ್ಬನಿಗೆ ಏಕೆ ಆಗುವುದಿಲ್ಲ ? ಧರ್ಮ ಮನುಷ್ಯ - ಮನುಷ್ಯರ ದ್ವೇಷ, ತಿರಸ್ಕಾರ, ಹಿಂಸೆಯಂತಹ ಪಶುವೃತ್ತಿಯ ಭಾವನೆಗಳನ್ನು ಕೆರಳಿಸಬೇಕೆ ? ತಮ್ಮ ತಮ್ಮ ಧರ್ಮ ಪಾಲಿಸುವುದರಲ್ಲಿ, ಪ್ರೀತಿಸುವುದರಲ್ಲಿ ಏನೂ ತಪ್ಪಿಲ್ಲ. ಆದರೆ ಅದರ ಹೆಸರಿನಲ್ಲಿ ಇತಿಹಾಸದಲ್ಲಿ ನಡೆದ ರಕ್ತಪಾತ, ವರ್ತಮಾನದಲ್ಲಿ ಮಾನವ ಸಹಜವಾದ ಸಭ್ಯತೆ, ಸಂಸ್ಕೃತಿ ಮರೆತು ನಡೆಯುತ್ತಿರುವ ಹಿಂಸೆಯ ದಳ್ಳುರಿ ಮಾನವ ಲೋಕ ಎಂತಹ ವಿನಾಶದ ಅಂಚಿಗೆ ಒಯ್ಯಬಲ್ಲದೆಂದು ಯೋಚಿಸಿದಾಗ, ಕಂಡಾಗ, ಚಿಂತನಶೀಲರಿಗೆ ವಿದ್ಯುತ್ತಿನ ಆಗಾತ. ಚಿಂತಕರಾದ ಲೇಖಕರಿಗೆ ಅಂತರಾಳದಲ್ಲಿ ಅನಿರ್ವಚನೀಯ ನೋವು. ಕೃತಿ ಸದ್ಯದ ವರ್ತಮಾನಕ್ಕೆ ತೀರಾ ಪ್ರಸ್ತುತವಾಗುವುದು ಈ ಕಾರಣಗಳಿಂದ.

ತಾವು ಎಷ್ಟೇ ಉತ್ಸಾಹಭರಿತರಾಗಿ ಸಿದ್ಧತೆಗಳನ್ನು ನಡೆಸಿದಾಗಲೂ ಪಾಕಿಸ್ತಾನ ದೂತಾವಾಸದ ಅನುಭವ, ತಿಕೀಟು, ಡಾಲರು ದೊರಕಿಸಲು ಪಟ್ಟ ಪ್ರಯತ್ನ, ಹತಾಶೆ, ಆತಂಕಗಳನ್ನು ನಿರ್ಮಾಣಮಾಡುತ್ತವೆ. ಭಾರತೀಯರನ್ನು ಯಾವಾಗಲೂ ಸಂಶಯ ಮತ್ತು ವೈರಭಾವದಿಂದ 'ಬೆಂಬಿಡದ ಕಣ್ಣನ್ನು' ಲೇಖಕರು ತಮ್ಮ ಶಿಬಿರ ವಾಸ್ತವ್ಯದಲ್ಲಿ ಅನುಭವಿಸಿ ನೋವನ್ನು ವ್ಯಕ್ತಪಡಿಸುತ್ತಾರೆ. ಆದರೆ ಕೃತಿಯ ಹೆಚ್ಚಳವಿರುವುದು ಪಾಕಿಸ್ತಾನದ ಸಾಮಾನ್ಯ ಮನುಷ್ಯನಲ್ಲಿ ಭಾರತೀಯರಂತೆ ಇರುವ ಪ್ರೀತಿ, ಅಂತಃಕರಣ ಮೊದಲಾದ ಮಾನವೀಯ ಗುಣಗಳ ಅಸ್ತಿತ್ವದ ಪ್ರಾಂಜಲ ಮನಸ್ಸಿನ ಶೋಧ. 'ನೀವು ಆ ಹಿಂದುವಿನ ಜೊತೆಯಲ್ಲೇಕೆ ಇದ್ದೀರಿ, ಬೇಕಾದರೆ ಹೇಳಿ ಬೇರೆ ಮುಸಲ್ಮಾನ ಸಂಗಾತಿಯ ಜೊತೆಗಿರಲು ವ್ಯವಸ್ಥೆ ಮಾಡುವೆ' ಎಂದು ಹೋಟೆಲ ಮಾಲಿಕ ಹೇಳಿದಾಗ ಲೇಖಕರಿಗೆ ಕೆಲಕ್ಷಣ ಖಿನ್ನತೆ ಆವರಿಸಿದರೂ, 'ನಾನು ಈ ಹಿಂದುವಿನ ಜೊತೆ ಸಂತೋಷವಾಗಿದ್ದೇನೆ ನೀವೇನು ಯೋಚಿಸಬೇಡಿ' (ಪು : ೧೮) ಎಂಬ ಅವರ ಮಿತ್ರನ ನುಡಿಗಳು ಲೇಖಕನ ಮನದಾಳಕ್ಕಿಳಿದಿವೆ.

ಆಗಲೇ ಹೇಳಿದಂತೆ ಲೇಖಕರ ಮಾನವೀಯ ಸ್ಪಂದನ ಅವರ ಅನುಭವಕ್ಕೆ, ಧೋರಣೆಗೆ ಸದಾ ಔದಾರ್ಯತೆಯ ವಿಚಾರಧಾರೆಗೆ ವಿಶಾಲ ಹೃದಯದ ಸುವರ್ಣ ಚೌಕಟ್ಟು ಒದಗಿಸಿದೆ. 'ಪಾಕಿಸ್ತಾನದಲ್ಲಿ ಕಾಲಿಟ್ಟಾಗ ನನಗೆ ವಿದೇಶದಲ್ಲಿದ್ದೇನೆ ಎಂದು ಎನ್ನಿಸಲೇ ಇಲ್ಲ. ಸ್ವದೇಶದಲ್ಲಿಯ ಒಂದು ಭಾಗಕ್ಕೆ ಬಂದಂತೆ ಭಾಸವಾಯಿತು' (ಪು : ೧೦) ಎಂಬ ವಾಕ್ಯಗಳನ್ನು ಅವರ ಲೇಖನಿಯಿಂದ ಓದಿದಾಗ ಆಶ್ಚರ್ಯವೂ,

ಆನಂದವೂ ಒಂದೇ ವೇಳೆಗೆ ಉಂಟಾಗುತ್ತದೆ. ಪ್ರವಾಸದ ಆದಿಯಿಂದ ತಿರುಗಿ ಬರುವವರೆಗೂ ಕಾರ್ಯಾಗಾರ ತೃಪ್ತಿ ಮತ್ತು ವಿರಳವಾದ ಹೃದಯವಂತಿಕೆಯ ಅನುಭವದ ಕ್ಷಣಗಳನ್ನು ಬಿಟ್ಟರೆ ಲೇಖಕರಿಗಾದ ಕಹಿ ಅನುಭವ ಸಾಕಷ್ಟು ಇದ್ದರೂ ಮನಸ್ಸನ್ನು ಕಹಿಮಾಡಿಕೊಳ್ಳದೇ ಮಾನವರ ಮಧ್ಯದ ಈ ಅನಾವಶ್ಯಕ ದ್ವೇಷ, ಮತ್ಸರ ಮತ್ತು ವೈರತ್ವಗಳ ಬಗೆಗೆ ಹೆಚ್ಚು ಚಿಂತಾಕ್ರಾಂತರಾಗಿದ್ದಾರೆ. ಅಲ್ಲದೆ ಒಳ್ಳೆಯ ಸುಸಂಸ್ಕೃತ ಸಾಹಿತ್ಯಕ ವ್ಯಕ್ತಿತ್ವ ಗ್ರಾಹ್ಯವಾದುದನ್ನು ಸಿಹಿಯಾದುದನ್ನು ಮಾತ್ರ ಹಂಚಿಕೊಳ್ಳುತ್ತದೆ ಎಂಬುದೇ ಈ ಕೃತಿಯ ಅಪರೂಪತೆ.

ಪ್ರವಾಸ ಕಥನದ ನೆಪದಲ್ಲಿ ಅವರು ಇಲ್ಲಿ ಎತ್ತಿಕೊಂಡಿರುವ ಮಾನವನ ಮೂಲಭೂತ ಗುಣಗಳ ಸಾಮ್ಯ ಮತ್ತು ವೈಷಮ್ಯಗಳು ನಿಜವಾಗಿ ಮನಸ್ಸನ್ನು ಕಲಕುವಲ್ಲಿ ಯಸಸ್ವಿಯಾಗುತ್ತವೆ. ಚಿಂತನ ಪರತೆಯ ಕಡೆಗೆ ಪ್ರೇರೇಪಿಸುತ್ತವೆ.

ಭಾರತ-ಪಾಕಿಸ್ತಾನ ದೇಶಗಳ ಗಡಿಯ ವಾಘಾ ಮುಂತಾದ ಎಲ್ಲಾ ಸೈನ್ಯಕೇಂದ್ರಗಳ ಸಾಯಂಕಾಲದ ದೈನಿಕ ರಾಷ್ಟ್ರಧ್ವಜ ಇಳಿಸುವ ಪ್ರಕ್ರಿಯೆಗಳನ್ನು ಪ್ರತ್ಯಕ್ಷವಾಗಿ ಗಮನಿಸಿದಾಗ ಲೇಖಕರ ಮನದಾಳದ ಮಾತು ಅರ್ಥವಾಗುತ್ತದೆ. ಎರಡೂ ಕಡೆ ಸ್ಟೇಡಿಯಂನಂತಹ ವಿಶಾಲ ಸ್ಥಳದಲ್ಲಿ ಸಾವಿರಾರು ಜನ ಸೇರುತ್ತಾರೆ. ತಮ್ಮ ತಮ್ಮ ದೇಶಗಳ ಬಗೆಗೆ ದೇಶಭಕ್ತಿಯ ಘೋಷಣೆ ಕೂಗುತ್ತಾರೆ. ಅರ್ಥವಾಗುವ ಮಾತು ! ಆದರೆ ಅದರ ಹಿನ್ನೆಲೆಯಲ್ಲಿ ಅಪ್ರಕಟಿತ ಅಸಮಾಧಾನ, ಅತೃಪ್ತಿ, ದ್ವೇಷ ಮತ್ತು ವೈರತ್ವದ ದಟ್ಟ ಅಲೆಗಳ ಸುಳಿಗಾಳಿಯೂ ಸ್ಪರ್ಶಿಸದೇ ಇರುವುದಿಲ್ಲ. ಅತೀ ಉತ್ಸಾಹದ ವಾತಾವರಣ ಯಾವ ಕ್ಷಣದಲ್ಲಿ ಭುಗಿಲೆಂದು ಹಿಂಸೆಯ ಸ್ವರೂಪ ತಳೆಯಬಹುದು ಎಂಬ ಭಯ-ಆತಂಕದ ಕಾರ್ಮೋಡದ ಅನುಭವ ಸಾಧಾರಣವಾಗಿ ವೇಷಭೂಷಣಗಳಲ್ಲಿ ಸಾಮಾನ್ಯತೆಯಲ್ಲಿ, ಬಂಧುಬಾಂಧವರು ಎರಡೂ ಗಡಿಗಳಲ್ಲಿ ನೆಲೆಸಿ ಸಾಮಾನ್ಯ ಜೀವನ ನಡೆಸಿದಾಗ ಯಾವ ದುಷ್ಟ ಶಕ್ತಿಗಳು ಈ ವೈರತ್ವವನ್ನು ಪೋಷಿಸುತ್ತವೆ ಎಂಬುದು ಚಿದಂಬರ ರಹಸ್ಯವಾಗಿಯೇ ಉಳಿಯುತ್ತದೆ. ಪಶುವಿನಿಂದ ಮನುಷ್ಯನ ವಿಕಾಸವಾದರೂ ಪಶುತ್ವ ಮಾಯವಾಗಿರಲಿಕ್ಕಿಲ್ಲ! ಇಂತಹವೇ ಹಲವು ವಿಚಾರಗಳು ಲೇಖಕರನ್ನು ಈ ಕೃತಿಯಲ್ಲಿ ಕಾಡಿವೆ.

ಅಂತರಗಳು ಮನಸ್ಸಿನ ಕ್ಷಿತಿಜವನ್ನು ಕುಗ್ಗಿಸುತ್ತವೆ. ವಿಶಾಲ ಪ್ರೇಮ, ವಿಶ್ವ ಬಂಧುತ್ವಕ್ಕೆ ಮಾತ್ರ ಈ ವೈಮನಸ್ಸಿನ ಗೋಡೆಗಳನ್ನು ಕುಟ್ಟಿ ಪುಡಿಯಾಗಿಸುವ ಶಕ್ತಿ ಇದೆ. ಕಲುಷಿತ ಮನಸ್ಸು ಭ್ರಮಾಲೋಕದಲ್ಲಿ ವಿಹರಿಸುತ್ತದೆ ಎಂದು ಮನಃಶಾಸ್ತ್ರಜ್ಞರ ಅಭಿಪ್ರಾಯ.

ಲೇಖಕರು ಈ ಮೇಲಿನ ವಿಚಾರಗಳನ್ನು ನೇರವಾಗಿ ಎಲ್ಲಿಯೂ ಅಭಿವ್ಯಕ್ತಿಪಡಿಸಿಲ್ಲವಾದರೂ ಅವರ ಈ ಪುಟ್ಟಕೃತಿ ಈ ವಿಚಾರ ಸರಣಿಯನ್ನು ಜಾಗೃತಗೊಳಿಸುವುದೇ ಅದರ ಅಪರೂಪತೆ. ಭಾರತೀಯ ಶುದ್ಧಮನಸ್ಸು ತೆರೆದ ಆಗಸದಂತೆ ಇದ್ದರೂ ಪಕ್ಕದ ಬಂಧು ಸಮುದಾಯದ ಕೆಲ ಮನಸ್ಸುಗಳು ಅಶುದ್ಧ ಮನಸ್ಸಿನ ಕಾಯಿಲೆಯಿಂದ ಬಳಲುತ್ತಾ ಅವುಗಳನ್ನು ಪೋಷಿಸುತ್ತಲೇ ಹೋಗಬೇಕೆನ್ನುವ ಹಠವೇ ಎರಡುದೇಶಗಳಲ್ಲಿ ಇರುವ ವಾಸ್ತವ ದುರಂತ.

ಈ ವಿಶಿಷ್ಟಕೃತಿಯಿಂದ ಓದುಗರ ಮನೋಮಂಡಲದಲ್ಲಿ ಲೇಖಕರು ನಿಜವಾಗಿಯೂ ದೊಡ್ಡ ವೈಚಾರಿಕ ಬಿರುಗಾಳಿ ಎಬ್ಬಿಸಿದ್ದಾರೆ. ಮನುಷ್ಯನ ಮೂಲಭೂತ ಗುಣಗಳ ಅಸ್ತಿತ್ವ, ಒಳಿತು ಕೆಡಕುಗಳ ಬಗೆಗೆ ಎಚ್ಚರಿಸಿ ಔದಾರ್ಯತೆ ತೋರಿಸಿದ್ದಾರೆ . ಎರಡೂ ದೇಶಗಳು ಮತ್ತೆ ಏಕೆ ಕೂಡಬಾರದು ? ಎಂಬ ಕವಿಸಹಜ ಕನಸನ್ನು ಕೃತಿಯಲ್ಲಿ ವ್ಯಕ್ತಪಡಿಸುತ್ತಾರೆ. ಈ ಕೃತಿಯನ್ನು ಕೇವಲ ಒಂದು ಪ್ರವಾಸಿ ಸಾಹಿತ್ಯಕ ಕೃತಿಯ ರೂಪಕೊಡದೆ ಮಾನವೀಯ ಬಂಧುತ್ವ ಮತ್ತು ಸಾಂಸ್ಕೃತಿಕ ಅಧ್ಯಯನದ ಒಂದು ಮಾದರಿ ಕೃತಿಯನ್ನಾಗಿ ಮಾಡಿದ್ದಾರೆ. ಕೃತಿಯ ಒಟ್ಟು ನಿಲುವನ್ನು ಕಟ್ಟುವ ವೈಶಿಷ್ಟ್ಯ ಅಪರೂಪದ್ದಾಗಿದೆ, ಪುಸ್ತಕ ಇನ್ನೂ ವಿಸ್ತಾರವಾಗಿದ್ದರೆ ಮತ್ತೂ ಸ್ವಾರಸ್ಯಮಯವಾಗಿರುತ್ತಿತ್ತು ಎಂಬ ಕೊರತೆಯ ಭಾವನೆ ಆಳ ನೋಟದ ಓದುಗನಿಗೆ ಉಳಿದರೂ ಅಪರೂಪತೆಗೆ ಚ್ಯುತಿ ಬರುವುದಿಲ್ಲ.

□

ಆತ್ಮವಿಶ್ವಾಸ ಹೆಚ್ಚಿಸಿದ ಪಾಪಕ್ಕೆ ಕೊಲೆ ಪಾತಕಕ್ಕೇ ಕೈ ಹಾಕಿದ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರ ನುಡಿಮುತ್ತುಗಳು

ಈತ ೧೩ ವರ್ಷಗಳ ಹಿಂದೆ ಕೇವಲ ಪ್ರಾಧ್ಯಾಪಕ, ಅಬ್ಬಬ್ಬಾ ಎಂದರೆ ಒಬ್ಬ ಕವಿ, ಈಗ ಸರ್ಕಾರದ ದೊಡ್ಡ ಸ್ಥಾನಕ್ಕೆ ದಿಢೀರ್ ಏರಿ - ಇಳಿದಿದ್ದಾಗಿದೆ —ಈ ಎರಡು ವಾಕ್ಯಗಳ ನಡುವೆ ಮುಂದಿನ ಪತ್ರವನ್ನು ಇಟ್ಟು ಓದುವುದರಿಂದ, ಇವರ ಆಡಳಿತ ವೈಖರಿ ಎಂಥ ಅಪಾಯಕಾರಿ ಅಂಚನ್ನು ತಲಪಿತ್ತು ಎಂಬುದು ತಿಳಿದೀತು. "ಪುಸ್ತಕಮನೆ" ಎಂಬುದು ಬರಿಯ ಅಕ್ಷರಗಳಲ್ಲ, ಸಾಂಸ್ಕೃತಿಕ ಉಸಿರು ಎಂಬುದು ಕೇವಲ ಕರ್ನಾಟಕವೇ ಅಲ್ಲ, ಭಾರತದ ಕೆಲವರಿಗಾದರೂ ಗೊತ್ತಿರುವಂಥಾದ್ದು. ಅಂಥ ಸಾಂಸ್ಕೃತಿಕ ಉಸಿರನ್ನೇ ಅದುಮುವುದು ಕೊಲೆಪಾತಕತನವೆ ಆದೀತು. ಆ ಕಳಂಕ ಮುಂದಾದರು ಯಾರಿಗೂ ಬಾರದಿರಲಿ, ಅಂಟದಿರಲಿ.

—— ಸಂಸ್ಥಾಪಕ

ಪ್ರಿಯರಾದ ಗೆಳೆಯ ಹರಿಹರಪ್ರಿಯ ಅವರಿಗೆ ಸಿದ್ಧರಾಮಯ್ಯನ ಆತ್ಮೀಯ ನಮಸ್ಕಾರಗಳು.

ತಾವು ನನ್ನ ಪುಸ್ತಕಗಳ ಪ್ರದರ್ಶನವನ್ನು ಪುಸ್ತಕಮನೆಯಲ್ಲಿ ನಡೆಸಿದಂತೆ ತೋರಿರುವ ಪ್ರೀತಿಗೆ ಅಭಿಮಾನಕ್ಕೆ ನನ್ನ ಆತ್ಮೀಯ ಕೃತಜ್ಞತೆಗಳು. ಲಾಬಿ ಮಾಡದ ಹೊರತು ಗಮನಕ್ಕೆ ಬರುವುದು ಸಾಧ್ಯವೇ ಇಲ್ಲ ಎಂಬ ಈ ನಾತಾವರಣದ ನಡುವೆ ನಿಮ್ಮಂಥ ಗುಣಗ್ರಾಹಿಗಳು ನಮ್ಮ ಸಾಹಿತ್ಯ ಸಂದರ್ಭದ ನಡುವೆ ಆರೋಗ್ಯಕರ ವಾತಾವರಣ ಉಂಟುಮಾಡುವ ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿರುವುದು ನೆಮ್ಮದಿಯ ವಿಚಾರ. ಅಷ್ಟೇ ಅಲ್ಲ ನಮ್ಮಂಥವರಿಗೆ ಆತ್ಮವಿಶ್ವಾಸ ಹೆಚ್ಚುವಂತೆ ಮಾಡುವ ಸಂಗತಿ.

ನಿಮ್ಮ ಈ ಕಾರ್ಯ ಎಷ್ಟೋ ಕಡೆಗಣಿತರಾದ ಲೇಖಕರಿಗೆ ಆತ್ಮವಿಶ್ವಾಸ ಹುಟ್ಟಿಸುವ ಆರೋಗ್ಯಪೂರ್ಣ ಕಾರ್ಯ. ಇದರಲ್ಲಿ ನಿಮಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಮುದಾಯದಿಂದ ಸಿಗಬೇಕು.

ನಿಮಗೆ ಮತ್ತೊಮ್ಮೆ ನನ್ನ ಆತ್ಮೀಯ ಕೃತಜ್ಞತೆಗಳು.

3-1-1995
ತುಮಕೂರು

ವಂದನೆಗಳೊಂದಿಗೆ,

ನಿಮ್ಮವ,

ಎಸ್. ಜಿ. ಸಿದ್ಧರಾಮಯ್ಯ

ಕಳೆದ ಬಾರಿಯ ಸಂಪಾದಕೀಯ ಕುರಿತು ನಾಡಿನಾದ್ಯಂತ 'ಪುಸ್ತಕಮನೆ'ಯ ಅಭಿಮಾನಿಗಳು ನೊಂದು, ಗಾಬರಿಯಿಂದ ದೂರವಾಣಿಯ ಮೂಲಕ ಹಾಗೂ ಪತ್ರಗಳ ಮೂಲಕ ತಮ್ಮ ಸಾಂತ್ವನ ಹೇಳಿದ್ದಾರೆ.

"ಪುಸ್ತಕಮನೆ" ಇನ್ನಾರದೋ ಆಗಲು ಸಾಧ್ಯವಿಲ್ಲ: ಕಮಲಾ ಹಂಪನಾ

"ಪುಸ್ತಕಮನೆ" ಪ್ರಾರಂಭದ ದಿನದಿಂದ ಹಂಪನಾ ದಂಪತಿಗಳು ಜೊತೆಗಿದ್ದಾರೆ. ಅದಕ್ಕೂ ೨೨ ವರ್ಷಗಳ ಹಿಂದೆಯೇ, "ಜೀವನ" ಸಂಪಾದಕರಾಗಿ, ನನ್ನ ಪ್ರಾರಂಭಿಕ ಬರಹಗಳನ್ನು ಪ್ರಕಟಿಸಿ, ಲೇಖಕನನ್ನಾಗಿ ರೂಪಿಸಿದ್ದಾರೆ. ಹೀಗೆ ೧೯೭೦ ರಿಂದ ೨೦೦೮ ವರೆಗೂ ಬಲ್ಲ ಈ ಹಿರಿಯರ ಒಡನಾಟದಿಂದ ಈ ನಾಡು, ನುಡಿ, ಸಂಸ್ಕೃತಿ ತಿಳಿಯುವ ಭಾಗ್ಯ ಒದಗಿ ಬಂದಿದೆ. ಅಂಥವರ ಅಂತಃಕರಣ ಎಂದೆಂದೂ ಬದುಕಿನ ಸಿರಿಸಂಪತ್ತು, ಎಂಬುವುದಕ್ಕೆ ಈ ಪತ್ರವೇ ಸಾಕ್ಷಿ.

——— ಸಂಸ್ಥಾಪಕ

ಆತ್ಮೀಯ ಹರಿಹರಪ್ರಿಯರೇ,

ವಂದನೆಗಳು,

'ಪುಸ್ತಕಮನೆ' -ಯನ್ನು ನೋಡಿ ಯಾವುದೋ ಒಂದು ಭಾವ ಪ್ರಪಂಚದಲ್ಲಿ ತೇಲಿಹೋದೆನು.

'ಪುಸ್ತಕಮನೆ'-ಗೆ ತನ್ನದೇ ಆದ ಇತಿಹಾಸವಿದೆ, ಪರಂಪರೆ ಇದೆ, ಒಂದು ಪ್ರಭಾವಲಯವಿದೆ. ಸಂಸ್ಕಾರ, ಸಾಹಿತ್ಯ, ಸಂಸ್ಕೃತಿಯ ಒಂದು ಪರಿವೇಷವಿದೆ. ರಾಜಾಜಿನಗರದ ಆ ಪುಟ್ಟ 'ಪುಸ್ತಕಮನೆ', ನಾಡಿನ ಹಿರಿಯ, ಅತಿಗಣ್ಯ ವಿದ್ವಾಂಸರನ್ನೆಲ್ಲಾ ತನ್ನಲ್ಲಿಗೆ ಕರಸಿಕೊಂಡಿದೆ. ಸಾಹಿತ್ಯ, ಸಂಸ್ಕೃತಿ, ಸಂಗೀತ ಪ್ರಿಯರನ್ನೆಲ್ಲಾ ಕೈಬೀಸಿ ಬರಮಾಡಿಕೊಂಡಿದೆ. ಆ ಮನೆಯ ನೆನಪೇ ಒಂದು ಸಾಂಸ್ಕೃತಿಕ ಹಾಗೂ ಸಾಹಿತ್ಯಲೋಕವನ್ನು ತೆರೆದಿಡುತ್ತದೆ.

'ಪ್ರಜಾಸಾಹಿತ್ಯ' - ಪಕ್ಕಕ್ಕೆ ಸರಿದು 'ಪುಸ್ತಕಮನೆ'-ಗೆ ದಾರಿ ಮಾಡಿಕೊಟ್ಟದ್ದು ಸೂಕ್ತವಾಗಿದೆ, ಉಚಿತವಾಗಿದೆ. ನನಗೂ ಹಂಪನಾ ಅವರಿಗೂ ಅದು ಸಂತಸ ತಂದಿದೆ. ಅದಕ್ಕಾಗಿ ಹರಿಹರಪ್ರಿಯರನ್ನು ಅಭಿನಂದಿಸುವೆ.

'ಪುಸ್ತಕಮನೆ'- ಅದು ಎಂದೆಂದಿಗೂ ಹರಿಹರಪ್ರಿಯರದೆ. ಅದು ಇನ್ನಾರದೋ ಆಗಲು ಸಾಧ್ಯವಿಲ್ಲ. ಹರಿಹರಪ್ರಿಯ ಎಂದರೂ ಒಂದೇ, 'ಪುಸ್ತಕಮನೆ' ಎಂದರೂ ಒಂದೇ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು.

ವಂದನೆಗಳು,

೧೦-೦೩-೨೦೦೮ ವಿಶ್ವಾಸದೊಡನೆ,

ಬೆಂಗಳೂರು ಕಮಲಾ ಹಂಪನಾ